ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 26 ಭಾನುವಾರ 2023

43


₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 335 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ news@mysurumithra.com ಜಾಹೀರಾತು: ad@mysurumithra.com



ರಾಹುಲ್ ಗಾಂಧಿ ಸಂಸತ್ ಸದಸ್ಯತ್ವ ಅನರ್ಹಗೊಳಿಸಿದ ವಿಚಾರ

ಇದು ಉದ್ದೇಶಪೂರ್ವಕ; ಎಂಎಲ್‌ಸಿ ವಿಶ್ವನಾಥ್ ಆರೋಪ



ಮೈಸೂರು,ಮಾ.25(ಪಿಎಂ)–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಸಂಸತ್ ಸದಸ್ಯತ್ವ ಅನರ್ಹ ಗೊಳಿಸಿರುವ ಇಡೀ ಘಟನಾವಳಿ ಉದ್ದೇಶಪೂರ್ವಕ ಎಂದು ಆರೋಪಿಸಿದ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ರಾಜಕೀಯವಾಗಿ ರಾಹುಲ್ ಗಾಂಧಿಯವರನ್ನು ಮುಗಿಸಲು ಬಿಜೆಪಿ ನಡೆಸಿದ ಕುತಂತ್ರವಿದು ಎಂದರೂ ತಪ್ಪಿಲ್ಲ ಎಂದು ವಾಗ್ದಾಳಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಕಾಂಗ್ರೆಸ್ ಪಕ್ಷದ ಧುರೀಣ, ಸಂಸತ್ ಸದಸ್ಯ ರಾಹುಲ್ ಗಾಂಧಿಯವರು 2019ರಲ್ಲಿ ಕೋಲಾರದಲ್ಲಿ ಆಡಿದ ಮಾತಿಗೆ ಗುಜರಾತ್ ಸೂರತ್ ಕೋರ್ಟ್‌ನಲ್ಲಿ ಶಿಕ್ಷೆ ವಿಧಿಸಲಾಗಿದೆ. ಶಿಕ್ಷೆ ಪ್ರಕಟಗೊಂಡ ಬೆನ್ನಲೇ ಸಂಸದೀಯ ಮಂಡಳಿ ಸಭೆ ನಡೆಸಿ ಅವರ ಸಂಸತ್ ಸದಸ್ಯತ್ವ ಅನರ್ಹಗೊಳಿಸಲಾಗಿದೆ. ಈ ಮಾನಹಾನಿ ಪ್ರಕರಣದಲ್ಲಿ ಸಂಸತ್ ಸದಸ್ಯತ್ವ ಅನರ್ಹಗೊಳಿಸಲೆಂದೇ ಶಿಕ್ಷೆ ಪ್ರಮಾಣ ಹೆಚ್ಚಳ ಮಾಡಿದಂತಿದೆ ಎಂದು ದೂರಿದರು.

ಬಿಜೆಪಿಯವರು ಸಾಮಾಜಿಕ ಜಾಲತಾಣದಲ್ಲಿ ರಾಹುಲ್ ಗಾಂಧಿಯವರ ಬಗ್ಗೆ ಅದೆಷ್ಟೋ ಅಪಮಾನ ಮಾಡಿದ್ದಾರೆ. ಪಪ್ಪು, ದೇಶದ್ರೋಹಿ, ಬುದ್ಧಿಗೇಡಿ ಸೇರಿದಂತೆ ನಾನಾ ಬಗೆಯಲ್ಲಿ ಟೀಕಿಸಿದ್ದಾರೆ. ಇದಕ್ಕೆ ಉತ್ತರವಾಗಿ ರಾಹುಲ್ ಗಾಂಧಿಯವರು ಭಾರತ್ ಜೋಡೋ ಯಾತ್ರೆ ಮೂಲಕ 4 ಸಾವಿರ ಕಿ.ಮೀ. ನಡಿಗೆ ಮಾಡಿದರು. ಇದರಿಂದ ಅವರ ಖ್ಯಾತಿ ಹೆಚ್ಚಿತು. ಈ ಯಾತ್ರೆ ದೊಡ್ಡ ಇತಿಹಾಸ ಬರೆಯಿತು ಎಂದರು.

ಅನಂತರದಲ್ಲಿ ರಾಹುಲ್ ಗಾಂಧಿಯವರು ಲಂಡನ್‌ಗೆ ಹೋದರು. ಅಲ್ಲಿ ಭಾರತದ ಜನತಂತ್ರ ವ್ಯವಸ್ಥೆಗೆ ಆಗುತ್ತಿರುವ ಆಘಾತ ಕುರಿತು ಮಾತನಾಡಿದರು. ಇದು ನಮ್ಮವರಿಗೆ ಇಷ್ಟವಾಗಲಿಲ್ಲ. ಹಿಂತಿರುಗಿ ಬಂದಾಗ, ಸಂಸತ್‌ನಲ್ಲಿ ತಾವಲ್ಲಿ ಮಾತನಾಡಿದ್ದ ಬಗ್ಗೆ ಹೇಳಲೂ ಅವಕಾಶ ಕೊಡಲಿಲ್ಲ. ಒಬ್ಬ ಸಂಸತ್ ಸದಸ್ಯನ ಹಕ್ಕು ಕಾಪಾಡಲು ಲೋಕಸಭಾಧ್ಯಕ್ಷರೂ ಮುಂದೆ ಬರಲಿಲ್ಲ ಎಂದು ವಿಷಾದಿಸಿದರು.

ಕೊಡಗಿನಲ್ಲಿ ಸಿದ್ದರಾಮಯ್ಯರ ಮೇಲೆ ಆಕ್ರಮಣ ನಡೆಯಿತು. ವಿರೋಧ ಪಕ್ಷದ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಉನ್ನತ ಶಿಕ್ಷಣ ಸಚಿವರು ಮುಗಿಸಿ ಎಂದು ಹೇಳಿಕೆ ಕೊಟ್ಟರು. ಈ ಸಂಬಂಧ ಕನಿಷ್ಠ ಒಂದು ಪ್ರಕರಣ ಕೂಡ ದಾಖಲಾಗಲಿಲ್ಲ. ಸಿ.ಟಿ.ರವಿ, ಕೆ.ಎಸ್.ಈಶ್ವರಪ್ಪ ಆಡುವ ಮಾತುಗಳನ್ನು ಕೇಳಿದರೆ ಅವರನ್ನು ಅದೆಷ್ಟು ಬಾರಿ ಜೈಲಿಗೆ ಹಾಕಬೇಕೋ ಎಂದು ಲೇವಡಿ ಮಾಡಿದರು.

ಮೋದಿಯವರ ಆಡಳಿತ ಟೀಕಿಸಿದವರನ್ನು ದೇಶದ್ರೋಹಿ ಎನ್ನುತ್ತಾರೆ. ಅವರನ್ನು ಪ್ರೀತಿ ಮಾಡಿದವರು ದೇಶಪ್ರೇಮಿಗಳಾಗುತ್ತಾರೆ. ನೀರವ್ ಮೋದಿ ಸೇರಿದಂತೆ ದೇಶದ ಹಣ ಒತ್ತುಕೊಂಡು ಹೋದವರಿಗೆ ಕೇಂದ್ರ ಸರ್ಕಾರವೇ ಬೆಂಬಲವಾಗಿ ನಿಂತಿದೆ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮನೆಯಲ್ಲಿ ಕಂತೆ ಕಂತೆ ಹಣ ಸಿಕ್ಕರೂ ಅವರ ಬಂಧನ ಮಾತ್ರ ಆಗಿಲ್ಲ ಏಕೆ ಎಂದು ಪ್ರಶ್ನಿಸಿದರು. ರಾಹುಲ್ ಗಾಂಧಿಯಿಂದ ಟೀಕೆಗೆ ಒಳಗಾದವರು ದೂರು ಕೊಟ್ಟಿಲ್ಲ. ಮೂರನೇಯವರು ದೂರು ಕೊಟ್ಟಿದ್ದಾರೆ. ನ್ಯಾಯಾಂಗದ ಮೇಲೆ ದೇಶದ ಜನರ ವಿಶ್ವಾಸ ಕಳೆದು ಹೋದರೆ ಅನಾಹುತ ಆಗುತ್ತದೆ. ಬೀದಿ ಬೀದಿಯಲ್ಲಿ ಕೊಲೆಗಳಾಗುತ್ತವೆ. ಸಾಮಾನ್ಯರು ಬದುಕಲಾಗಲ್ಲ. ಬಲಾಢ್ಯರ ದಮನಕಾರಿ ನೀತಿ ವ್ಯಾಪಕವಾಗುತ್ತದೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು. ವಿಶ್ವನಾಥರ ಬೆಂಬಲಿಗ ರೇವಣ್ಣ ಗೋಷ್ಠಿಯಲ್ಲಿದ್ದರು.

ಕ್ರಿಮಿನಲ್ ಹಿನ್ನೆಲೆ: ಸಂಸತ್ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಿ

ಮೈಸೂರು, ಮಾ.25(ಪಿಎಂ)– ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಶೇ.54ರಷ್ಟು ಸಂಸತ್ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಂಸದೀಯ ಮಂಡಳಿಗೆ ಎಂಎಲ್‌ಸಿ ವಿಶ್ವನಾಥ್ ಆಗ್ರಹಿಸಿದರು.

ಶೇ.54ರಷ್ಟು ಸಂಸತ್ ಸದಸ್ಯರು ಕ್ರಿಮಿನಲ್‌ಗಳಾಗಿದ್ದಾರೆ. ರೇಪ್ ಸೇರಿದಂತೆ ನಾನಾ ಪ್ರಕರಣಗಳಲ್ಲಿ ಹಲವರು ಆರೋಪಿಗಳಾಗಿದ್ದಾರೆ. ಕೆಲವರು ಜೈಲಿಗೆ ಹೋಗಿ ಬಂದಿದ್ದಾರೆ. ಹಲವರು ನಿರೀಕ್ಷಣಾ ಜಾಮೀನು ತೆಗೆದುಕೊಂಡಿದ್ದಾರೆ. ಹೇಗೆ ರಾಹುಲ್ ಗಾಂಧಿ ವಿರುದ್ಧ ಕ್ರಮ ಜರುಗಿಸಿದ್ದಿರೋ ಅದೇ ರೀತಿಯಲ್ಲಿ ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಸಂಸತ್ ಸದಸ್ಯರ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ಸಂಸದೀಯ ಮಂಡಳಿಗೆ ಕೈ ಮುಗಿದು ಪ್ರಾರ್ಥನೆ ಮಾಡುವುದಾಗಿ ಸಂಸದ ಎ. ಹೆಚ್.ವಿಶ್ವನಾಥ್ ಹೇಳಿದರು.

ಇಂದು ಎನ್‌ಆರ್ ಕ್ಷೇತ್ರದ ಬಿಜೆಪಿ ಓಬಿಸಿ ಸಮಾವೇಶ

ಮೈಸೂರು,ಮಾ.25(ಪಿಎಂ)– ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ (ಓಬಿಸಿ) ಮೈಸೂರು ನಗರ ಘಟಕದ ವತಿಯಿಂದ ಮಾ.26ರಂದು ಎನ್‌ಆರ್ ಕ್ಷೇತ್ರದ ಬಿಜೆಪಿ ಓಬಿಸಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಮೋರ್ಚಾದ ನಗರಾಧ್ಯಕ್ಷ ಜೋಗಿ ಮಂಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ಗಾಯಿತ್ರಿಪುರಂ ಮುಖ್ಯರಸ್ತೆಯ ಸಾಯಿಬಾಬಾ ದೇವಸ್ಥಾನದ ಎದುರಿನ ಮೈದಾನದಲ್ಲಿ ಸಮಾವೇಶ ನಡೆಯಲಿದೆ. ಬಿಜೆಪಿ ಓಬಿಸಿ ಮೋರ್ಚಾದ ಕಾರ್ಯಕರ್ತರು, ಓಬಿಸಿ ಸಮುದಾಯದವರು ಸೇರಿದಂತೆ ಸಾವಿರಾರು ಮಂದಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.



ಸಮಾವೇಶದಲ್ಲಿ ಕಾಂಗ್ರೆಸ್, ಜೆಡಿಎಸ್ ತೊರೆದು ಹಲವರು ಬಿಜೆಪಿ ಸೇರಲಿದ್ದಾರೆ. ಅತಿಥಿಗಳಾಗಿ ಓಬಿಸಿ ಮೋರ್ಚಾದ ರಾಜ್ಯಾಧ್ಯಕ್ಷ ನೆ.ಲ.ನರೇಂದ್ರ ಬಾಬು, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಭಾಗವಹಿಸಲಿದ್ದಾರೆ. ರಾಜ್ಯ ಸಚಿವ ಸಂಪುಟ ಹಿಂದುಳಿದ ವರ್ಗಗಳ ಪರವಾಗಿದ್ದು, ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರ್ಪಡೆಗೊಳಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ ಎಂದು ತಿಳಿಸಿದರು.

ರಾಜಕೀಯವಾಗಿ ತೆರೆಮರೆಗೆ ಸರಿದಿದ್ದ ಎ.ಹೆಚ್.ವಿಶ್ವನಾಥ್ ಅವರಿಗೆ ಬಿಜೆಪಿ ರಾಜಕೀಯ ಶಕ್ತಿ ನೀಡಿದೆ. ಆದರೆ ಅವರು ಬಿಜೆಪಿಯನ್ನೇ ಪದೇ ಪದೆ ಟೀಕಿಸುತ್ತಿದ್ದು, ಅವರಿಗೆ ಸ್ವಾಭಿಮಾನವಿದ್ದರೆ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಿ ಬಳಿಕ ಬಿಜೆಪಿ ಟೀಕಿಸಲಿ ಎಂದು ಕಿಡಿಕಾರಿದರು. ಓಬಿಸಿ ಮೋರ್ಚಾ ನಗರ ಘಟಕದ ಪದಾಧಿಕಾರಿಗಳಾದ ಹರ್ಷ, ಗೋಪಾಲ್, ಅಭಿಲಾಷ್, ಸತೀಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಪೊಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಕರುಳಿನ ಕ್ಯಾನ್ಸರ್ ಪತ್ತೆಗೆ

ಕ್ಯಾಡ್–ಐ ತಂತ್ರಜ್ಞಾನದ ಎಂಡೋಸ್ಕೋಪಿ ಸೌಕರ್ಯ

ಜಪಾನ್ ಹೊರತುಪಡಿಸಿ ಮೈಸೂರಲ್ಲಿ ಭಾರತದ ಮೊತ್ತ ಮೊದಲ ಸೌಲಭ್ಯಕ್ಕೆ ಚಾಲನೆ

ಮೈಸೂರು, ಮಾ. 25(ಆರ್‌ಕೆ)– ಜಪಾನ್ ಹೊರತುಪಡಿಸಿ ಮೈಸೂರಿನ ಅಪೊಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಪರಿಚಯಿಸಲಾಗುತ್ತಿರುವ ಕೃತಕ ಬುದ್ಧಿಮತ್ತೆ ಆಧಾರಿತ ಎಂಡೋಸ್ಕೋಪಿ–ಕ್ಯಾಡ್–ಐ ತಂತ್ರಜ್ಞಾನಕ್ಕೆ ಇಂದು ಚಾಲನೆ ನೀಡಲಾಯಿತು.

ಕರುಳಿನ ಕ್ಯಾನ್ಸರ್ ಅನ್ನು ಆರಂಭದಲ್ಲೇ ಪತ್ತೆ ಮಾಡಿ ಚಿಕಿತ್ಸೆ ನೀಡಿ ಸರ್ಜರಿ ಇಲ್ಲದೇ ಗುಣಪಡಿಸುವ ಅತ್ಯಾಧುನಿಕ ತಂತ್ರಜ್ಞಾನ ಸೌಲಭ್ಯವನ್ನು ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲಿನಲ್ಲಿ ಇಂದು ಆಯೋಜಿಸಿದ್ದ ಎರಡು ದಿನಗಳ ಸಮ್ಮೇಳನದಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಡೀನ್ ಅಂಡ್ ಡೈರೆಕ್ಟರ್ ಡಾ. ಹೆಚ್. ಬಸವನಗೌಡಪ್ಪ ಚಾಲನೆ ನೀಡಿದರು.

ಫ್ಯೂಜಿಫಿಲಿಂ ಇಂಡಿಯಾ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಕ್ಯಾಡ್–ಐ ತಂತ್ರಜ್ಞಾನವನ್ನು 'ಜಿಐ ಅಪ್‌ಡೇಟ್–2023' ಅಂತರರಾಷ್ಟ್ರೀಯ ಗ್ಯಾಸ್ಟ್ರೋ ಎಂಟರಾಲಜಿ ಸಮ್ಮೇಳನದಲ್ಲಿ ಪರಿಚಯಿಸಲಾಯಿತು. ದೇಶವಿದೇಶಗಳಿಂದ 400ಕ್ಕೂ ಹೆಚ್ಚು ಗ್ಯಾಸ್ಟ್ರೋ ಎಂಟರಾಲಜಿಸ್ಟ್‌ಗಳು ಎರಡು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಮೈಸೂರಿನ ಅಪೊಲೋ ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ ಹಾಗೂ ಘಟಕದ ಮುಖ್ಯಸ್ಥ ಎನ್.ಜಿ. ಭರತೇಶ್ ರೆಡ್ಡಿ, ಗ್ಯಾಸ್ಟ್ರೋಎಂಟರಾಲಜಿ ಇನ್‌ಸ್ಟಿಟ್ಯೂಟ್ ಮುಖ್ಯಸ್ಥರಾದ ಪ್ರಧಾನ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ. ರಾಜಕುಮಾರ್ ಪಿ.ವಾದ್ವಾ, ಕನ್ಸಲ್ಟೆಂಟ್ ಚೀಫ್ ಗ್ಯಾಸ್ಟ್ರೋ ಇನ್‌ಟೆಸ್ಟಿನಲ್ ಸರ್ಜನ್ ಡಾ. ಎಸ್. ನೈರುತ್ಯ, ಹೈದರಾಬಾದ್‌ನ ಏಷಿಯನ್ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟರಾಲಜಿ ಅಧ್ಯಕ್ಷ ಪದ್ಮಭೂಷಣ ಡಾ. ಡಿ.ನಾಗೇಶ್ವರ ರೆಡ್ಡಿ, ಜಪಾನಿನ ಟಾಚಿಗಿಯ ಎಂಡೋಸ್ಕೋಪಿ ಸೆಂಟರ್ ಜಿಚಿ ಮೆಡಿಕಲ್ ಯೂನಿವರ್ಸಿಟಿ ಆಸ್ಪತ್ರೆ ನಿರ್ದೇಶಕರಾದ ಪ್ರಾಧ್ಯಾಪಕ ಪ್ರೊ. ಹಿರೊನೊರಿ ಯಮಮೊಟೋ, ಫ್ಯೂಜಿಫಿಲಿಂ ಇಂಡಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಧೀರಜ್ ಚೌಧುರಿ ಸೇರಿದಂತೆ ಹಲವರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ.


ಇದೇ ವೇಳೆ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಡಾ. ರಾಜಕುಮಾರ್ ವಾದ್ವಾ, ಕ್ಯಾಡ್–ಐ ತಂತ್ರಜ್ಞಾನದ ಎಂಡೋಸ್ಕೋಪಿ ವಿಧಾನದಿಂದ ಸಣ್ಣ ಕರುಳಿನ ಕ್ಯಾನ್ಸರ್ ಅನ್ನು ಆರಂಭದಲ್ಲೇ ಪತ್ತೆ ಮಾಡಿ ಆ ಹಂತದಲ್ಲೇ ಗಂಟನ್ನು ಹೊರತೆಗೆಯಬಹುದಾಗಿದ್ದು, ಈ ಚಿಕಿತ್ಸೆಯಿಂದ ಕ್ಯಾನ್ಸರ್ ದೊಡ್ಡ ಕರುಳು ಮತ್ತು ದೇಹದ ಇತರ ಭಾಗಕ್ಕೆ ಹರಡದಂತೆ ತಡೆಯಬಹುದಾಗಿದೆ ಎಂದರು.

ಡಾ. ನೈರುತ್ಯ ಮಾತನಾಡಿ, ವಿಶ್ವದ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರು ಲ್ಯಾಪ್ರೋಸ್ಕೋಪಿಕ್ ಬಾರಿಯಾಟ್ರಿಕ್, ಲಿವರ್ ಮತ್ತು ಪ್ಯಾಂಕ್ರಿಯಾಟಿಕ್ ಶಸ್ತ್ರಚಿಕಿತ್ಸೆಯಲ್ಲಿ ಹೊಸ ಅನ್ವೇಷಣೆ ಮಾಡಿದ್ದಾರೆ ಎಂದರು.

ಎನ್.ಜಿ. ಭರತೇಶ್ ರೆಡ್ಡಿ ಮಾತನಾಡಿ, ಮೆಷಿನ್ ಲರ್ನಿಂಗ್ ಆಧಾರಿತ ಪದ್ಧತಿಯಿಂದ ಕ್ಯಾನ್ಸರ್ ಮತ್ತು ಕ್ಯಾನ್ಸರ್‌ಕಾರಕವಲ್ಲದ ಗಾಯಗಳ ವ್ಯತ್ಯಾಸವನ್ನು ಗುರುತಿಸಬಹುದಾಗಿದ್ದು, ಇಂತಹ ತಂತ್ರಜ್ಞಾನಾಧಾರಿತ ಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ಆರಂಭಿಸಿರುವುದು ಹೆಮ್ಮೆ ಎನಿಸಿದೆ. ಇದರಿಂದ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳಿಗೆ ಆರಂಭದಲ್ಲೇ ಚಿಕಿತ್ಸೆ ನೀಡಿ, ಗುಣಪಡಿಸಬಹುದು ಎಂದು ಹೇಳಿದರು.



ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲಿನಲ್ಲಿ ಶನಿವಾರ ಆರಂಭವಾದ ಜಿಐ ಅಪ್‌ಡೇಟ್–2023 ಸಮ್ಮೇಳನದಲ್ಲಿ ಅಪೊಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಪರಿಚಯಿಸಿರುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆಧಾರಿತ ಎಂಡೊಸ್ಕೋಪಿ–ಕ್ಯಾಡ್–ಐ ಟೆಕ್ನಾಲಜಿ ಚಿಕಿತ್ಸೆಗೆ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಡೀನ್ ಅಂಡ್ ಡೈರೆಕ್ಟರ್ ಡಾ.ಹೆಚ್.ಬಸವನಗೌಡಪ್ಪ ಚಾಲನೆ ನೀಡಿದರು. ಜಪಾನಿನ ಎಂಡೋಸ್ಕೋಪಿ ಸೆಂಟರ್‌ನ ಪ್ರಾಧ್ಯಾಪಕ ಪ್ರೊ.ಹಿರೊನೊರಿ ಯಮಮೊಟೋ, ಚೀಫ್ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ.ರಾಜಕುಮಾರ್ ಪಿ.ವಾದ್ವಾ, ಎನ್.ಜಿ.ಭರತೇಶ್ ರೆಡ್ಡಿ, ಡಾ.ನರೇಶ್ ಭಟ್, ಡಾ.ಎನ್.ಎಸ್.ನಾಗೇಶ್ ಹಾಗೂ ಡಾ.ಎಸ್.ನೈರುತ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.



ಮಾಜಿ ಶಾಸಕ ವಾಸು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಮುಖಂಡರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಚಿತ್ರದಲ್ಲಿ ಮಾಜಿ ಕಾರ್ಪೊರೇಟರ್ ಪ್ರಶಾಂತ್‌ಗೌಡ, ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್ ಇನ್ನಿತರರನ್ನು ಕಾಣಬಹುದು.

ಇಂದು ಹೊಲಿಗೆ ಯಂತ್ರ ವಿತರಣೆ

ಮೈಸೂರು,ಮಾ.25–ಮೈಸೂರು ಅಂಬಾಸಿಡರ್‌ಸ್ ಲಯನ್ಸ್ ಸಂಸ್ಥೆಯ ವತಿಯಿಂದ ಮಾ.26ರ ಭಾನುವಾರ ದಂದು ಮೈಸೂರಿನ ವಿಜಯನಗರದ ಸ್ಪೋರ್ಟ್ಸ್ ಕ್ಲಬ್‌ನ ಸಭಾಂಗಣದಲ್ಲಿ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಮುಕ್ತ ಗಂಗೋತ್ರಿಯ ಸಹಾಯಕ ಪ್ರಾಧ್ಯಾಪಕರಾದ ಡಾ. ಜಾಹ್ನವಿ ಮಹಿಳಾ ಸಬಲೀಕರಣದ ಬಗ್ಗೆ ಉಪನ್ಯಾಸ ನೀಡುವರು. ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ಆರ್ಥಿಕ ಸಬಲತೆ ಮತ್ತು ಸ್ವಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳನ್ನು ನಿರುದ್ಯೋಗ ಮಹಿಳೆಯರಿಗೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಸ್ಥೆಯ ಅಧ್ಯಕ್ಷ ಲಯನ್ ಮಹಾಳ ಶಿವಕುಮಾರ್ ಅಧ್ಯಕ್ಷತೆ ವಹಿಸುವರು.



ಮೈಸೂರು ಅಗ್ರಹಾರದ ವಾರ್ಡ್ ನಂ.51ರ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು 16 ಮಂದಿ ಫಲಾನುಭವಿಗಳಿಗೆ ಪಾಲಿಕೆ ವತಿಯಿಂದ ಹೊಲಿಗೆ ಯಂತ್ರವನ್ನು ಶಾಸಕ ಎಸ್ ಎ ರಾಮದಾಸ್ ವಿತರಿಸಿದರು. ಈ ಸಂದರ್ಭದಲ್ಲಿ ವಾರ್ಡಿನ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಕೃಷ್ಣರಾಜ ಕ್ಷೇತ್ರದ ಮಾಜಿ ಅಧ್ಯಕ್ಷ ರಾಮಪ್ರಸಾದ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ವಾರ್ಡ್ ಅಧ್ಯಕ್ಷರಾದ ಮಂಜುನಾಥ್, ವೆಂಕಟೇಶ್ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.25–ತುರ್ತು ಕಾಮಗಾರಿ ನಿಮಿತ್ತ ಮಾ.26ರ ಭಾನುವಾರದಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿಜಯನಗರ 4ನೇ ಹಂತ, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ, ಬೆಳವಾಡಿ, ಬಸವನಪುರ, ಮರಟಿಕ್ಯಾತನಹಳ್ಳಿ, ಪಂಚಾಚಾರ್ಯ ಲೇಔಟ್, ಕೆ.ಹೆಮ್ಮನಹಳ್ಳಿ, ಲಿಂಗ ದೇವರಕೊಪ್ಪಲು, ಇಲವಾಲ, ಹೂಟಗಳ್ಳಿ ಕೆ.ಆರ್.ಎಸ್.ರೋಡ್, ಆದಿತ್ಯಾ ಬಡಾವಣೆ, ಎಸ್‌ಆರ್‌ಎಸ್ ಕಾಲೋನಿ, ಕೂರ್ಗಳ್ಳಿ, ಎನ್.ಹೆಚ್.ಬಿ ಕಾಲೋನಿ, ಶಾಹಿ ಗಾರ್ಮೆಂಟ್ಸ್, ಹೂಟಗಳ್ಳಿ, ಬೆಳವಾಡಿ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಗ್ರ್ಯಾಂಡ್ ಮೌರ್ಯ ಹೋಟೆಲ್, ರಿಲಾಯನ್ಸ್, ಮಾಸ್ ಫರ್ನೀಸ್, ಯಶಸ್ವಿನಿ ಕಲ್ಯಾಣ ಮಂಟಪ, ಸೌಪರ್ಣಿಕ ಅಪಾರ್ಟ್‌ಮೆಂಟ್ ಹಿನಕಲ್, ಎಸ್.ವಿ.ಇ.ಐ ಕಾಲೇಜು ಸುತ್ತಮುತ್ತ, ಜಟ್ಟಿಹುಂಡಿ ಸುತ್ತಮುತ್ತ, ಗೋಕುಲಂ 1ನೇ ಮತ್ತು 2ನೇ ಹಂತ, ಮಾದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿ ಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮೀಪುರಂ, ಸಿಎಫ್‌ಟಿ ಆರ್‌ಐ, ಡಿ.ಸಿ.ಹೌಸ್, ನರ್ಸ್ ಕ್ವಾಟ್ರಸ್, ಆಕಾಶವಾಣಿ, ಇಎಸ್‌ಐ ಆಸ್ಪತ್ರೆ, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಎಂಎಂಸಿ ಲೇಡಿಸ್ ಹಾಸ್ಟೆಲ್, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಬಾರ್ ಬೇ ಸುತ್ತಮುತ್ತ, ಕಮರಹಳ್ಳಿ, ಮಾಣಿಕ್ಯಪುರ, ದೊಡ್ಡಹಟ್ಟಿ ಹುಂಡಿ, ಮರಿಯ್ಯನಹುಂಡಿ, ಕಟ್ಟೆಹುಂಡಿ, ಶೆಟ್ಟಿ ನಾಯಕನಹಳ್ಳಿ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಶಾಲೆಗೆ ಹೋಗುತ್ತಿದ್ದ ಶಿಕ್ಷಕಿ ಸರ ಅಪಹರಣ

ಮೈಸೂರು,ಮಾ.25(ಆರ್‌ಕೆ)–ಶಾಲೆಗೆ ಹೋಗುತ್ತಿದ್ದ ಶಿಕ್ಷಕಿಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ತಿ.ನರಸೀಪುರ ರಸ್ತೆಯ ಎಸ್‌ಬಿಎಂ ನೌಕರರ ಬಡಾವಣೆ ಬಳಿ ಹಾಡಹಗಲೇ ಇಂದು ಬೆಳಗ್ಗೆ ಸಂಭವಿಸಿದೆ.



ಮೈಸೂರು ತಾಲೂಕು ವರುಣಾ ಹೋಬಳಿ ಮಹದೇಶ್ವರ ಲೇಔಟ್ ನಿವಾಸಿ ಪಾಲಾಕ್ಷ ಅವರ ಪತ್ನಿ ಪ್ರೇಮಕುಮಾರಿ 26 ಗ್ರಾಂ ಚಿನ್ನದ ಮಾಂಗಲ್ಯ ಸರ ಕಳೆದುಕೊಂಡವರು. ತಾಲೂಕಿನ ಹಡಜನ ಸರ್ಕಾರಿ ಶಾಲಾ ಶಿಕ್ಷಕಿಯಾದ ಪ್ರೇಮಕುಮಾರಿ, ಸ್ಕೂಟರ್‌ನಲ್ಲಿ ಶಾಲೆಗೆ ಹೋಗುತ್ತಿದ್ದಾಗ ಬೆಳಗ್ಗೆ ಸುಮಾರು 9.30 ಗಂಟೆಯಲ್ಲಿ ಬೈಕ್‌ನಲ್ಲಿ ಹಿಂದಿನಿಂದ ಬಂದ ಅಪರಿಚಿತ ವ್ಯಕ್ತಿಯೋರ್ವ ಎಸ್‌ಬಿಎಂ ನೌಕರರ ಬಡಾವಣೆ ಸಮೀಪ ನಿರ್ಜನ ಪ್ರದೇಶದಲ್ಲಿ ಅಡ್ಡಗಟ್ಟಿ ನನ್ನನ್ನು ಏಕೆ ಬಯ್ಯುತ್ತೀರಾ ಎಂದು ಹೇಳಿ ಗಮನ ಬೇರೆಡೆ ಸೆಳೆದು ಪ್ರೇಮಕುಮಾರಿ ಅವರ ಕೊರಳಿನಲ್ಲಿದ್ದ 40 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಸ್ಥಳದಲ್ಲಿ 14 ಗ್ರಾಂನಷ್ಟು ಒಂದೆಳೆ ಸರ ಬಿದ್ದಿದ್ದು, ಮಾಂಗಲ್ಯ ಸೇರಿದಂತೆ 26 ಗ್ರಾಂ ಸರ ಕಳ್ಳನ ಪಾಲಾಗಿದೆ ಎಂದು ಪ್ರೇಮಕುಮಾರಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಧಾವಿಸಿದ ವರುಣಾ ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ನಗರದ ಹೊರವಲಯದ ನಿರ್ಜನ ಪ್ರದೇಶಗಳಲ್ಲಿ ಹೊಂಚು ಹಾಕುತ್ತಿರುವ ದುಷ್ಕರ್ಮಿಗಳು, ಒಬ್ಬಂಟಿ ಮಹಿಳೆಯರು, ಯುವಕ–ಯುವತಿಯರನ್ನು ಟಾರ್ಗೆಟ್ ಮಾಡಿ ಹಣ, ಆಭರಣ, ಬೆಲೆ ಬಾಳುವ ಮೊಬೈಲ್‌ಗಳನ್ನು ದೋಚುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿಬರುತ್ತಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.3.2023 ಭಾನುವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್** : 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಲಲಿತಾ ಸಹಸ್ರನಾಮ ಪಾರಾಯಣ, ಶ್ರೀಚಕ್ರಾರ್ಚನೆ ಮತ್ತು ಶ್ರೀ ದಶಮಹಾವಿದ್ಯಾ ಆವರಣ ಪೂಜೆ, ಸಂಜೆ 5.30 ರಿಂದ ಶ್ರೀ ಲಲಿತಾ ಪಂಚಮಿ ಪ್ರಯುಕ್ತ ಶ್ರೀ ದಶಮಹಾವಿದ್ಯಾ ಹೋಮ ಮತ್ತು ಶ್ರೀ ಲಲಿತಾ ಮಹಾಯಾಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.
- **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು** : ನಿರ್ವಹಣೆಯ ಕ್ರಿಯಾತ್ಮಕ ಕ್ಷೇತ್ರಗಳಲ್ಲಿ ಉದಯೋನ್ಮುಖ ಸಮಸ್ಯೆಗಳು ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉದ್ಘಾಟನೆ: ವಿಜಯಪುರ ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿವಿ ಉಪಕುಲಪತಿ ಡಾ.ಬಿ.ಕೆ. ತುಳಸೀಮಾಲಾ, ಪ್ರಾಸ್ತಾವಿಕ ನುಡಿ: ಬೆಂಗಳೂರು ಚಾಣಾಕ್ಯ ವಿವಿ ಕುಲಪತಿ ಡಾ.ಯಶವಂತ ಡೋಂಗ್ರೆ, ಮುಖ್ಯ ಅತಿಥಿಗಳು: ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಉಪಸ್ಥಿತರು: ಶ್ರೀ ಶೈಲರಾಮಣ್ಣವರ್, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಸದಾಶಿವೇಗೌಡ, ಸ್ಥಳ: ಬಿ.ಸಿ.ಲಿಂಗಯ್ಯ ಹಾಲ್, ಕಾಲೇಜು ಆವರಣ, ಬೆಳಗ್ಗೆ 9ರಿಂದ.
- **ಸಿಗ್ಮಾ ಆಸ್ಪತ್ರೆ:** ಉಚಿತ ಕಿಡ್ನಿ ರೋಗ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಸರಸ್ವತಿಪುರಂ, ಬೆಳಗ್ಗೆ 9ರಿಂದ.
- **ಮೈಸೂರು ಲಿಟರರಿ ಅಸೋಸಿಯೇಷನ್** : ಡಾ. ಲತಾ ಮುತ್ತಣ್ಣ ಅವರ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ. ಕೆ.ಸಿ. ಬೆಳ್ಳಿಯಪ್ಪ, ಸ್ಥಳ: ಕಲ್ಪ ಕ್ಷೇತ್ರ ಸಭಾಂಗಣ, ವಿಜಯನಗರ 4ನೇ ಹಂತ, ಬೆಳಗ್ಗೆ 10.30ಕ್ಕೆ.
- **ಅನ್ವೇಷಣಾ ಸೇವಾ ಟ್ರಸ್ಟ್:** ಅರಸು ಪತ್ರಿಕೆ ವಿಶೇಷ ಸಂಚಿಕೆ ಲೋಕಾರ್ಪಣೆ, ಸಾಧಕರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಪ್ರಶಸ್ತಿ ಪ್ರದಾನ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ವೈ.ಎಸ್.ಸಿದ್ದೇಗೌಡ, ಅಧ್ಯಕ್ಷತೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಉಪಸ್ಥಿತರು: ಚುಟುಕು ರತ್ನ ಡಾ.ಸಿಪಿಕೆ, ಟ್ರಸ್ಟ್ ಸಂಸ್ಥಾಪಕ ಅಮರ್‌ನಾಥ್‌ರಾಜೇ ಅರಸ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ದೇವರ ದಾಸಿಮಯ್ಯ ಜಯಂತಿ, ಸಾನ್ನಿಧ್ಯ : ದಾವಣಗೆರೆ ಜಿಲ್ಲೆ ತುಂಬಿನ ಕಟ್ಟೆಯ ಶ್ರೀ ಗುರು ಮಾರ್ಕಂಡೇಶ್ವರ ಪದ್ಮಶಾಲಿ ಗುರುಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 11ಕ್ಕೆ.
- **ಓಷನ್@9 ಗ್ರೂಪ್ ಕಂಪನಿ** : ಹೊಸ ಕಚೇರಿ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮಹಾರಾಣಿ ಶ್ರೀಮತಿ ತ್ರಿಷಿಕಾ ಕುಮಾರಿ ಒಡೆಯರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಎಂ. ಶಿವಣ್ಣ, ಮಾಜಿ ಶಾಸಕ ವಾಸು, ಬಿಜೆಪಿ ಮುಖಂಡ ಕವೀಶ್‌ಗೌಡ, ಮೆಲ್ಲಹಳ್ಳ ಮಹದೇವಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಸ್ಥಳ: 450, ನ್ಯೂ ಕಾಂತರಾಜ ಅರಸ್ ರಸ್ತೆ, ಟಿ.ಕೆ. ಬಡಾವಣೆ, ಬೆಳಗ್ಗೆ 11.45ಕ್ಕೆ.
- **ಸಪ್ತಸ್ವರ ಬಳಗ ಟ್ರಸ್ಟ್, ಸಂವಹನ : ಪ್ರಕಾಶಕರು** : ಪ್ರೊ. ಎಸ್. ಶಿವಾಜಿ ಜೋಯಿಸ್ ಅವರ ನಾಲ್ಕು ಬೌದ್ಧ ಕೃತಿಗಳ ಲೋಕಾರ್ಪಣೆ ಸಮಾರಂಭ, ಶ್ರೀ ಪಂಚಾಕ್ಷರಿ ಗವಾಯಿಗಳವರ ಪುಣ್ಯಸ್ಮರಣೆಯ ಸಂಗೀತ ನೃತ್ಯೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ ಮತ್ತು ಪುಸ್ತಗಳ ಲೋಕಾರ್ಪಣೆ : ಹಿರಿಯ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಮುಖ್ಯ ಅತಿಥಿಗಳು : ಸಂಸದ ವಿ. ಶ್ರೀನಿವಾಸ ಪ್ರಸಾದ್, ಡಾ. ಕಲ್ಯಾಣಸಿರಿ ಭಂತೇಜಿ, ಪುಸ್ತಕಗಳನ್ನು ಕುರಿತು : ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಉಪಸ್ಥಿತರು : ಡಿ.ಎನ್. ಲೋಕಪ್ಪ, ಟ್ರಸ್ಟ್ ಅಧ್ಯಕ್ಷ ಡಾ. ಸಿ. ಸಿದ್ದೇಶ್, ಪ್ರೊ. ಪ್ರಭುಸ್ವಾಮಿ, ಪ್ರೊ. ಎಚ್.ಜಿ. ಕೃಷ್ಣಪ್ಪ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕೃಷ್ಣಮೂರ್ತಿ ಹನೂರು, 6.15 ಗೀತಾರಾಧನ, 6.35 ಬದುಕುಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಬಿರ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ.ಹೆಚ್.ಎಂ.ಕಲಾಶ್ರೀ, 9.40 ನಮ್ಮ ಆರೋಗ್ಯ "ಬೆನ್ನು ನೋವು–ಕಾರಣಗಳು ಮತ್ತು ಪರಿಹಾರ" ಕುರಿತು ಮೇಜರ್ ಡಾ.ಗಿರೀಶ್ ಎಸ್. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಮುಖಾಮುಖಿ, "ಸೆಂಟ್ರಲ್ ಸಿಲಬಸ್ ಉಳ್ಳ ಕೇಂದ್ರ ಸರ್ಕಾರದ ಶಾಲೆಗಳಿಗೆ ಪ್ರವೇಶ" ಕುರಿತು ತಿಳಿಸಿಕೊಡಲಿದ್ದಾರೆ ಕನಿಕಾ ಹೆಚ್.ಆರ್. ಮಂಡ್ಯ, ಭಾಗವಹಿಸುವ ಮಕ್ಕಳು–ಮನೋಜ್ ಮತ್ತು ಬಿ.ಮೋಹನ್‌ಕುಮಾರ್, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.30 ದೇವರನಾಮ–ಡಾ.ರಾಜ್‌ಕುಮಾರ್, ಪರಮೇಶ್ವರ ಹೆಗಡೆ, 12.45 ಜನಪದ ಸಂಗೀತ– ಮಹದೇವಮ್ಮ ಮತ್ತು ತಂಡ, 1.20 ಭಾವಗೀತೆಗಳು–ಸೀಮಾ ರಾಯ್ಕರ್, 3.45 ಯಕ್ಷಗಾನ ತಾಳ ಮದಲೆ, ಪ್ರಸಂಗ– ಸೀತಾ ಪರಿತ್ಯಾಗ, ಪ್ರಸ್ತುತಿ– ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಕಲಾವಿದರು, 6.50 ಕೃಷಿರಂಗ, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗ ಗೀತೆಗಳು–ಸಾಹುಕಾರ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಜಿ. ಬೇಬಿ–ಹಾಡುಗಾರಿಕೆ

- **ಮಾತಾ ಸುಗಮ ಸಂಗೀತ ವೃಂದ** : ಕೆಪಿಸಿಸಿ ಕಾರ್ಯಾಧ್ಯಕ್ಷ ದಿವಂಗತ ಆರ್. ಧ್ರುವನಾರಾಯಣ್ ಸ್ಮರಣಾರ್ಥ ನುಡಿನಮನ ಕಾರ್ಯಕ್ರಮ, ಉಪಸ್ಥಿತರು : ಮಾಜಿ ಜಿಪಂ ಅಧ್ಯಕ್ಷ ಕೆ. ಮರೀಗೌಡ, ಮುಖಂಡರಾದ ಅಣ್ಣಯ್ಯ, ನರಸಿಂಹಮೂರ್ತಿ, ಪ್ರದೀಪ್ ಚಂದ್ರ, ಮೈಕ್ ಪ್ರಕಾಶ್, ವೆಂಕಟೇಶ್‌ಮೂರ್ತಿ, ಸ್ಥಳ: ಶಕ್ತಿ ಬಡಾವಣೆಯ ಪಾರ್ಕ್ ಬಳಿ, ರಾಜಕುಮಾರ್ ರಸ್ತೆ, ಸಂಜೆ 5ಕ್ಕೆ.
- **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಮೈಸೂರು ತಾಲೂಕು** : ಶರಣ ದೇವರ ದಾಸಿಮಯ್ಯ ಜಯಂತಿ, ದತ್ತಿ ಉಪನ್ಯಾಸ, ಭಜನೆ ಹಾಗೂ ವಚನ ಗಾಯನ ಸಮಾರಂಭ, ಸಾನ್ನಿಧ್ಯ : ದೇವಲಾಪುರದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಜಡೆಸ್ವಾಮೀಜಿ, ದತ್ತಿ ಉಪನ್ಯಾಸ : ಹಿರಿಯ ಸಾಹಿತಿ ಎಸ್. ಬಸವರಾಜ್ ದೊಡ್ಡಟ್ಟಿ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಸ್ಥಳ: ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ದೇವಲಾಪುರ, ಸಂಜೆ 5.30ಕ್ಕೆ.
- **ವ್ಯವಸ್ಥಾಪಕರು** : ಹಿರಿಯ ನಾಗರಿಕರಿಗೆ ಗೌರವ ಸಮರ್ಪಣೆ, ಉಪಸ್ಥಿತರು : ಮೇಯರ್ ಶಿವಕುಮಾರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ಹ್ಯಾಪಿಮ್ಯಾನ್ ಪಾರ್ಕ್, ಸಂಜೆ 5.30ಕ್ಕೆ.
- **ಗಣಪತಿ ಸೇವಾ ಮಂಡಳಿ ಟ್ರಸ್ಟ್:** ಶ್ರೀ ರಾಮನವಮಿ ಕಾರ್ಯಕ್ರಮಗಳು, ಸಂಜೆ 6ರಿಂದ ಸಿದ್ಧಿ ವಿನಾಯಕ ಭಜನಾ ಮಂಡಳಿ ತಂಡದವರಿಂದ ಭಜನೆ, ಸಂಜೆ 6.30ರಿಂದ ವಿದ್ವಾನ್ ಆರ್.ಕೆ.ಪದ್ಮನಾಭ ರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಚಾರಿಟಬಲ್ ವಿಶ್ವಸ್ಥ ಮಂಡಳಿ** : ಶ್ರೀರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮ, ವೈಣಿಕರತ್ನ ವಿದ್ವಾನ್ ಆರ್.ಕೆ. ಪದ್ಮನಾಭ ಮತ್ತು ವೃಂದದವರಿಂದ ವೀಣಾವಾದನ, ಸ್ಥಳ: ಸಮಾಜದ ಆವರಣ, ಸಂಜೆ 6ಕ್ಕೆ.
- **ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್** : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಅಧ್ಯಕ್ಷತೆ : ಪಾಲಿಕೆ ಸದಸ್ಯ ಜಿ.ಎಸ್. ಸತ್ಯರಾಜ್, ಮುಖ್ಯ ಅತಿಥಿಗಳು : ಮಾಜಿ ಶಾಸಕ ಇ. ಮಾರುತಿರಾವ್ ಪವಾರ್, ಸ್ಥಳ: ಕೆಕೆಎಂಪಿ ಆವರಣ, ಗಾಯತ್ರಿಪುರಂ, ಸಂಜೆ 6ಕ್ಕೆ.
- **ಶ್ರೀ ಕಾಶೀಮಠದ ಶ್ರೀರಾಮಮಂದಿರ** : ವಿಶೇಷ ಉತ್ಸವಗಳು, ಕು. ಬೃಂದಾ ಕಾಮತ್ ಮತ್ತು ತಂಡದವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಶ್ರೀರಾಮಪೇಟೆ, ಸಂಜೆ 6.15 ರಿಂದ.
- **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ** : ಶ್ರೀ ರಾಮನವಮಿ ಸಂಗೀತೋತ್ಸವ, ಬೆಳಗ್ಗೆ 10ರಿಂದ ವಿದುಷಿ ಹರಿಣಿ ರಮೇಶ್ ಅವರಿಂದ ಗಾಯನ, ವಿದ್ವಾನ್ ಎಂ. ಕೇಶವ–ಪಿಟೀಲು, ವಿದ್ವಾನ್ ಮಲ್ಲೋಲ ಸಿಂಹ–ಮೃದಂಗ, ಸಂಜೆ 6.15ರಿಂದ ಡಾ. ಎನ್.ಜೆ. ನಂದಿನಿ ಅವರಿಂದ ಗಾಯನ, ಡಾ. ಜ್ಯೋತ್ಸ್ನ ಶ್ರೀಕಾಂತ್–ಪಿಟೀಲು, ವಿದ್ವಾನ್ ತುಮಕೂರು ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15 ರಿಂದ.
- **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ** : ಮೈಸೂರು ರಂಗ ಹಬ್ಬ, ಮೈಸೂರು ನಿರಂತರ ತಂಡದಿಂದ ವಾರಸುದಾರ ನಾಟಕ ಪ್ರದರ್ಶನ, ರಚನೆ : ಜಯರಾಮ್ ರಾಯಪುರ, ನಿರ್ದೇಶನ : ಪ್ರಸಾದ್ ಕುಂದೂರು, ಸ್ಥಳ: ಕಿರು ರಂಗ ಮಂದಿರ, ಸಂಜೆ 6.30ಕ್ಕೆ.
- **ನಟನ ರಂಗಶಾಲೆ** : ನಟನ ರೆಪರ್ಟರಿ ತಂಡದಿಂದ ಕಣಿವೆಯ ಹಾಡು ನಾಟಕ ಪ್ರದರ್ಶನ, ನಿರ್ದೇಶನ : ಶ್ರೀಪಾದ ಭಟ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಮಾರ್ಚ್ 26 ಭಾನುವಾರ 2023

ಸಂಪುಟ: 43 | ಸಂಚಿಕೆ: 335 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ


ವರುಣಾದಿಂದ ಸಿದ್ದರಾಮಯ್ಯ, ಕನಕಪುರದಿಂದ ಡಿ.ಕೆ.ಶಿವಕುಮಾರ್, ದೇವನಹಳ್ಳಿಯಿಂದ ಕೆ.ಹೆಚ್.ಮುನಿಯಪ್ಪ, ಕೊರಟಗೆರೆಯಿಂದ ಡಾ.ಪರಮೇಶ್ವರ್, ಬಬಲೇಶ್ವರದಿಂದ ಎಂ.ಬಿ.ಪಾಟೀಲ್, ಟಿ.ನರಸೀಪುರದಿಂದ ಡಾ.ಮಹದೇವಪ್ಪ ಸ್ಪರ್ಧೆ

ಬೆಂಗಳೂರು, ಮಾ.25(ಕೆಎಂಶಿ)–ರಾಜ್ಯ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, (ವರುಣಾ), ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ (ಕನಕಪುರ), ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ (ದೇವನ ಹಳ್ಳಿ), ಮಾಜಿ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ (ಕೊರಟಗೆರೆ), ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್ (ಬಬಲೇಶ್ವರ) ಸೇರಿದಂತೆ ವಿವಾದವಿಲ್ಲದ ಕ್ಷೇತ್ರಗಳಿಗೆ ಎಐಸಿಸಿ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಸಿದ್ದರಾಮಯ್ಯ ಸ್ಪರ್ಧೆಗಿಳಿಯಬೇಕೆಂದಿದ್ದ ಕೋಲಾರ, ಬಾದಾಮಿ, ಕಡೂರು ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮ ಗೊಳಿಸಿಲ್ಲ. 93ರ ಹಿರಿಯ ಶಾಮನೂರು ಶಿವಶಂಕರಪ್ಪ ದಾವಣಗೆರೆ ದಕ್ಷಿಣದಿಂದ ಕಣಕ್ಕಿಳಿಯುತ್ತಿದ್ದರೆ 86ರ ಮುನಿಯಪ್ಪ ದೇವನಹಳ್ಳಿಯಿಂದ ವಿಧಾನಸಭೆ ಪ್ರವೇಶಿಸಲು ಕಾಂಗ್ರೆಸ್ ಅವಕಾಶ ಮಾಡಿಕೊಟ್ಟಿದೆ.

ಹಾಲಿ ಶಾಸಕ ಡಾ. ಯತೀಂದ್ರ ತಮ್ಮ ತಂದೆ ಸಿದ್ದರಾಮಯ್ಯರಿಗಾಗಿ ವರುಣಾ ಕ್ಷೇತ್ರ ಬಿಟ್ಟುಕೊಟ್ಟಿದ್ದರೆ, ಟಿ.ನರಸೀಪುರದಲ್ಲಿ ಸುನೀಲ್ ಬೋಸ್ ತಮ್ಮ ತಂದೆ ಮಹದೇವಪ್ಪಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಸುನೀಲ್ ಬೋಸ್ ಟಿ.ನರಸೀಪುರದಲ್ಲೂ, ಮಹದೇವಪ್ಪ ನಂಜನಗೂಡು ಕ್ಷೇತ್ರದಲ್ಲಿ ಕಣಕ್ಕಿಳಿಸಲು ಪಕ್ಷ ಮೊದಲು ತೀರ್ಮಾನಿಸಿತ್ತು. ಆದರೆ ಕಾಂಗ್ರೆಸ್ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಇತ್ತೀಚೆಗೆ ನಿಧನರಾಗಿದ್ದು, ಅವರ ಪುತ್ರ ದರ್ಶನ್ ಧ್ರುವನಾರಾಯಣ್‌ಗೆ ನಂಜನಗೂಡಿನಲ್ಲಿ ಸ್ಪರ್ಧಿಸಲು ಅವಕಾಶ ಮಾಡಿ ಕೊಡಲಾಗಿದೆ. ಕುಟುಂಬ ರಾಜಕಾರಣಕ್ಕೂ ಕಾಂಗ್ರೆಸ್‌ನಲ್ಲಿ ಅವಕಾಶ ನೀಡಿದ್ದು, ನಾಲ್ಕು ಕುಟುಂಬದವರು ತಂದೆ–ಪುತ್ರ ಇಲ್ಲವೆ ಪುತ್ರಿಯರಿಗೆ ಟಿಕೆಟ್ ಪಡೆದಿದ್ದಾರೆ. ಶಾಮನೂರು ಶಿವಶಂಕರಪ್ಪ ದಾವಣಗೆರೆ ದಕ್ಷಿಣದಿಂದ ಸ್ಪರ್ಧಿಸುತ್ತಿದ್ದರೆ, ಅವರ ಪುತ್ರ ಎಸ್.ಎಸ್.ಮಲ್ಲಿಕಾರ್ಜುನ್ ದಾವಣಗೆರೆ ಉತ್ತರದಿಂದ ಕಣಕ್ಕಿಳಿಯಲು ಪಕ್ಷ ಟಿಕೆಟ್ ನೀಡಿದೆ.

● 6ನೇ ಪುಟಕ್ಕೆ



ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೆ.ಹೆಚ್.ಮುನಿಯಪ್ಪ, ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್, ಹೆಚ್.ಸಿ.ಮಹದೇವಪ್ಪ

ತನ್ವೀರ್ ಸೇಠ್, ದರ್ಶನ್, ಮಂಜುನಾಥ್, ವೆಂಕಟೇಶ್, ರವಿಶಂಕರ್, ಅನಿಲ್, ಆರ್.ನರೇಂದ್ರ, ಪುಟ್ಟರಂಗಶೆಟ್ಟಿ

ಗಣೇಶ್‌ಪ್ರಸಾದ್, ನರೇಂದ್ರಸ್ವಾಮಿ, ಚೆಲುವರಾಯಸ್ವಾಮಿ, ರಮೇಶ್, ಎ.ಎಸ್.ಪೊನ್ನಣ್ಣ, ಶ್ರೇಯಸ್, ರಾಮಲಿಂಗರೆಡ್ಡಿ, ಸತೀಶ್ ಜಾರಕಿಹೊಳಿ

ಕೋಲಾರದಲ್ಲೂ ಸ್ಪರ್ಧೆಗೆ ಟಿಕೆಟ್ ಕೇಳಿದ್ದೇನೆ: ಸಿದ್ದರಾಮಯ್ಯ

ಬೆಂಗಳೂರು, ಮಾ.25(ಕೆಎಂಶಿ)–ಕೋಲಾರ ವಿಧಾನಸಭಾ ಕ್ಷೇತ್ರದಿಂದಲೂ ಸ್ಪರ್ಧಿಸಲು ಟಿಕೆಟ್ ಕೇಳಿದ್ದೇನೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ. ಮುಂಬರುವ ವಿಧಾನ ಸಭಾ ಚುನಾವಣೆಗೆ ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದು, ಅದರಲ್ಲಿ ಸಿದ್ದರಾಮಯ್ಯ ಅವರಿಗೆ ವರುಣಾ ಕ್ಷೇತ್ರದಿಂದ ಕಣಕ್ಕಿಳಿಯಲು ಪಕ್ಷ ಅವಕಾಶ ಮಾಡಿಕೊಟ್ಟಿದೆ.

ಪಟ್ಟಿ ಬಿಡುಗಡೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ವರುಣಾ ಮತ್ತು ಕೋಲಾರ ಎರಡೂ ಕಡೆ ಟಿಕೆಟ್ ಕೊಡುವಂತೆ ಹೈಕಮಾಂಡ್‌ಗೆ ಕೇಳಿದ್ದೇನೆ. ವರುಣಾದಲ್ಲಿ ನಿಲ್ಲುವಂತೆ ಹೈಕಮಾಂಡ್ ತಿಳಿಸಿದೆ. ಕೋಲಾರ ಕೂಡ ಕೇಳಿದ್ದೇನೆ. ಆದರೆ ವರಿಷ್ಠರ ನಿರ್ಧಾರವೇ ಅಂತಿಮ. ಮೊದಲ ಪಟ್ಟಿ ಬಿಡುಗಡೆಯಾಗಿದೆ. ಒಂದೇ ಹೆಸರು, ಗೊಂದಲವಿಲ್ಲದ ಕ್ಷೇತ್ರಗಳಿಗೆ ಟಿಕೆಟ್ ಘೋಷಣೆಯಾಗಿದೆ. ಕಳೆದ ಮೂರು ತಿಂಗಳಿನಿಂದ ಕೆಪಿಸಿಸಿ ಅಭ್ಯರ್ಥಿಗಳ ಆಯ್ಕೆಗೆ ಕಸರತ್ತು ನಡೆಸಿ, ಸ್ಕ್ರೀನಿಂಗ್ ಹಾಗೂ ಸಿಇಸಿ ಸಭೆಯಲ್ಲಿ ಚರ್ಚೆ ನಡೆಸಿದ ನಂತರ ಪಟ್ಟಿ ಬಿಡುಗಡೆಯಾಗಿದೆ ಎಂದರು. ಹಾಲಿ ಆರು ಶಾಸಕರ ಕ್ಷೇತ್ರಗಳಲ್ಲಿ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಹೀಗಾಗಿ ಆ ಕ್ಷೇತ್ರಗಳಿಗೆ ಟಿಕೆಟ್ ಘೋಷಣೆಯಾಗಿಲ್ಲ. ಪಕ್ಷ ಸಮೀಕ್ಷೆಯನ್ನೇ ಮಾನದಂಡವಾಗಿಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆ ಮಾಡಿಲ್ಲ. ಕೆಳ ಹಂತದ ಎಲ್ಲಾ ಘಟಕಗಳಿಂದಲೂ ಮಾಹಿತಿ ಪಡೆದು, ನಂತರ ಪಕ್ಷ ಅಭ್ಯರ್ಥಿಗಳ ಆಯ್ಕೆ ಮಾಡಿದೆ ಎಂದರು.

3–4 ದಿನಗಳಲ್ಲಿ ಎರಡನೇ ಪಟ್ಟಿ ಬಿಡುಗಡೆ: ಡಿಕೆಶಿ


ಬೆಂಗಳೂರು, ಮಾ.25–ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗಿದ್ದು, ಎಲ್ಲರೂ ಯುಗಾದಿ ಚಂದ್ರನ ನೋಡಲು ಕಾಯುತ್ತಿದ್ದರು. ಅದರಂತೆ ಮೊದಲ ಪಟ್ಟಿ ಬಿಡುಗಡೆ ಮಾಡಲಾಗಿದೆ. ಮುಂದಿನ 3–4 ದಿನಗಳಲ್ಲಿ ಎರಡನೇ ಪಟ್ಟಿ ಪ್ರಕಟಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಶನಿವಾರ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2ನೇ ಪಟ್ಟಿಯಲ್ಲಿ ಬಹುತೇಕ ಶೇ. 95ರಷ್ಟು ಹಾಲಿ ಶಾಸಕರಿಗೇ ಟಿಕೆಟ್ ಸಿಗಲಿದೆ. ಕೆಲವು ಕ್ಷೇತ್ರಗಳಲ್ಲಿ

● 6ನೇ ಪುಟಕ್ಕೆ

ಮೈಸೂರಿಗೆ ಏ.9ರಂದು ಪ್ರಧಾನಿ ಮೋದಿ ಭೇಟಿ

- ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಹುಲಿ ಸಮೀಕ್ಷಾ ವರದಿ ಬಿಡುಗಡೆ
- ಹುಲಿ ಸಂತತಿಯಲ್ಲಿ ದೇಶದಲ್ಲೇ ಕರ್ನಾಟಕ ನಂಬರ್–1 ಸ್ಥಾನದ ನಿರೀಕ್ಷೆ
- ಹುಲಿಗಳ ಬೀಡಾದ ಹಳೆ ಮೈಸೂರು ಪ್ರಾಂತ್ಯದಲ್ಲೇ ಕಾರ್ಯಕ್ರಮಕ್ಕೆ ಸಿದ್ಧತೆ



ಮೈಸೂರು,ಮಾ.25(ಎಂಟಿವೈ)– ಭಾರತದ ಅಭಯಾರಣ್ಯಗಳಲ್ಲಿರುವ ಹುಲಿಗಳ ಸಮೀಕ್ಷಾ ವರದಿಯನ್ನು ಏ.9ರಂದು ಮೈಸೂರಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ನಡೆಯುವ ಸಾಧ್ಯತೆ ಇದೆ.

ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಹುಲಿ ಸಮೀಕ್ಷಾ ವರದಿ ಈ ಬಾರಿ ಇನ್ನೂ ಪ್ರಕಟವಾಗಿಲ್ಲ. ಸಮೀಕ್ಷಾ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಕೆಲ ಕಾರಣದಿಂದ ವರದಿ ಪ್ರಕಟಿಸಿರಲಿಲ್ಲ. ಈ ಸಮೀಕ್ಷೆಯಲ್ಲಿ ದೇಶದಲ್ಲೇ ಅತೀ ಹೆಚ್ಚು ಹುಲಿ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ನಂಬರ್–1 ಪಟ್ಟ ದಕ್ಕಿರುವ ಹಿನ್ನೆಲೆಯಲ್ಲಿ ವರದಿಯನ್ನು ಕರ್ನಾಟಕದಲ್ಲೇ ಬಿಡುಗಡೆ ಮಾಡಿಸಲು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ನಿರ್ಧರಿಸಿದೆ ಎಂದು ಉನ್ನತ ಮೂಲಗಳು ಹೇಳಿವೆ. ಅದರಲ್ಲೂ ಹಳೆ ಮೈಸೂರು ಭಾಗದ ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ, ಕಾವೇರಿ ವನ್ಯಧಾಮ, ಮಲೆ ಮಹದೇಶ್ವರಬೆಟ್ಟ ವನ್ಯಧಾಮದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಏರಿಕೆ ಆಗಿದೆ.

ಮೂರು ಸ್ಥಳದ ಪರಿಶೀಲನೆ: ಪ್ರಧಾನಿ ನರೇಂದ್ರ ಮೋದಿ ಅವರಿಂದಲೇ ಹುಲಿ ಸಮೀಕ್ಷೆಯ ವರದಿ ಬಿಡುಗಡೆ ಮಾಡಿಸಲು ಉದ್ದೇಶಿಸಲಾಗಿರುವುದರಿಂದ ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಕಾರ್ಯಕ್ರಮ ನಡೆಸುವ ಸಂಬಂಧ ಎನ್‌ಟಿಸಿಎ ಪ್ರತಿನಿಧಿಗಳು ಸ್ಥಳ ಪರಿಶೀಲಿಸಿದ್ದಾರೆ. ಇನ್ನೆರಡು ದಿನದಲ್ಲಿ ಪ್ರಧಾನಿ ಮೋದಿ ಅವರ ಭದ್ರತಾ ಪಡೆ ಪರಿಶೀಲಿಸಿದ ಬಳಿಕ ಕಾರ್ಯಕ್ರಮದ ರೂಪುರೇಷೆ ಸಿದ್ಧಗೊಳ್ಳಲಿದೆ.

ಹಳೆ ಮೈಸೂರು ಪ್ರಾಂತ್ಯವೇ ಮೇಲುಗೈ: ಕರ್ನಾಟಕ ಆನೆ, ಹುಲಿ ಸೇರಿದಂತೆ ವಿವಿಧ ಬಗೆಯ ಪ್ರಾಣಿ–ಪಕ್ಷಿಗಳ ಆವಾಸ ಸ್ಥಾನವನ್ನೂ ಹೊಂದಿದೆ. ಅದರಲ್ಲೂ ಹಳೆ ಮೈಸೂರು ಪ್ರಾಂತ್ಯ ನಾಲ್ಕು ಹುಲಿ ಸಂರಕ್ಷಿತ ಪ್ರದೇಶ ಹೊಂದಿದೆ. ಅವುಗಳಲ್ಲಿ ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ(524) ಬಹುಪಾಲು ಹುಲಿ ಮೈಸೂರು ಪ್ರಾಂತ್ಯದಲ್ಲಿರುವುದು ವಿಶೇಷ. 2018ರ ಗಣತಿ ಅನುಸಾರ 363 ಹುಲಿ ಮೈಸೂರು ಪ್ರಾಂತ್ಯದ ಕಾಡಲ್ಲಿರುವುದು ಹೆಮ್ಮೆ ಪಡುವ ಸಂಗತಿ. ಈ ಬಾರಿ ರಾಜ್ಯದ ಎಲ್ಲಾ ಅರಣ್ಯಗಳಲ್ಲೂ ಹುಲಿಗಳ ಸಂಖ್ಯೆಯಲ್ಲಿ ಗಮನಾರ್ಹ ಸುಧಾರಣೆಯಾಗಿದೆ. ಇದರಿಂದ ಈ ಬಾರಿ ರಾಜ್ಯದ ಹುಲಿಗಳ ಸಂಖ್ಯೆ 600 ದಾಟುವ ಸಂಭವವಿದೆ.

ಬಂಡೀಪುರದಲ್ಲಿ 175ಕ್ಕೂ ಹೆಚ್ಚು: ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆ ವ್ಯಾಪ್ತಿಗೆ

● 9ನೇ ಪುಟಕ್ಕೆ

ಬಂಧಿಸಿದರೂ ನನ್ನ ಹೋರಾಟ ಮಾತ್ರ ನಿಲ್ಲಲ್ಲ

'ಅನರ್ಹ'ಗೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುಡುಗು

ನವದೆಹಲಿ, ಮಾ.25–ನನ್ನನ್ನು ಶಾಶ್ವತವಾಗಿ ಸಂಸದ ಸ್ಥಾನದಿಂದ ಅನರ್ಹಗೊಳಿಸಿದರೂ, ಬಂಧಿಸಿದರೂ ಕೂಡ ನಾನು ಸತ್ಯ, ನ್ಯಾಯ, ನಿಷ್ಠೆ ಪರ ಹೋರಾಟ ಮುಂದುವರೆಸುತ್ತೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಮಾನನಷ್ಟ ಮೊಕದ್ದಮೆಯಲ್ಲಿ ಸೂರತ್ ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿ, ಲೋಕಸಭೆಯಿಂದ ಅನರ್ಹಗೊಂಡ ಒಂದು ದಿನದ ನಂತರ ಅವರು ಶನಿವಾರ ಸುದ್ದಿಗೋಷ್ಠಿ ನಡೆಸಿ, ನಾನು ಸಂಸತ್ತಿನ ಒಳಗೆ ಇರುತ್ತೇನೋ–ಇಲ್ಲವೋ ಎಂಬುದು ಮುಖ್ಯವಲ್ಲ. ದೇಶಕ್ಕಾಗಿ ಹೋರಾಟ ನಡೆಸುವುದು ಮುಖ್ಯ. ಅದನ್ನು ಮುಂದುವರೆಸುತ್ತೇನೆ ಎಂದರು. 2019ರಲ್ಲಿ ನಾನು ಮಾಡಿದ ಭಾಷಣದಲ್ಲಿ ಯಾವುದೇ ನಿರ್ದಿಷ್ಟ ಜಾತಿಯನ್ನು ಗುರಿಯಾಗಿಸಿಕೊಂಡು ಟೀಕೆ ಮಾಡಿರಲಿಲ್ಲ ಎಂದ ಅವರು, ಅದಾನಿ ಕುರಿತು ನನ್ನ ಮುಂದಿನ ಭಾಷಣಕ್ಕೆ ಪ್ರಧಾನಿ ಮೋದಿ ಹೆದರಿದ್ದರು. ಸಂಸತ್‌ನಲ್ಲಿ ಅದಾನಿ ಕುರಿತು ನಾನು ಮಾತನಾಡುವಾಗ ಪ್ರಧಾನಿ ಹೆದರಿದ್ದನ್ನು



ಅವರ ಕಣ್ಣಿನಲ್ಲಿ ನಾನು ಕಂಡಿದ್ದೇನೆ. ನನ್ನ ಮುಂದಿನ ಭಾಷಣವನ್ನು ಎದುರಿಸಲು ಸಾಧ್ಯವಾಗದೇ ಮೊದಲು ಗೊಂದಲಕ್ಕೀಡಾಗಿ ನಂತರ ನನ್ನನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಲಾಗಿದೆ ಎಂದು ವಾಗ್ದಾಳಿ ನಡೆಸಿದರು. ಈ ವಿದ್ಯಮಾನ ವಿಡೀ ನಾಟಕ ನಡೆದಿದೆ. ಅದಾನಿ ಶೆಲ್ ಕಂಪನಿಗಳಿಗೆ 20 ಸಾವಿರ ಕೋಟಿ ರೂ. ಹೇಗೆ ಹೋಯಿತು ಎಂಬ ನನ್ನ ಸರಳ ಪ್ರಶ್ನೆಯಿಂದ ಪ್ರಧಾನಿಯನ್ನು ರಕ್ಷಿಸಲು ನಡೆಸಿರುವ ನಾಟಕವಿದು. ಈ ಬೆದರಿಕೆ, ಅನರ್ಹತೆ ಅಥವಾ ಜೈಲು ಶಿಕ್ಷೆಗೆ ನಾನು ಹೆದರುವುದಿಲ್ಲ ಎಂದು ಗುಡುಗಿದರು.

ಅದಾನಿ ಕುರಿತು ಸಂಸತ್‌ನಲ್ಲಿ ನಾನು ಕೇಳಿದ್ದು ಒಂದೇ ಒಂದು ಪ್ರಶ್ನೆ. ಇನ್ನು ಮುಂದೆಯೂ ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದಿಲ್ಲ. ಸಂಸತ್‌ನಲ್ಲಿ ಮಾಡಿದ ನನ್ನ ಭಾಷಣವನ್ನು ತೆಗೆದು ಹಾಕಲಾಯಿತು. ನಂತರ ನಾನು ಲೋಕಸಭೆ ಸ್ಪೀಕರ್‌ಗೆ ವಿವರವಾದ ಪತ್ರ ಬರೆದೆ. ಆದರೆ ನಾನು ವಿದೇಶಿ ಶಕ್ತಿಗಳ ಸಹಾಯ ಪಡೆದಿದ್ದೇನೆ ಎಂದು ಕೆಲವು ಮಂತ್ರಿಗಳು ಸುಳ್ಳು ಹೇಳಿದರು. ನಾನು ಅಂತಹ ಯಾವುದೇ ಕೆಲಸ ಮಾಡಿಲ್ಲ. ಪ್ರಧಾನಿ ಮೋದಿ ಮತ್ತು ಅದಾನಿ ನಡುವಿನ ಸಂಬಂಧವನ್ನು ಪ್ರಶ್ನಿಸುತ್ತಲೇ ಇರುತ್ತೇನೆ ಎಂದರು.

ಈ ದೇಶ ನನಗೆ ಎಲ್ಲವನ್ನೂ ಕೊಟ್ಟಿದೆ. ಹೀಗಾಗಿ ದೇಶದ ಪ್ರಜಾಪ್ರಭುತ್ವ ರಕ್ಷಣೆಗಾಗಿ ಹೋರಾಟ ಮುಂದುವರೆಸುತ್ತೇನೆ. ದೇಶದಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿಯಾಗುತ್ತಿದೆ ಎಂದು ಈ ಹಿಂದೆಯೂ ಹಲವು ಬಾರಿ ಹೇಳಿದ್ದೆ. ಈಗಲೂ ಅಂತಹ ದಾಳಿಗಳನ್ನು ನಾವು ಪ್ರತಿ ದಿನ ನೋಡುತ್ತಿದ್ದೇವೆ ಎಂದು ರಾಹುಲ್ ಗಾಂಧಿ ಹೇಳಿದರು.

ಮೈಸೂರಲ್ಲಿ ಇಂದು ಜೆಡಿಎಸ್ ಪಂಚರತ್ನ ಯಾತ್ರೆ ಸಮಾರೋಪ ಸಮಾವೇಶ

- ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರ ಉಪಸ್ಥಿತಿ
- ಚಾಮುಂಡಿಬೆಟ್ಟದ ತಪ್ಪಲಲ್ಲಿ 100 ಎಕರೆ ವಿಶಾಲ ಪ್ರದೇಶದಲ್ಲಿ ಸಿದ್ಧತೆ ಪೂರ್ಣ: 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆ



ಬಿಜೆಪಿಯಿಂದ ತಲೆಗೆ ಟೋಪಿ, ಕಿವಿಗೆ ಹೂ ಇಡುವ ಕೆಲಸ..!

"ಚುನಾವಣೆ ಹೊಸ್ತಿಲಲ್ಲಿ ಒಕ್ಕಲಿಗರು ಹಾಗೂ ವೀರಶೈವ ಲಿಂಗಾಯಿತ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಿರುವ ರಾಜ್ಯ ಬಿಜೆಪಿ ಸರ್ಕಾರದ ಲೆಕ್ಕಾಚಾರ ಜಾರಿಗೆ ಬರಲ್ಲ. ಜನತೆಗೆ ಮತ್ತೊಮ್ಮೆ ಟೋಪಿ, ಕಿವಿಗೆ ಹೂ ಇಡುವ ಕೆಲಸ ಮಾಡಿದ್ದಾರೆ. ಕಾನೂನಾತ್ಮಕವಾಗಿ ಚರ್ಚಿಸಿ, ತೀರ್ಮಾನಿಸದೇ ಸ್ವೇಚ್ಛಾಚಾರವಾಗಿ ತಮಗೆ ಬೇಕಾದಂತೆ, ನಾಲ್ಕು ಜನರನ್ನು ಮೆಚ್ಚಿಸಲು ಮೀಸಲಾತಿ ಘೋಷಣೆ ಮಾಡಿದ್ದಾರೆ. ಇದ್ಯಾವುದೂ ಕಾರ್ಯರೂಪಕ್ಕೆ ಬರಲ್ಲ. – ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ





ಮೈಸೂರು, ಮಾ.25(ಎಂಕೆ)– ಮೈಸೂರಿನ ರಿಂಗ್‌ರೋಡ್ ಸಮೀಪದಲ್ಲಿರುವ ಸರ್ಕಾರಿ ಉತ್ತನಹಳ್ಳಿ ಬಳಿ ನಾಳೆ (ಮಾ.26) ನಡೆಯುವ ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾರೋಪ ಸಮಾವೇಶಕ್ಕೆ ಬೃಹತ್ ವೇದಿಕೆ ನಿರ್ಮಾಣವಾಗಿದೆ. ಚಾಮುಂಡಿಬೆಟ್ಟದ ತಪ್ಪಲಲ್ಲಿನ 100 ಎಕರೆ ಪ್ರದೇಶದಲ್ಲಿ ನಡೆಯುವ ಸಮಾರೋಪ ಸಮಾವೇಶದಲ್ಲಿ 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡರು ಉಪಸ್ಥಿತರಿರಲಿದ್ದಾರೆ.

ಶನಿವಾರ ಪಂಚರತ್ನ ಸಮಾರೋಪ ಸಮಾವೇಶ ನಡೆಯುವ ಸ್ಥಳಕ್ಕೆ ಭೇಟಿ ನೀಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಬೃಹತ್ ವೇದಿಕೆ ನಿರ್ಮಾಣ ಹಾಗೂ ಸಿದ್ಧತೆಗಳ ಪರಿಶೀಲನೆ ನಡೆಸಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾರೋಪ ಸಮಾವೇಶದ ಮೂಲಕ ನಾಡಿನ ಜನತೆಗೆ ಸ್ಪಷ್ಟ ಸಂದೇಶ ನೀಡಲಾಗುವುದು. 123ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಗುರಿ ಹಾಗೂ ಸ್ಪಷ್ಟ ಬಹುಮತದೊಂದಿಗೆ ಸ್ವತಂತ್ರ ಸರ್ಕಾರ ರಚನೆಗೆ ತಾಯಿ ಚಾಮುಂಡೇಶ್ವರಿ ಆಶೀರ್ವಾದ, ಜನತೆ ಅನುಗ್ರಹ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಪಂಚರತ್ನ ರಥಯಾತ್ರೆ ಸಮಾರೋಪ ಸಮಾವೇಶ ನಡೆಯಲಿದೆ. ಸಮಾವೇಶದಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಅಭಿಮಾನಿಗಳು, ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಮಾರೋಪ ಸಮಾವೇಶವು ಚುನಾವಣೆಯ ಪ್ರಚಾರ ಕಾರ್ಯಕ್ರಮವೂ ಆಗಿರಲಿದ್ದು, ಜೆಡಿಎಸ್‌ನ ಪಂಚರತ್ನ ಯೋಜನೆಗಳ ಮಾಹಿತಿಯನ್ನು ರಾಜ್ಯದ ಜನತೆಗೆ ತಿಳಿಸಲಾಗುವುದು. ಈ ಮೂಲಕ 123ಕ್ಕೂ ಹೆಚ್ಚಿನ ಸ್ಥಾನ ಗೆಲ್ಲುವ ಗುರಿ ಹಾಗೂ ಸ್ವತಂತ್ರ ಸರ್ಕಾರ

● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹುಡುಗಿ : ಹಲೋ ನಿನ್ನ ಫೋಟೋ ಕಳಿಸು.
ಹುಡುಗ : ನನ್ನ ವಾಟ್ಸಾಪ್ ಡಿಪಿ ನೋಡು
ಹುಡುಗಿ : ಅದರಲ್ಲಿ ಕಾರು ಇದೆ.
ಹುಡುಗ : ಡೋರ್ ಓಪನ್ ಮಾಡು, ಕಾರ್ ಒಳಗೆ ಕುಂತಿದೀನಿ...

ಮೈಸೂರು ಮಿತ್ರ
ಭಾನುವಾರ, 26 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಯಾರ ಹೃದಯದಲ್ಲಿ ಮಾನವೀಯತೆ, ಪ್ರೀತಿ ತುಂಬಿರುತ್ತದೋ ಅವನೇ ನಿಜವಾದ ಶ್ರೀಮಂತ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಡೋರ್ ನಾವು, ನೋಡೋರ್ ಊರೆಲ್ಲಾ

ನಿಮ್ಮ ಪತ್ರಗಳು

ಸಾಕು ಮಾಡಿ ಉರಿಗೌಡ–ನಂಜೇಗೌಡ ಡ್ರಾಮಾ

ಮಾನ್ಯರೆ,

ಉರಿಗೌಡ–ನಂಜೇಗೌಡ ಟಿಪ್ಪುವನ್ನು ಸಂಹರಿಸಿದರು ಎಂಬ ನಾಟಕ ಪ್ರದರ್ಶನ. ಅದಕ್ಕೆ ಪರ–ವಿರೋಧಗಳು. ಈ ಮೂಲಕ ಮತ ಬೇಟೆಗೆ ಇಳಿದಿರುವುದು ನಿಮಗೆ ಹೇಳಿಕೊಳ್ಳಲು ಏನೂ ಇಲ್ಲಾ ಎಂಬುದನ್ನು ನೀವೇ ಪ್ರದರ್ಶನ ಮಾಡಿಕೊಂಡಂತಿದೆ. ಮಂಡ್ಯ ಜಿಲ್ಲೆಗೆ ನಿಮ್ಮ ಕೊಡುಗೆ ಏನು ಎಂಬುದನ್ನು ಮಂಡ್ಯ ಜನರಿಗೆ ಮನವರಿಕೆ ಮಾಡಿಕೊಡಿ. ಅದು ಸತ್ಯವಾಗಿದ್ದರೆ ಜನ ನಿಮ್ಮ ಕೈ ಹಿಡಿಯುತ್ತಾರೆ. ಅದನ್ನು ಬಿಟ್ಟು ಆ ಘಟನೆ ನಡೆದಿದೆಯೋ ಇಲ್ಲವೋ ಅದನ್ನು ಎಳೆದು ತಂದು ಧರ್ಮ–ಧರ್ಮಗಳ ನಡುವೆ ವಿಷ ಬೀಜ ಬಿತ್ತಿ ನಿಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ. ಹಿಂದಿನಿಂದಲೂ ಮುಸ್ಲಿಂ ಬಂಧುಗಳು ಒಕ್ಕಲಿಗ ಸಮಾಜ ಅಣ್ಣ ತಮ್ಮಂದಿರಂತಿದ್ದಾರೆ. ನಿಮ್ಮ ಸ್ವಾರ್ಥಕ್ಕಾಗಿ ಈ ಎರಡು ಸಮಾಜಗಳ ಮಧ್ಯೆ ದ್ವೇಷ, ಅಸೂಯೆಗೆ ತುಪ್ಪ ಸುರಿಯಬೇಡಿ. ಸ್ವಾತಂತ್ರ್ಯ ಪೂರ್ವದ ಘಟನೆಯನ್ನು ಚುನಾವಣೆ ಸಮಯದಲ್ಲಿ ಎಳೆದು ತಂದು ಸಮಾಜದ ಸ್ವಾಸ್ಥ್ಯ ಹಾಳು ಮಾಡಬೇಡಿ. ನಿಮ್ಮ ಸ್ವಾರ್ಥಕ್ಕೆ ಜನರನ್ನೇಕೆ ಬಲಿ ಕೊಡುತ್ತೀರಿ. ಈ ಡ್ರಾಮಾವನ್ನು ಇಲ್ಲಿಗೆ ನಿಲ್ಲಿಸಿ. ಇದುವರೆಗೆ ನೀವು ಕಡಿದು ಕಟ್ಟೆ ಹಾಕಿರುವುದು, ಮುಂದೆ ಕಡಿಯುವುದನ್ನು ಹೇಳಿ ಮತ ಭಿಕ್ಷೆ ಕೇಳಿ. ಮಂಡ್ಯ ಜಿಲ್ಲೆ ಜನ ನಿಮ್ಮನ್ನು ಸ್ವೀಕರಿಸುತ್ತಾರೋ ತಿರಸ್ಕರಿಸುತ್ತಾರೋ ಅವರಿಗೆ ಬಿಟ್ಟಿದ್ದು.

–ಬಿ.ಜಿ. ರಂಗೇಗೌಡ, ಮೈಸೂರು.

ನಂದಿನಿ ಡೈರಿ ಹೊಸ ನಿಯಮದಿಂದ ಹೊಡೆತ

ಮಾನ್ಯರೆ,

ಮೈಮುಲ್ ಅಧೀನದ ಬಹುತೇಕ ಅಧಿಕೃತ ಮಾರಾಟಗಾರರು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರನೇ ದಿನದ ಕೋರಿಕೆ ನೀಡಿ ಪಡೆಯುತ್ತಿದ್ದುದು ಸರಿಯಷ್ಟೆ. ಈ ರೀತಿ ಇರುವ ಏಜೆಂಟರುಗಳು ಈ ಮಾರಾಟ ವೃತ್ತಿಯನ್ನು ಉಪಕಸುಬಾಗಿ ನಡೆಸುತ್ತಿದ್ದು, ಇದರಲ್ಲಿ ಬಡ ಕುಟುಂಬಗಳೇ ಬಹಳಷ್ಟಿವೆ. ಹಾಲಿನ ಉತ್ಪನ್ನಗಳಿಗೆ ನೀಡುವ ಕೋರಿಕೆಯ ರೀತ್ಯಾ ಮೈಮುಲ್ ಕೂಡಾ ಉತ್ಪನ್ನಗಳನ್ನು ಸರಬರಾಜು ಮಾಡುತ್ತಿತ್ತು. ಇತ್ತೀಚೆಗೆ ಮೈಮುಲ್ ಹೊಸ ನಿಯಮವೊಂದನ್ನು ಜಾರಿಗೆ ತಂದಿದೆ. ಪ್ರಸ್ತುತ ತುಪ್ಪಕ್ಕಾಗಿ ಕೋರಿಕೆ ನೀಡಬೇಕಾದಲ್ಲಿ ಕನಿಷ್ಠ ಒಂದು ಕೇಸ್ (ಹನ್ನೆರಡು ಲೀಟರ್)ಗಳಷ್ಟು ಕೋರಿಕೆ ನೀಡಿದಲ್ಲಿ ಸರಬರಾಜು ಮಾಡುವ ಹೊಸ ನಿಯಮ ರೂಪಿಸಿದೆ. ಈ ರೀತಿ ಒಟ್ಟಾರೆಯಾಗಿ ಕೋರಿಕೆ ನೀಡಿ ಅದನ್ನು ಇರುವ ಅಂಗಡಿ–ಮುಂಗಟ್ಟುಗಳಲ್ಲಿ, ಕೆಲವು ಕಡೆಗಳಲ್ಲಿ ಫುಟ್‌ಪಾತ್ ವ್ಯಾಪಾರವೂ ಸೇರಿದಂತೆ ಇಡುವುದೆಲ್ಲಿ, ಇಲಿಗಳಿಂದ ರಕ್ಷಿಸುವುದೆಲ್ಲಿ. ಎಲ್ಲಕ್ಕಿಂತ ಮುಖ್ಯವಾಗಿ ಯಾರೋ ಗ್ರಾಹಕರು ಎಂದೋ ಅರ್ಧ ಲೀಟರ್ ಅಥವಾ ಒಂದು ಲೀಟರಿನ ಪ್ಯಾಕೆಟ್ ಖರೀದಿಸುತ್ತಾರೆ. ಅದಕ್ಕೆ ಒಂದು ಬಾಕ್ಸ್ ತುಪ್ಪವನ್ನು ಒಟ್ಟಾರೆಯಾಗಿ ಹಣ ನೀಡಿ ತಂದು ಇಟ್ಟುಕೊಂಡು ಅದನ್ನು ಕೆಡದೆ ಸಂರಕ್ಷಿಸಿಕೊಂಡು ಮಾರಾಟವಾಗುವ ಖಾತ್ರಿ ಏನು? (ಇಲ್ಲಿ ಉತ್ಪನ್ನಗಳ ಖರೀದಿ ನಂತರ ಕೆಟ್ಟಲ್ಲಿ ಮೈಮುಲ್ ಬದಲಿಸಿಕೊಡುವ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ) ಬಹುಶಃ ಮಾರುಕಟ್ಟೆ ಅಭಿವೃದ್ಧಿಯ ನೆಪವನ್ನಿಟ್ಟುಕೊಂಡು ರೂಪಿಸಿರುವ ಈ ನಿಯಮವನ್ನು ಮೈಮುಲ್ ತಕ್ಷಣವೇ ಹಿಂದಕ್ಕೆ ಪಡೆದು, ಎಂದಿನಂತೆ ಗ್ರಾಹಕರು ಅಥವಾ ಏಜೆಂಟರು ಕೋರುವ ತುಪ್ಪ ಅಥವಾ ಉತ್ಪನ್ನಗಳನ್ನು ಯಾವುದೇ ಷರತ್ತಿಲ್ಲದೇ ಸರಬರಾಜು ಮಾಡುವುದು ಉತ್ತಮ. ಇಲ್ಲದೇ ಹೋದಲ್ಲಿ, ಮಾಲ್ ಸಂಸ್ಕೃತಿಯಂತೆ ಬರಿ ಕ್ಷೀರಕೇಂದ್ರಗಳೇ ತಲೆ ಎತ್ತಿ ಇದನ್ನು ನಂಬಿಕೊಂಡಿರುವ ಸಾಮಾನ್ಯ ನಂದಿನಿ ಅಧಿಕೃತ ಮಾರಾಟಗಾರರ ಹೊಟ್ಟೆಯ ಮೇಲೆ ಹೊಡೆತವಂತೂ ಬೀಳಲಿದೆ. ಈ ಬಗ್ಗೆ ಮೈಮುಲ್ ಆದಷ್ಟು ಶೀಘ್ರ ಒಂದು ಸೂಕ್ತ ನಿರ್ಧಾರ ತಳೆಯುವುದು ಸೂಕ್ತ.

–ವಿಜಯ್ ಹೆಮ್ಮಿಗೆ, ಮೈಸೂರು

ಬೇಸಿಗೆ ಬಂತು, ಪ್ರಾಣಿ–ಪಕ್ಷಿಗಳಿಗೆ ನೀರುಣಿಸಲು ಕೈಜೋಡಿಸಿ...!

ಮಾನ್ಯರೆ,



ಪ್ರಾಣಿ–ಪಕ್ಷಿ ಸಂಕುಲಗಳು ಪ್ರಕೃತಿಯ ಅವಿಭಾಜ್ಯ ಅಂಗಗಳು. ಅವು ಉಳಿದರೆ ಮಾತ್ರ ಮನುಷ್ಯ ಬದುಕಲು ಸಾಧ್ಯ. ಮನುಷ್ಯ ಸಂಪೂರ್ಣವಾಗಿ ಪರಿಸರದ ಮೇಲೆ ಅವಲಂಬಿತನಾಗಿ ಆರೋಗ್ಯದಿಂದ ಬದುಕಲು ಪ್ರಾಣಿ– ಪಕ್ಷಿ, ಗಿಡ–ಮರ, ಕಾಡುಗಳು ನಮಗೆ ಅತ್ಯವಶ್ಯಕವಾಗಿದೆ. ಕರ್ನಾಟಕದಲ್ಲಿ 30 ವನ್ಯಜೀವಿ ಅಭಯಾರಣ್ಯಗಳು ಮತ್ತು 16 ಸಂರಕ್ಷಿತ ಮೀಸಲು ಪ್ರದೇಶ ಸೇರಿದಂತೆ 5 ರಾಷ್ಟ್ರೀಯ ಉದ್ಯಾನವನಗಳಿದ್ದು, ರಾಜ್ಯದ ಕಾಡುಗಳಲ್ಲಿ ಸುಮಾರು 600 ವಿವಿಧ ಜಾತಿಯ ವೈವಿಧ್ಯಮಯ ಪಕ್ಷಿಗಳನ್ನು ನೋಡುತ್ತೇವೆ. ಗುಬ್ಬಚ್ಚಿ, ಗಿಣಿ, ಪಾರಿವಾಳ, ಕಾಗೆ, ಹದ್ದು, ಅಳಿಲು, ನವಿಲು, ಗುಟುರು ಹಕ್ಕಿಗಳು ಸೇರಿದಂತೆ ಹಲವಾರು ಪ್ರಾಣಿ ಪಕ್ಷಗಳಿಗೆ ಬೇಸಿಗೆ ಬಾಧಿಸುತ್ತದೆ. ಅವುಗಳಿಗೆ ಆಹಾರವಿಲ್ಲದಿದ್ದರೂ ನಡೆಯುತ್ತವೆ. ಆದರೆ "ನೀರಿಲ್ಲದೆ ಯಾವುದೇ ಪ್ರಾಣಿ –ಪಕ್ಷಿಗಳ ಜೊತೆಗೆ ಮನುಷ್ಯನು ಸಹ ಬದುಕಲಾರ. ಮನುಷ್ಯರಾದ ನಾವು "ಬುದ್ಧಿಜೀವಿ" ಎಂಬ ಬಿರುದನ್ನು ಪಡೆದುಕೊಂಡಿದ್ದು ನಮಗೆ ನೀರಿನ ಸಮಸ್ಯೆ ಎದುರಾದರೆ ಇತರರಿಗೆ ಸಮಸ್ಯೆ ಹೇಳಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಆದರೆ ಮೂಕಪ್ರಾಣಿ – ಪಕ್ಷಿಗಳು ಯಾರ ಬಳಿ ಹೇಗೆ ಹೇಳಿಕೊಳ್ಳುತ್ತವೇ? ಜೊತೆಗೆ ಮಳೆಯಿಲ್ಲದೆ ಬೇಸಿಗೆ ಬಂದರೆ ಸಾಕು ಕೆರೆಗಳು ಹಾಗೂ ಕಾಲುವೆ ಮುಂತಾದ ಕಡೆಗಳಲ್ಲಿ ನೀರು ಸಿಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಮನುಷ್ಯ ತನ್ನ ಸ್ವಂತ ಬಳಕೆಗೆ ಗಿಡ–ಮರಗಳನ್ನು ಕಡಿಯುತ್ತಿದ್ದು ಹಾಗೂ ಆರ್ಥಿಕತೆ ಸ್ಥಿರತೆಗೆ ಒಳಪಟ್ಟು ಅವುಗಳನ್ನು ನಾಶ ಮಾಡುತ್ತಿದ್ದು, ಪ್ರಾಣಿ ಪಕ್ಷಿಗಳಿಗೆ ಆಹಾರ ಸಿಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ ವಿಪರ್ಯಾಸ ಎಂದರೆ ನಗರೀಕರಣ, ಕೈಗಾರಿಕರಣ, ಅಭಿವೃದ್ಧಿಯಾಗುವುದರ ಜೊತೆಗೆ ಶಬ್ದಮಾಲಿನ್ಯಗಳು ಮತ್ತು ತರಂಗಗಳಿಂದ ಹಾಗೂ ಅನೇಕ ಮೊಬೈಲ್ ನೆಟ್‌ವರ್ಕ್‌ಗಳು ಸ್ಥಾಪನೆಯಾಗುತ್ತಿರುವುದರಿಂದ ಪ್ರಾಣಿ–ಪಕ್ಷಿಗಳು ಮನುಷ್ಯನಿಂದ ದೂರವಾಗುತ್ತಿವೆ ಎಂದು ಹೇಳಬಹುದು. ಇಂತಹ ಬೇಸಿಗೆ ಸಮಯದಲ್ಲಿ ಪ್ರಾಣಿ ಪಕ್ಷಿಗಳು "ನಮ್ಮಂತೆ" ಎಂದು ಅರಿತು ಸಾರ್ವಜನಿಕರು ತಮ್ಮ ಮನೆಯ ಮೇಲೆ ನೀರನ್ನು ಬಕೆಟ್, ಡಬ್ಬ, ಬೋಲ್, ಇತ್ಯಾದಿಗಳಿಂದ ತುಂಬಿಡಿ. ಅವುಗಳಿಗೆ ಆಹಾರ ಕೊಡಬೇಕೆನಿಸಿದರೆ ಪ್ರಾಣಿ ಪಕ್ಷಿಗಳು ತಿನ್ನುವಂತಹ ಸಿರಿಧಾನ್ಯಗಳು–ಇತರ ಆಹಾರ ಪದಾರ್ಥಗಳನ್ನು ಇಡಿ. ಮನುಷ್ಯರಂತೆಯೇ ಪ್ರಾಣಿ ಪಕ್ಷಿಗಳು ಸಹ ಸಮಾಜದಲ್ಲಿರುವ ಪರಿಸರದ ಅವಿಭಾಜ್ಯ ಅಂಗವೆಂದು ತಿಳಿದು ಪ್ರಾಣಿ ಪಕ್ಷಿಗಳಿಗೆ ನೀರುಣಿಸಲು ಮುಂದಾಗಬೇಕೆಂದು ಸಾರ್ವಜನಿಕರಲ್ಲಿ ಮನವಿ.

–ನಾಗೇಶ್, ಪರಿಸರಪ್ರೇಮಿ, ಮಾನಸಗಂಗೋತ್ರಿ

ಏನ್ ಅಂತಾರೆ...

ದರ್ಶನ್ ಧ್ರುವನಾರಾಯಣ್‌ಗೆ ನಂಜನಗೂಡಿನ ಕಾಂಗ್ರೆಸ್ ಟಿಕೆಟ್

ನಮ್ಮ ಪಕ್ಷದ ನಾಯಕರು, ನನ್ನ ಕುಟುಂಬ, ಜನ ತೋರಿದ ಹಾದಿಯಲ್ಲಿ ಸಾಗ್ತೇನೆ...

ಎಸ್.ಬಿ.ದೇವರಾಜ

ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಕಾಂಗ್ರೆಸ್ ಬಿಡುಗಡೆ ಮಾಡಿರುವ 124 ಅಭ್ಯರ್ಥಿಗಳ ಪಟ್ಟಿಯಲ್ಲಿ ದಿವಂಗತ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಧ್ರುವನಾರಾಯಣ್ ಸಹ ಇದ್ದಾರೆ.

ತಂದೆಯ ಅಕಾಲಿಕ ಅಗಲಿಕೆಯಿಂದ ತೀವ್ರ ಆಘಾತಕ್ಕೊಳಗಾಗಿದ್ದ ಇವರು, ಸದ್ಯ ತಾಯಿ ವೀಣಾ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದಾರೆ. ತಂದೆ ಆರ್.ಧ್ರುವನಾರಾಯಣ್ ಸ್ಪರ್ಧಿಸಲು ಬಯಸಿದ್ದ ನಂಜನಗೂಡು ವಿಧಾನ ಸಭಾ ಕ್ಷೇತ್ರದ ಟಿಕೆಟ್ ಅನ್ನು ಅವರ ಪುತ್ರ ದರ್ಶನ್ ಅವರಿಗೆ ನೀಡಬೇಕೆಂಬುದು ಜನರ ಆಗ್ರಹವಾಗಿತ್ತಾದರೂ 'ನನಗೆ ತಾಯಿಯ ಆರೋಗ್ಯದ ಬಗ್ಗೆ ನಿಗಾ ವಹಿಸುವುದಷ್ಟೇ ಮೊದಲ ಆದ್ಯತೆ' ಎಂದು ಪ್ರತಿಕ್ರಿಯಿಸಿದ್ದರು.

ಇತ್ತೀಚೆಗಷ್ಟೇ ನಂಜನಗೂಡು ಕ್ಷೇತ್ರದ ಮತ್ತೋರ್ವ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ದರ್ಶನ್ ಧ್ರುವನಾರಾಯಣ್ ಭೇಟಿ ಮಾಡಿ ಸಾಂತ್ವನ ಹೇಳಿದ್ದರು. ಈ ವೇಳೆ ತಾವು ನಂಜನಗೂಡು ಸ್ಪರ್ಧಾಕಾಂಕ್ಷಿ ನಿರ್ಧಾರದಿಂದ ಹಿಂದೆ ಸರಿದು ದರ್ಶನ್‌ಗೆ ಬೆಂಬಲ ನೀಡುವುದಾಗಿ ಘೋಷಿಸಿದ್ದರು. ಇದೀಗ ಮಹದೇವಪ್ಪ ಅವರನ್ನು ತಿ.ನರಸೀಪುರ ಅಭ್ಯರ್ಥಿಯಾಗಿ ಘೋಷಿಸಿದ್ದು, ದರ್ಶನ್ ಧ್ರುವನಾರಾಯಣ್ ಅವರನ್ನೇ ನಂಜನಗೂಡಿನಿಂದ ಕಣಕ್ಕಿಳಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಯುವ ವಕೀಲರೂ ಆಗಿರುವ 28 ವರ್ಷದ (ಜನ್ಮ ದಿನಾಂಕ: 29–03–1995) ದರ್ಶನ್ ಧ್ರುವನಾರಾಯಣ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಒಂದಷ್ಟು ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಬಿಡುಗಡೆ ಮಾಡಿರುವ 124 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ನಿಮ್ಮ ಹೆಸರಿದೆ. ಈ ಬಗ್ಗೆ ತಮ್ಮ ಮೊದಲ ಪ್ರತಿಕ್ರಿಯೆ ಏನು?.

ದರ್ಶನ್ ಧ್ರುವನಾರಾಯಣ್: ಹೌದು, ನಂಜನಗೂಡು ಕ್ಷೇತ್ರದ ಅಭ್ಯರ್ಥಿಯಾಗಿ ನನ್ನ ಹೆಸರು ಘೋಷಿಸಿದ್ದಾರೆ. ನಾನು ಮೊದಲಿಗೆ ಪಕ್ಷದ ಹಿರಿಯ ನಾಯಕರು, ತಂದೆಯ ಸ್ನೇಹಿತರು, ನಮ್ಮ ಕುಟುಂಬ ಹಾಗೂ ಕ್ಷೇತ್ರದ ಜನರೊಂದಿಗೆ ಚರ್ಚೆ ಮಾಡಬೇಕಿದೆ. ಯಾವ ರೀತಿಯಲ್ಲಿ ಮುಂದುವರೆಯಬೇಕು, ಚುನಾವಣೆ ಎದುರಿಸುವುದು ಹೇಗೆ ಎಂಬುದರ ಬಗ್ಗೆ ಅವರು ತೋರುವ ಹಾದಿಯಲ್ಲಿ ಸಾಗುತ್ತೇನೆ.

ಮಿತ್ರ: ಚುನಾವಣೆ ಎದುರಿಸಲು ಮಾನಸಿಕವಾಗಿ ಸಿದ್ಧತೆ ಮಾಡಿಕೊಂಡಿರುವಿರಾ?

ದರ್ಶನ್: ಖಂಡಿತವಾಗಿಯೂ ಇಲ್ಲ. ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬುದು ನನ್ನ ನಿರ್ಧಾರವಾಗಿರಲಿಲ್ಲ. ಇದು ಪಕ್ಷದ ನಾಯಕರು, ಮುಖಂಡರು ಹಾಗೂ ಕ್ಷೇತ್ರದ ಜನರ ತೀರ್ಮಾನ. ಅವರು ಹೇಳಿದಂತೆ ನಾನು ನಡೆಯುತ್ತೇನೆ. ಈ ಬಗ್ಗೆ ಇಲ್ಲಿಯವರೆಗೆ ನಾನು ಯಾವುದೇ ರೀತಿಯಲ್ಲೂ ಯೋಚಿಸಿರಲಿಲ್ಲ.

ಮಿತ್ರ: ನಿಮಗೆ ನಂಜನಗೂಡು ಕ್ಷೇತ್ರದ ಪರಿಚಯವಿದೆಯೇ?

ದರ್ಶನ್: ನಮ್ಮ ತಂದೆ ಹೋದ ದಿನದಿಂದಲೂ ಕ್ಷೇತ್ರದ ಜನ ನಿರಂತರ ಸಂಪರ್ಕದಲ್ಲಿದ್ದು, ಕುಟುಂಬಕ್ಕೆ ಧೈರ್ಯ ತುಂಬಿದ್ದಾರೆ. ಕಾಂಗ್ರೆಸ್ ನಗರ, ಗ್ರಾಮಾಂತರ ಅಧ್ಯಕ್ಷರು, ಕ್ಷೇತ್ರದ ಅಧ್ಯಕ್ಷರು, ಬ್ಲಾಕ್ ಅಧ್ಯಕ್ಷರು, ಯೂತ್ ಕಾಂಗ್ರೆಸ್ ಅಧ್ಯಕ್ಷರು ಹೀಗೆ ಎಲ್ಲಾ ಮುಂಚೂಣಿ ಘಟಕದ ಮುಖಂಡರು, ಎಲ್ಲಾ ಸಮುದಾಯಗಳ ಮುಖಂಡರು, ಪ್ರತಿ ಹಳ್ಳಿಯ ಜನರು ನೀಡಿರುವ ಮನೋಸ್ಥೈರ್ಯದಿಂದಲೇ ನಮ್ಮ ಕುಟುಂಬ ಚೇತರಿಸಿಕೊಳ್ಳುತ್ತಿದೆ. ಎಲ್ಲರಿಗೂ ನಮ್ಮ ಕುಟುಂಬ ಆಭಾರಿಯಾಗಿದೆ.

ಮಿತ್ರ: ನಂಜನಗೂಡು ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ತಮ್ಮ ತಂದೆ(ಧ್ರುವ ನಾರಾಯಣ್) ನಿಧನದ ನಂತರ ತಮಗೆ (ದರ್ಶನ್) ಟಿಕೆಟ್ ನೀಡುವ ಸಂಬಂಧ ಪಕ್ಷದ ನಾಯಕರು ನಿಮ್ಮೊಟ್ಟಿಗೆ ಮಾತನಾಡಿದ್ದರಾ?.

ದರ್ಶನ್: ತಂದೆಯನ್ನು ಕಳೆದುಕೊಂಡ ಸಂದರ್ಭದಲ್ಲಿ ಅನೇಕ ನಾಯಕರು, ಮುಖಂಡರು ಪ್ರತ್ಯಕ್ಷ ಹಾಗೂ ಪರೋಕ್ಷ ರೀತಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಆ ಸಂದರ್ಭದಲ್ಲಿ ನನ್ನ ತಾಯಿಯ ಆರೋಗ್ಯ ನೋಡಿಕೊಳ್ಳುವುದರ ಜೊತೆಗೆ ತಂದೆಯ ಕಾರ್ಯ ಪೂರ್ಣ ಮಾಡಬೇಕಿತ್ತು. ಹಾಗಾಗಿ ರಾಜಕೀಯ, ಟಿಕೆಟ್ ವಿಚಾರವಾಗಿ ಯಾರೂ ಏನನ್ನೂ ನನ್ನೊಂದಿಗೆ ಮಾತನಾಡಲಿಲ್ಲ. ಚುನಾವಣೆ ವಿಚಾರಕ್ಕಂತೂ ಇದುವರೆಗೆ ಯಾರೂ ಮಾತನಾಡಿರಲಿಲ್ಲ.



ದರ್ಶನ್ ಧ್ರುವನಾರಾಯಣ್

ಮಿತ್ರ ತಾಯಿಯವರ ಆರೋಗ್ಯ ಸ್ಥಿತಿ ಹೇಗಿದೆ. ನೀವು ಚುನಾವಣೆಯಲ್ಲಿ ಸ್ಪರ್ಧಿಸ ಬೇಕೆಂಬುದರ ಬಗ್ಗೆ ಅವರೊಂದಿಗೇನಾದರೂ ಮಾತನಾಡಿದ್ದರಾ?.

ದರ್ಶನ್: ನಮ್ಮ ತಾಯಿ ಈಗಲೂ ಆಸ್ಪತ್ರೆಯಲ್ಲಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ತಾಯಿಯ ಆರೋಗ್ಯ ನೋಡಿಕೊಳ್ಳುವುದೇ ನನ್ನ ಮೊದಲ ಆದ್ಯತೆ. ಅನೇಕ ನಾಯಕರು, ಮುಖಂಡರು, ಕ್ಷೇತ್ರದ ಜನ ನಮ್ಮ ಕುಟುಂಬಕ್ಕೆ ಸಾಂತ್ವನ ಹೇಳಿ ಧೈರ್ಯ ತುಂಬಿದ್ದು, ಅದೇ ನಮ್ಮ ಕುಟುಂಬಕ್ಕೆ ಮಹಾಶಕ್ತಿಯಾಗಿದೆ. ಆದರೆ ನಮ್ಮ ತಾಯಿ ಹಾಗೂ ಕುಟುಂಬದ ಯಾರೊಂದಿಗೂ ಚುನಾವಣೆ ವಿಚಾರವನ್ನು ಚರ್ಚಿಸಿಲ್ಲ.

ಮಿತ್ರ ನಿಮಗೆ ರಾಜಕೀಯದ ಬಗ್ಗೆ ಆಸಕ್ತಿ ಇದೆಯೇ. ರಾಜಕೀಯ ಚಟುವಟಿಕೆಯಲ್ಲಿ ಎಂದಾದರೂ ಭಾಗಿಯಾಗಿದ್ದಿರಾ?.

ದರ್ಶನ್: ನನ್ನದು ವಕೀಲಿ ವೃತ್ತಿ. ಮೈಸೂರು, ಬೆಂಗಳೂರು ಜಿಲ್ಲಾ ನ್ಯಾಯಾಲಯಗಳು ಹಾಗೂ ಹೈಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡಿಕೊಂಡಿದ್ದೆ. ನಮ್ಮ ತಂದೆಯವರು ನಮ್ಮೊಂದಿಗೆ ಎಂದೂ ರಾಜಕೀಯದ ಬಗ್ಗೆ ಮಾತನಾಡಲಿಲ್ಲ. ಅವರು ಸ್ಪರ್ಧಿಸಿದಾಗಲೂ ನಾನು ಪ್ರಚಾರಕ್ಕೆ ಹೋಗಿರಲಿಲ್ಲ. ರಾಜಕೀಯಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮಗಳಲ್ಲೂ ಇದುವರೆಗೆ ಭಾಗವಹಿಸಿರಲಿಲ್ಲ. ಆದರೆ ನಿತ್ಯ ನಮ್ಮ ತಂದೆಯವರ ಜನಸೇವೆ, ಕೆಲಸ ಕಾರ್ಯಗಳನ್ನು ನೋಡಿದ್ದರಿಂದ ಸಹಜವಾಗಿ ರಾಜಕೀಯ ಕ್ಷೇತ್ರದ ಅರಿವಂತೂ ನನಗಿದೆ.

ಮಿತ್ರ: ನಿಮ್ಮ ವಿದ್ಯಾಭ್ಯಾಸ ಹೇಗಾಯಿತು?.

ದರ್ಶನ್: ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನಲ್ಲಿ ಪ್ರಾಥಮಿಕ ಹಂತದಿಂದ ಶಿಕ್ಷಣ ಪಡೆದೆ. ನಂತರ ಬೆಂಗಳೂರಿನ ಕ್ರೈಸ್ಟ್ ವಿಶ್ವ ವಿದ್ಯಾಲಯದಲ್ಲಿ ಬಿಎ, ಎಲ್‌ಎಲ್‌ಬಿ (ಹಾನರ್ಸ್) ಪದವಿ ಪಡೆದೆ. 'ಪಬ್ಲಿಕ್ ಪಾಲಿಸಿ (ಸಾರ್ವಜನಿಕ ನೀತಿ)' ಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇನೆ.

ಮಿತ್ರ: ತಾವು ಕಾನೂನು ಪದವಿಯನ್ನೇ ಆಯ್ಕೆ ಮಾಡಿಕೊಂಡಿದ್ದೇಕೆ. ನಿಮ್ಮ ಗುರಿ ಏನಾಗಿತ್ತು?

ಮಿತ್ರ ಕಾನೂನು ಶಿಕ್ಷಣ ಒಂದು ಪ್ರಾಯೋಗಿಕ ಕೋರ್ಸ್. ನಾವು ಕಲಿತಿದ್ದನ್ನು ನಿತ್ಯ ಜೀವನದಲ್ಲಿ ಅನುಷ್ಠಾನಗೊಳಿಸಲು ಅವಕಾಶವಾಗುತ್ತದೆ. ನಾನು ಸದ್ಯಕ್ಕೆ ವಕೀಲನಾಗಿ ಪ್ರಾಕ್ಟೀಸ್ ಮಾಡುತ್ತಿದ್ದೆ. ಮುಂದೆ ನೀತಿ ಸಲಹಾ ಸಂಸ್ಥೆ(ಪಾಲಿಸಿ ಅಡ್ವೈಸರಿ ಫರ್ಮ್ಸ್) ಆರಂಭಿಸುವ ಯೋಜನೆಯಿತ್ತು.

ಮಿತ್ರ: ನಿಮ್ಮ ತಂದೆಯವರಲ್ಲಿ ತುಂಬಾ ಇಷ್ಟವಾದ ಗುಣಗಳೇನು?

ದರ್ಶನ್: ನಮ್ಮ ತಂದೆ ತುಂಬಾ ಶ್ರಮಜೀವಿ. ಬೆಳಗ್ಗೆ 6 ಗಂಟೆಗೆ ಎದ್ದು ವ್ಯಾಯಾಮ ಮಾಡುತ್ತಿದ್ದರು. ಉಪಾಹಾರ ಸೇವಿಸಿ ಮನೆಯಿಂದ ಕ್ಷೇತ್ರಕ್ಕೆ ಹೊರಟರೆ ರಾತ್ರಿ 10–11 ಗಂಟೆಗೆ ವಾಪಸ್ಸಾಗುತ್ತಿದ್ದರು. ಅತ್ಯಂತ ಸರಳ ವ್ಯಕ್ತಿತ್ವದ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ನೇರ ನಡೆ–ನುಡಿ ಅವರದ್ದಾಗಿತ್ತು. ಅವರು ತೀರಿ ಹೋದರು ಅಂದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರು ನಮ್ಮೊಂದಿಗಿದ್ದಾರೆ ಎಂಬ ನಂಬಿಕೆ ಗಾಢವಾಗಿದೆ.

ಕ್ಷೇತ್ರದ ಮತದಾರರ ಅಭಿಪ್ರಾಯದಂತೆ ನನಗೆ ಮತ್ತೆ ಟಿಕೆಟ್ ಸಿಕ್ಕಿದೆ

– ಹೆಚ್.ಪಿ.ಮಂಜುನಾಥ್

ಕೆ.ಕೃಷ್ಣ, ಹುಣಸೂರು

ಹುಣಸೂರು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಮತ್ತೆ ಹಾಲಿ ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ದೊರೆತಿದೆ. ಮಂಜುನಾಥ್ ಈಗಾಗಲೇ ಮೂರು ಬಾರಿ ಗೆದ್ದಿದ್ದಾರೆ. ಪಕ್ಷ ಮತ್ತೊಮ್ಮೆ ಕೈ ಹಿಡಿದಿರುವುದಕ್ಕೆ ಹರ್ಷದೊಂದಿಗೆ ಹೈಕಮಾಂಡ್‌ಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಇದೇ ವೇಳೆ ಮಂಜುನಾಥ್ ಅವರು 'ಮೈಸೂರು ಮಿತ್ರ' ನೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.



ಮೈಸೂರು ಮಿತ್ರ: ನಿಮಗೆ ಹುಣಸೂರು ಕ್ಷೇತ್ರದ ಟಿಕೆಟ್ ಘೋಷಣೆಯಾಗಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಹೆಚ್.ಪಿ.ಮಂಜುನಾಥ್: ಕಾಂಗ್ರೆಸ್ ವರಿಷ್ಠರು ನನ್ನ ಮೇಲೆ ವಿಶ್ವಾಸವಿಟ್ಟು 5ನೇ ಬಾರಿಗೆ ಸ್ಪರ್ಧಿಸುವ ಅವಕಾಶ ಕಲ್ಪಿಸಿದ್ದಾರೆ. ಪಕ್ಷದ ಕಾರ್ಯಕರ್ತರು, ಕ್ಷೇತ್ರದ ಮತದಾರರು ಹಾಗೂ ಜನರ ಅಭಿಪ್ರಾಯ ಸಂಗ್ರಹಿಸಿ ನನ್ನನ್ನು ಅಭ್ಯರ್ಥಿಯಾಗಿ ಘೋಷಿಸಲಾಗಿದೆ. ಇದಕ್ಕೆ ನಾನು ವರಿಷ್ಠರಿಗೆ, ಕ್ಷೇತ್ರದ ಜನತೆಗೆ, ಪಕ್ಷಕ್ಕೆ ಋಣಿಯಾಗಿದ್ದೇನೆ ಎಂದರು.

ಮಿತ್ರ: ಚುನಾವಣೆಯಲ್ಲಿ ನಿಮ್ಮ ಕಾರ್ಯ ತಂತ್ರವೇನು?

ಮಂಜುನಾಥ್: ಜನರ ಬಳಿ ಹೋಗಿ ನನ್ನ ಸೇವೆ ಪರಿಗಣಿಸಿ ಮತ ನೀಡುವಂತೆ ಮತ ಬಿಕ್ಷೆ ಬೇಡುತ್ತೇನೆ. ಈ ಮನೆ ಮಗನಿಗೆ ಕ್ಷೇತ್ರದ ಮತದಾರರು ಆಶೀರ್ವದಿಸುತ್ತಾರೆಂಬ ವಿಶ್ವಾಸವಿದೆ. ನಾನು ಕ್ಷೇತ್ರದ ಜನರನ್ನು ನಂಬಿದ್ದೇನೆ.

ಮಿತ್ರ: ಈ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸುತ್ತಿರುವ ಶಾಸಕ ಜಿ.ಟಿ.ದೇವೇಗೌಡರ ಪುತ್ರ ಜಿ.ಡಿ.ಹರೀಶ್‌ಗೌಡರ ಹೇಗೆ ಎದುರಿಸುತ್ತೀರಿ?

ಮಂಜುನಾಥ್: ನಾನು ಜನರನ್ನು ನಂಬಿದ್ದೇನೆ. ನನಗೆ ಕ್ಷೇತ್ರದಲ್ಲಿ ಯಾವ ಪೈಪೋಟಿಯೂ ಇಲ್ಲ. ಜನರು ನನ್ನ ಮೇಲೆ ವಿಶ್ವಾಸವಿಟ್ಟಿದ್ದಾರೆ. ಅವರ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ಎಂದೆಂದಿಗೂ ನಡೆದುಕೊಳ್ಳುತ್ತೇನೆ. ಕ್ಷೇತ್ರದ ಜನರು ಎಂದೂ ನನಗೆ ಮೋಸ ಮಾಡುವುದಿಲ್ಲ.

ಮಿತ್ರ: 2023ರ ವಿಧಾನಸಭಾ ಚುನಾವಣೆಗೆ ಏನೆಲ್ಲಾ ತಯಾರಿ ಮಾಡಿಕೊಂಡಿದ್ದೀರಿ?

ಮಂಜುನಾಥ್: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಾವಧಿಯಲ್ಲಿ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ. ಈ ಅವಧಿಯಲ್ಲಿ ನಮ್ಮ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ ಸರ್ಕಾರದ ಗಮನ ಸೆಳೆದು ಅಧಿಕಾರಿಗಳ ಮನವೊಲಿಸಿ ಸಾಕಷ್ಟು ಕೆಲಸ ಮಾಡಿಸಿದ್ದೇನೆ. ಅದರಲ್ಲೂ ಶಿಕ್ಷಣ, ನೀರಾವರಿ ಕ್ಷೇತ್ರದಲ್ಲಿ ಸಾಕಷ್ಟು ಜನಪರ ಕೆಲಸ ಆಗಿವೆ.

ಮಿತ್ರ: ಕ್ಷೇತ್ರದಲ್ಲಿ ನಿರೀಕ್ಷಿತ ಅಭಿವೃದ್ಧಿ ಕಾರ್ಯಗಳಾಗಿಲ್ಲ ಎಂಬ ಅಪಸ್ವರ ಕೇಳಿ ಬರುತ್ತಿದೆಯಲ್ಲಾ?

ಮಂಜುನಾಥ್: ರೈತರ ಜಮೀನಿಗೆ ಸಾಗುವಳಿ ಪತ್ರ ನೀಡುವ ಮೂಲಕ ಭದ್ರತೆ ಒದಗಿಸಿದ್ದೇನೆ. ಬಹಳ ವರ್ಷಗಳಿಂದ ದಾಖಲೆಗಳಿಲ್ಲದ ಮನೆಗಳಿಗೆ ಹಕ್ಕುಪತ್ರ ಕೊಡಿಸಿದ್ದೇನೆ. ಹೀಗೆ ಅನೇಕ ಜನಪರ ಕಾರ್ಯಗಳು ಈ ಬಾರಿ ನನಗೆ ಪ್ಲಸ್ ಪಾಯಿಂಟ್ ಆಗಲಿದೆ. ಅತೀ ಶೀಘ್ರ ಕ್ಷೇತ್ರದ ಪ್ರತಿ ಮನೆ ಮನೆಗೂ ಕುಡಿಯಲು ಶುದ್ಧ ಕಾವೇರಿ ನೀರು ಬರಲಿದೆ. 15 ವರ್ಷಗಳಿಂದ ನನ್ನ ಕ್ಷೇತ್ರ ಯಾವುದೇ ಗಲಾಟೆಗಳಿಲ್ಲದೆ ಶಾಂತಿ ಸೌಹಾರ್ದತೆಯಿಂದ ಶಾಂತಿಯ ತೋಟದಂತಿದೆ. ಕ್ಷೇತ್ರದಲ್ಲಿ ಇನ್ನೂ ಸಾಕಷ್ಟು ಜ್ವಲಂತ ಸಮಸ್ಯೆಗಳಿವೆ. ಈ ಮಣ್ಣಿನ ಸಮಸ್ಯೆ ತಿಳಿದಿದೆ. ಮುಂದೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಅವುಗಳನ್ನು ಬಗೆಹರಿಸುತ್ತೇನೆ. ನಾನು ಈವರೆವಿಗೆ ಯಾವುದೇ ಭರವಸೆಗಳನ್ನು ನೀಡದೆ ಕೆಲಸ ಮಾಡಿ ತೋರಿಸಿದ್ದೇನೆ. ಆದರೆ ರಾಜಕೀಯವಾಗಿ ಕಳೆದೆರಡು ತಿಂಗಳಿಂದ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿರುವವರ ಅಪಪ್ರಚಾರದ ಮಾತುಗಳಿಗೆ ಕಿವಿಗೊಡದಂತೆ ಕ್ಷೇತ್ರದ ಜನರಲ್ಲಿ ಮನವಿ ಮಾಡುತ್ತೇನೆ.

ಕಾಂಗ್ರೆಸ್‌ನ ಗ್ಯಾರಂಟಿ ಪೊಳ್ಳು ಭರವಸೆ ಅಷ್ಟೇ

ದಾವಣಗೆರೆ ಮಹಾ ಸಂಗಮದಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

ದಾವಣಗೆರೆ, ಮಾ.25– ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಕಾಂಗ್ರೆಸ್‌ನವರು ಹಲವು ಗ್ಯಾರಂಟಿಗಳನ್ನು ಘೋಷಿಸಿದ್ದಾರೆ. ಇವುಗಳೆಲ್ಲ ಪೊಳ್ಳು ಭರವಸೆಗಳು. ಅವರಿಗೆ ಯಾವುದೇ ಸಕಾರಾತ್ಮಕವಾದ ಧೋರಣೆಗಳೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಕ್ಷದ ವಿರುದ್ಧ ಇಂದಿಲ್ಲಿ ವಾಗ್ದಾಳಿ ನಡೆಸಿದರು.

ದಾವಣಗೆರೆಯ ಜಿಎಂಐಟಿ ಮೈದಾನದಲ್ಲಿ ನಡೆದ ಬಿಜೆಪಿಯ ಮಹಾಸಂಗಮ ಸಮಾವೇಶದಲ್ಲಿ ಮಾತನಾಡಿದ ಅವರು, ಕರ್ನಾಟಕವನ್ನು ಕಾಂಗ್ರೆಸ್‌ನವರು ಗ್ಯಾರಂಟಿ ನೀಡುತ್ತಿದ್ದಾರೆ. ಅವರ ಗ್ಯಾರಂಟಿ ಪರಿಣಾಮ ಬೀರದು ಎಂಬುದಕ್ಕೆ ಹಿಮಾಚಲ ಪ್ರದೇಶವೇ ಉದಾಹರಣೆ. ಅಲ್ಲಿ ಚುನಾವಣೆಗೂ ಮುನ್ನ ದೊಡ್ಡ ದೊಡ್ಡ ಘೋಷಣೆಗಳನ್ನು ಮಾಡಿದರು. ಆದರೆ ಆಮೇಲೆ ಬಜೆಟ್‌ನಲ್ಲಿ ಏನೇನೂ ನೀಡಲಿಲ್ಲ. ಕರ್ನಾಟಕದಲ್ಲಿಯೂ ಅವರಿಗೆ ಯಾವುದೇ ಪಾಸಿಟಿವ್ ಅಜೆಂಡಾಗಳಿಲ್ಲ. ಕಾಂಗ್ರೆಸ್ ಕೇವಲ ಕನಸು ಕಾಣುತ್ತಿದೆಯಷ್ಟೇ ಎಂದು ಟೀಕಿಸಿದರು.

ಖರ್ಗೆ ತವರಲ್ಲೇ ಬಿಜೆಪಿ ಜಯಭೇರಿ: ಕಲಬುರ್ಗಿ ಮೇಯರ್, ಉಪ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತವರಲ್ಲೇ ಬಿಜೆಪಿ ಗೆಲುವು ಸಾಧಿಸಿದೆ. ಇದರೊಂದಿಗೆ ವಿಜಯ ಯಾತ್ರೆಯ ಆರಂಭವಾಗಿದೆ. ವಿಜಯ ಸಂಕಲ್ಪ ಇಲ್ಲಿಂದಲೇ ಶುರುವಾಗಿದೆ ಎಂದು ಹೇಳಿದರು.

ಸಿದ್ದರಾಮಯ್ಯಗೆ ಟಾಂಗ್: ಸಾಮಾಜಿಕ ಮಾಧ್ಯಮಗಳಲ್ಲಿ ಒಂದು ವಿಡಿಯೋ ನೋಡಿದೆ. ರಾಜ್ಯದ ಮಾಜಿ ಮುಖ್ಯಮಂತ್ರಿಯೂ ಆಗಿರುವ ಪ್ರತಿಪಕ್ಷದ ಪ್ರಮುಖ ನಾಯಕರೊಬ್ಬರು ಕಾರ್ಯಕರ್ತರ ಕಪಾಳಕ್ಕೆ ಹೊಡೆಯುತ್ತಿದ್ದರು. ತಮ್ಮದೇ ಪಕ್ಷದ ಕಾರ್ಯಕರ್ತರನ್ನು ಗೌರವಿಸದವರು ಜನತಾ ಜನಾರ್ಧನನ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ಬಿಜೆಪಿಯಲ್ಲಿ ಹಾಗಲ್ಲ. ಹಿರಿಯ, ಕಿರಿಯ ಎಂಬುದಿಲ್ಲ. ಎಲ್ಲರೂ ಒಂದೇ. ಎಲ್ಲ ಕಾರ್ಯಕರ್ತರನ್ನೂ ಗೌರವಿಸುತ್ತೇವೆ. ಕರ್ನಾಟಕದ ಎಲ್ಲ ಕಾರ್ಯಕರ್ತರೂ ನನ್ನ ಪರಮ ಮಿತ್ರರು. ನನ್ನ ಸಹೋದರರು ಎಂದು ಮೋದಿ ಹೇಳಿದರು.



ದಾವಣಗೆರೆಯ ಜಿಎಂಐಟಿ ಮೈದಾನದಲ್ಲಿ ನಡೆದ ಬಿಜೆಪಿಯ ಮಹಾಸಂಗಮ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳ್ಳಿ ಗದೆ ನೀಡಿ, ಆತ್ಮೀಯವಾಗಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಮಾಜಿ ಸಿಎಂ ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸಚಿವ ಸಿ.ಸಿ. ಪಾಟೀಲ್, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಇತರರಿದ್ದಾರೆ.

ಅಭಿವೃದ್ಧಿ ಮಂತ್ರ ಪಠಿಸಿದ ಮೋದಿ: ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇ, ವೈಟ್‌ಫೀಲ್ಡ್ ಮೆಟ್ರೋ ಲೋಕಾರ್ಪಣೆ ಸೇರಿದಂತೆ ಕರ್ನಾಟಕದಲ್ಲಿ ಕೈಗೊಂಡ ಅಭಿವೃದ್ಧಿ ಯೋಜನೆಗಳನ್ನು ಉಲ್ಲೇಖಿಸಿದ ಮೋದಿ, ಡಬಲ್ ಎಂಜಿನ್ ಸರ್ಕಾರದಿಂದ ಅಭಿವೃದ್ಧಿ ಸಾಧ್ಯವಾಗಿದೆ ಎಂದರು. ಹಿಂದೆ ಕಾಂಗ್ರೆಸ್, ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರದಲ್ಲಿತ್ತು. ಆ ಸರ್ಕಾರ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಪ್ರಯೋಜನ ಹೆಚ್ಚು ರೈತರಿಗೆ ದೊರೆಯದಂತೆ ಮಾಡಿತ್ತು. ಆದರೆ, ಡಬಲ್ ಎಂಜಿನ್ ಸರ್ಕಾರ ಬಂದ ನಂತರ ಹೆಚ್ಚು ರೈತರಿಗೆ ಪ್ರಯೋಜನ ದೊರೆಯುವಂತಾಯಿತು. ಕರ್ನಾಟಕ ಸರ್ಕಾರ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಗೆ ಮತ್ತೆ ಹಣ ಸೇರಿಸಿ ರೈತರಿಗೆ ನೀಡಿತು. ಇದು ಡಬಲ್ ಎಂಜಿನ್ ಸರ್ಕಾರ ಪ್ರಯೋಜನ ಎಂದು ಮೋದಿ ಹೇಳಿದರು.

ಕರ್ನಾಟಕಕ್ಕೆ ಸ್ಥಿರ ಸರ್ಕಾರ ಬೇಕೇ ಬೇಕು: ದಲಿತ, ಆದಿವಾಸಿ ಸೇರಿದಂತೆ ವಂಚಿತ ಸಮುದಾಯಗಳ ಏಳಿಗೆಯೇ ನಮ್ಮ ಆದ್ಯತೆಯಾಗಿದೆ. ಎಲ್ಲ ಆಶಯಗಳನ್ನು ಈಡೇರಿಸುವುದಕ್ಕಾಗಿ ಪೂರ್ಣ ಬಹುಮತದ ಅಗತ್ಯವಿದೆ. ಕರ್ನಾಟಕಕ್ಕೆ ಸ್ಥಿರ ಸರ್ಕಾರ ಬೇಕಾಗಿದೆ ಎಂದ ಮೋದಿ, ರಾಜ್ಯಕ್ಕೆ ಪೂರ್ಣ ಬಹುಮತದ ಸರ್ಕಾರ ಬೇಕೋ ಬೇಡವೋ ಎಂದು ಜನರನ್ನು ಪ್ರಶ್ನಿಸಿದರು. ಲಂಬಾಣಿ ತಾಂಡಗಳಿಗೆ ಹಕ್ಕು ಪತ್ರ ನೀಡಿದ್ದೇವೆ. ದಲಿತರು, ಆದಿವಾಸಿಗಳು, ವಂಚಿತರನ್ನು ಕಡೆಗಣಿಸಿಲ್ಲ. ಕರ್ನಾಟಕಕ್ಕೆ ಅವಕಾಶವಾದಿ ಸಮ್ಮಿಶ್ರ ಸರ್ಕಾರದಿಂದ ನಷ್ಟವಾಗಿದೆ. ಇಲ್ಲಿ ಬಹುಮತದ ಬಿಜೆಪಿ ಸರ್ಕಾರ ಬೇಕು. ಬಹುಮತ ಸಿಗದಿದ್ದರೆ, ರಾಜ್ಯಕ್ಕೆ ಅನುಕೂಲವಿಲ್ಲ. ಸದೃಢ ಸರ್ಕಾರ ಬೇಕು. ಕರ್ನಾಟಕದ ಉಜ್ವಲ ಭವಿಷ್ಯಕ್ಕಾಗಿ ಸ್ಥಿರ ಸರ್ಕಾರ ಅಗತ್ಯ ಎಂದು ಅವರು ಮತ್ತೆ ಮತ್ತೆ ಒತ್ತಿ ಹೇಳಿದರು.

ಕಮಲ ಅರಳಲಿದೆ: ಮೋದಿ ಸಮಾಧಿಗೆ ಗುಂಡಿ ತೋಡುತ್ತಿದ್ದೇವೆ ಎಂದು ಕಾಂಗ್ರೆಸ್ ಹೇಳಿತ್ತು. ಆದರೆ, 'ಮೋದಿ ನಿಮ್ಮ ಕಮಲ ಅರಳಲಿದೆ' ಎಂದು ಜನರು ಹೇಳುತ್ತಿದ್ದಾರೆ. ಕರ್ನಾಟಕದಲ್ಲಿ ಬೆಂಗಳೂರು ನಗರ ವೇಗಗತಿಯಲ್ಲಿ ಬೆಳೆಯುತ್ತಿದೆ. ಅದಕ್ಕಾಗಿ ಸಿಎಂ ಬೊಮ್ಮಾಯಿ ಮತ್ತು ಸಂಪುಟದ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸಮಾವೇಶ ವೇದಿಕೆ ಸುತ್ತ ಭರ್ಜರಿ ರೋಡ್ ಶೋ: ಸಮಾವೇಶ ಆರಂಭಕ್ಕೂ ಮುನ್ನ ತೆರೆದ ವಾಹನದಲ್ಲಿ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ನಳಿನ್‌ಕುಮಾರ್ ಕಟೀಲ್ ಶೋ ನಡೆಸಿದರು. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನರು ಪುಷ್ಪವೃಷ್ಟಿ ಸುರಿಸುವ ಮೂಲಕ ಮೋದಿಗೆ ಗೌರವ ಸಲ್ಲಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com


ಬಿ.ರಾಚಯ್ಯ ಪ್ರತಿಷ್ಠಾನ
ಚಾಮರಾಜನಗರ
ಇವರ ವತಿಯಿಂದ
ಬೃಹತ್ ಉದ್ಯೋಗ ಮೇಳ
ಸ್ಥಳ: ಕೊಳ್ಳೇಗಾಲದ ನ್ಯಾಷನಲ್ ಶಾಲಾ ಆವರಣ
ಮಾರ್ಚ್ 26 ಭಾನುವಾರ, ಬೆಳಗ್ಗೆ 9ಗಂಟೆಗೆ
ಪಾಲ್ಗೊಳ್ಳಲು ವಿದ್ಯಾರ್ಹತೆ
10ನೇ ತರಗತಿ, ಪಿಯುಸಿ, ಐಟಿಐ, ಬಿಇ,
ಎಂಬಿಎ, ಡಿಪ್ಲೋಮಾ, ಯಾವುದೇ ಪದವಿ
ಸಂಬಳ-12 ರಿಂದ 35 ಸಾವಿರ
(ಪಿಎಫ್, ಇಎಸ್‌ಐ ಮತ್ತು ಇತರೆ ಸೌಲಭ್ಯಗಳು)
ಸಂದರ್ಶನ ಸಮಯ :10-30 ರಿಂದ 1-30
ಆಯ್ಕೆ ಪ್ರಮಾಣ ಪತ್ರ ವಿತರಣೆ 3 ರಿಂದ 4 ರವರೆಗೆ
ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಿ, ಇದರ ಸದುಪಯೋಗ
ನಿಮ್ಮದಾಗಲಿ ಎಂಬ ಶುಭಹಾರೈಕೆಯೊಂದಿಗೆ
ಎ.ಆರ್.ಕೃಷ್ಣಮೂರ್ತಿ
ಮಾಜಿ ಶಾಸಕರು.
ಹಾಗೂ ಅಧ್ಯಕ್ಷರು. ಬಿ ರಾಚಯ್ಯ ಪ್ರತಿಷ್ಠಾನ.
ಚಾಮರಾಜನಗರ


ಪಂಚರತ್ನ ರಥಯಾತ್ರೆ
ರಮೇಶ್
ಕೆ.ಉಮಾಶಂಕರ್
ಮಾಜಿ ಅಧ್ಯಕ್ಷರು,
ವೆಂಕಟೇಶ್
ಶ್ರೀಧರ್
ರಾಜೇಶ್
ಕುಮಾರ್
ಶುಭಕೋರುವವರು
ಸಿದ್ಧಿವಿನಾಯಕ ಗ್ರೂಪ್


2023ರ ಮುಖ್ಯಮಂತ್ರಿಗಳಾದ
ಹೆಚ್.ಡಿ.ಕುಮಾರಸ್ವಾಮಿರವರಿಗೆ ಸುಸ್ವಾಗತ
ಜೆಡಿಎಸ್ ಪಕ್ಷದ ಮಹತ್ವಾಕಾಂಕ್ಷಿ ಪಂಚರತ್ನ
ರಥಯಾತ್ರೆಯ ಸಮಾರೋಪ ಸಮಾರಂಭ
ನಾಡಿನ ಸಮಸ್ತ ನಾಗರಿಕರು ಪಕ್ಷದ ಅಭಿಮಾನಿಗಳು ಕಾರ್ಯಕರ್ತರು
ಈ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕಾಗಿ ಕೋರಿಕೆ
ದಿನಾಂಕ : 26.03.2023
ಸಂಜೆ : 4 ಗಂಟೆಗೆ
ಸ್ಥಳ : ಮೈಸೂರು ರಿಂಗ್ ರೋಡ್,
ಮೈಸೂರು
ಪಂಚರತ್ನ ರಥಯಾತ್ರೆ
VISMAYA PRINTS

ಮೂರನೇ ಪುಟದಿಂದ

ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ

1.	ಚಿಕ್ಕೋಡಿ-ಸದಲಗಾ	-ಗಣೇಶ್ ಹುಕ್ಕೇರಿ
2.	ಕಾಗವಾಡ	-ಬರಮಗೌಡ ಅಲಗೌಡ ಕಾಗೆ
3.	ಕುಡಚಿ (ಎಸ್‌ಸಿ)	-ಮಹೇಂದ್ರ ಕೆ.ತಮ್ಮಣ್ಣನವರ್
4.	ಹುಕ್ಕೇರಿ	-ಎ.ಬಿ.ಪಾಟೀಲ
5.	ಯಮಕನಮರಡಿ(ಎಸ್‌ಟಿ)	-ಸತೀಶ್ ಜಾರಕಿಹೊಳಿ
6.	ಬೆಳಗಾವಿ ಗ್ರಾಮಾಂತರ	-ಲಕ್ಷ್ಮೀ ಹೆಬ್ಬಾಳ್ಕರ್
7.	ಖಾನಾಪುರ	-ಡಾ.ಅಂಜಲಿ ನಿಂಬಾಳ್ಕರ್
8.	ಬೈಲಹೊಂಗಲ	-ಮಹಾಂತೇಶ್ ಶಿವಾನಂದ ಕೌಜಲಗಿ
9.	ರಾಮದುರ್ಗ	-ಅಶೋಕ್ ಎಂ.ಪಟ್ಟಣ
10.	ಜಮಖಂಡಿ	-ಆನಂದ ಸಿದ್ದು ನ್ಯಾಮಗೌಡ
11.	ಹುನಗುಂದ	-ವಿಜಯಾನಂದ ಎಸ್.ಕಾಶಪ್ಪನವರ್
12.	ಮುದ್ದೇಬಿಹಾಳ	-ಅಪ್ಪಾಜಿ ಅಲಿಯಾಸ್ ಸಿ.ಎಸ್.ನಾಡಗೌಡ
13.	ಬಸವನಬಾಗೇವಾಡಿ	-ಶಿವಾನಂದ ಪಾಟೀಲ
14.	ಬಬಲೇಶ್ವರ	-ಎಂ.ಬಿ.ಪಾಟೀಲ
15.	ಇಂಡಿ	-ಯಶವಂತರಾಯಗೌಡ ವಿ.ಪಾಟೀಲ್
16.	ಜೇವರ್ಗಿ	-ಡಾ.ಅಜಯ್ ಧರಂಸಿಂಗ್
17.	ಸುರಪುರ(ಎಸ್‌ಟಿ)	-ರಾಜಾವೆಂಕಟಪ್ಪ ನಾಯ್ಕ್
18.	ಶಹಾಪುರ	-ಶರಣಬಸಪ್ಪ ಗೌಡ
19.	ಚಿತ್ತಾಪುರ(ಎಸ್‌ಸಿ)	-ಪ್ರಿಯಾಂಕ್ ಖರ್ಗೆ
20.	ಸೇಡಂ	-ಡಾ.ಶರಣಪ್ರಕಾಶ್ ಪಾಟೀಲ್
21.	ಚಿಂಚೋಳಿ	-ಎಸ್.ಸಿ.ಸುಭಾಷ್ ವಿ.ರಾಥೋಡ್
22.	ಗುಲ್ಬರ್ಗಾ(ಉತ್ತರ)	-ಕನೀಝ್ ಫಾತಿಮಾ
23.	ಆಳಂದ	-ಬಿ.ಆರ್.ಪಾಟೀಲ
24.	ಹುಮನಾಬಾದ್	-ರಾಜಶೇಖರ್ ಬಿ.ಪಾಟೀಲ
25.	ಬೀದರ್ ದಕ್ಷಿಣ	-ಅಶೋಕ್ ಖೇಣಿ
26.	ಬೀದರ್	-ರಹೀಂ ಖಾನ್
27.	ಭಾಲ್ಕಿ	-ಈಶ್ವರ್ ಖಂಡ್ರೆ
28.	ರಾಯಚೂರು ಗ್ರಾ.(ಎಸ್‌ಟಿ)	-ಬಸನಗೌಡ ದದ್ದಲ್
29.	ಮಸ್ಕಿ(ಎಸ್‌ಟಿ)	-ಬಸನಗೌಡ ತುರುವಿಹಾಳ
30.	ಕುಷ್ಟಗಿ	-ಅಮರೇಗೌಡ ಪಾಟೀಲ್ ಬಯ್ಯಾಪುರ
31.	ಕನಕಗಿರಿ(ಎಸ್‌ಸಿ)	-ಶಿವರಾಜ್ ತಂಗಡಗಿ
32.	ಯಲಬುರ್ಗಾ	-ಬಸವರಾಜ ರಾಯರೆಡ್ಡಿ
33.	ಕೊಪ್ಪಳ	-ಕೆ.ರಾಘವೇಂದ್ರ
34.	ಗದಗ-	ಎಚ್.ಕೆ.ಪಾಟೀಲ
35.	ರೋಣ	-ಜಿ.ಎಸ್.ಪಾಟೀಲ
36.	ಹುಬ್ಬಳ್ಳಿ-ಧಾರವಾಡ-ಪೂರ್ವ(ಎಸ್‌ಸಿ)	-ಪ್ರಸಾದ್ ಅಬ್ಬಯ್ಯ
37.	ಹಳಿಯಾಳ	-ಆರ್.ವಿ.ದೇಶಪಾಂಡೆ
38.	ಕಾರವಾರ	-ಸತೀಶ್ ಕೃಷ್ಣ ಸೈಲ್
39.	ಭಟ್ಕಳ	-ಮಂಕಾಳ ಸುಬ್ಬ ವೈದ್ಯ
40.	ಹಾನಗಲ್	-ಶ್ರೀನಿವಾಸ್ ವಿ.ಮಾನೆ
41.	ಹಾವೇರಿ(ಎಸ್‌ಸಿ)	-ರುದ್ರಪ್ಪ ಲಮಾಣಿ
42.	ಬ್ಯಾಡಗಿ	-ಬಸವರಾಜ್ ಎನ್.ಶಿವಣ್ಣನರ್
43.	ಹಿರೇಕೆರೂರು	-ಯು.ಬಿ.ಬಣಕಾರ್
44.	ರಾಣೆಬೆನ್ನೂರು	-ಪ್ರಕಾಶ್ ಕೆ.ಕೋಳಿವಾಡ್
45.	ಹಡಗಲಿ (ಎಸ್‌ಸಿ)	-ಪಿ.ಟಿ.ಪರಮೇಶ್ವರ ನಾಯ್ಕ್
46.	ಹಗರಿಬೊಮ್ಮನಹಳ್ಳಿ (ಎಸ್‌ಸಿ)	-ಎಲ್.ಬಿ.ಪಿ.ಭೀಮಾ ನಾಯ್ಕ್
47.	ವಿಜಯನಗರ	-ಎಚ್.ಆರ್.ಗವಿಯಪ್ಪ
48.	ಕಂಪ್ಲಿ (ಎಸ್‌ಟಿ)	-ಜೆ.ಎನ್.ಗಣೇಶ್
49.	ಬಳ್ಳಾರಿ (ಎಸ್‌ಟಿ)	-ಬಿ.ನಾಗೇಂದ್ರ
50.	ಸಂಡೂರು (ಎಸ್‌ಟಿ)	-ತುಕಾರಾಂ
51.	ಚಳ್ಳಕೆರೆ (ಎಸ್‌ಟಿ)	-ಟಿ.ರಘುಮೂರ್ತಿ
52.	ಹಿರಿಯೂರು	-ಡಿ.ಸುಧಾಕರ್
53.	ಹೊಸದುರ್ಗ	-ಗೋವಿಂದಪ್ಪ ಬಿ.ಜಿ.
54.	ದಾವಣಗೆರೆ (ಉತ್ತರ)	-ಎಸ್.ಎಸ್.ಮಲ್ಲಿಕಾರ್ಜುನ್
55.	ದಾವಣಗೆರೆ (ದಕ್ಷಿಣ)	-ಶಾಮನೂರು ಶಿವಶಂಕರಪ್ಪ
56.	ಮಾಯಕೊಂಡ (ಎಸ್‌ಸಿ)	-ಕೆ.ಎಸ್.ಬಸವರಾಜು
57.	ಭದ್ರಾವತಿ	-ಸಂಗಮೇಶ್ವರ ಬಿ.ಕೆ.
58.	ಸೊರಬ	-ಮಧು ಬಂಗಾರಪ್ಪ
59.	ಸಾಗರ	-ಗೋಪಾಲಕೃಷ್ಣ ಬೇಲೂರು
60.	ಬೈಂದೂರು	-ಕೆ.ಗೋಪಾಲ ಪೂಜಾರಿ
61.	ಕುಂದಾಪುರ	-ಎಂ.ದಿನೇಶ್ ಹೆಗ್ಡೆ
62.	ಕಾಪು	-ವಿನಯ್‌ಕುಮಾರ್ ಸೊರಕೆ
63.	ಶೃಂಗೇರಿ	-ಟಿ.ಡಿ.ರಾಜೇಗೌಡ
64.	ಚಿಕ್ಕನಾಯಕನಹಳ್ಳಿ	-ಕಿರಣ್‌ಕುಮಾರ್
65.	ತಿಪಟೂರು	-ಕೆ.ಷಡಕ್ಷರಿ
66.	ತುರುವೇಕೆರೆ	-ಕಾಂತರಾಜ್ ಬಿ.ಎಂ.
67.	ಕುಣಿಗಲ್	-ಡಾ.ಎಚ್.ಡಿ.ರಂಗನಾಥ್
68.	ಕೊರಟಗೆರೆ (ಎಸ್‌ಸಿ)	-ಡಾ.ಜಿ.ಪರಮೇಶ್ವರ
69.	ಶಿರಾ	-ಟಿ.ಬಿ.ಜಯಚಂದ್ರ
70.	ಪಾವಗಡ (ಎಸ್‌ಸಿ)	-ಎಚ್.ವಿ.ವೆಂಕಟೇಶ್
71.	ಮಧುಗಿರಿ	-ಕೆ.ಎನ್.ರಾಜಣ್ಣ
72.	ಗೌರಿಬಿದನೂರು	-ಶಿವಶಂಕರ್ ರೆಡ್ಡಿ ಎನ್.ಎಚ್.
73.	ಬಾಗೇಪಲ್ಲಿ	-ಎಸ್.ಎನ್.ಸುಬ್ಬಾರೆಡ್ಡಿ
74.	ಚಿಂತಾಮಣಿ	-ಡಾ.ಎಂ.ಸಿ.ಸುಧಾಕರ್
75.	ಶ್ರೀನಿವಾಸಪುರ	-ಕೆ.ಆರ್.ರಮೇಶ್ ಕುಮಾರ್
76.	ಕೋಲಾರ (ಗೋಲ್ಡ್ ಫೀಲ್ಡ್ ಕೆಜಿಎಫ್) (ಎಸ್‌ಸಿ)	-ರೂಪಕಲಾ ಎಂ.
77.	ಬಂಗಾರಪೇಟೆ (ಎಸ್‌ಟಿ)	-ಎಸ್.ಎನ್.ನಾರಾಯಣಸ್ವಾಮಿ
78.	ಮಾಲೂರು	-ಕೆ.ವೈ.ನಂಜೇಗೌಡ
79.	ಬ್ಯಾಟರಾಯನಪುರ	-ಕೃಷ್ಣಬೈರೇಗೌಡ
80.	ರಾಜರಾಜೇಶ್ವರಿನಗರ	-ಕುಸುಮ ಹನುಮಂತರಾಯಪ್ಪ
81.	ಮಲ್ಲೇಶ್ವರಂ	-ಅನೂಪ್ ಅಯ್ಯಂಗಾರ್
82.	ಹೆಬ್ಬಾಳ	-ಭೈರತಿ ಸುರೇಶ್
83.	ಸರ್ವಜ್ಞನಗರ	-ಕೆ.ಜೆ.ಜಾರ್ಜ್
84.	ಶಿವಾಜಿನಗರ	-ರಿಜ್ವಾನ್ ಅರ್ಷದ್
85.	ಶಾಂತಿನಗರ	-ಎನ್.ಎ.ಹ್ಯಾರಿಸ್
86.	ಗಾಂಧಿನಗರ	-ದಿನೇಶ್ ಗುಂಡೂರಾವ್
87.	ರಾಜಾಜಿನಗರ	-ಪುಟ್ಟಣ್ಣ
88.	ಗೋವಿಂದರಾಜನಗರ	-ಪ್ರಿಯಾಕೃಷ್ಣ
89.	ವಿಜಯನಗರ	-ಎಂ.ಕೃಷ್ಣಪ್ಪ
90.	ಚಾಮರಾಜಪೇಟೆ	-ಜಮೀರ್ ಅಹಮದ್
91.	ಬಸವನಗುಡಿ	-ಯು.ಬಿ.ವೆಂಕಟೇಶ್
92.	ಬಿಟಿಎಂ ಲೇಔಟ್	-ರಾಮಲಿಂಗಾ ರೆಡ್ಡಿ
93.	ಜಯನಗರ	-ಸೌಮ್ಯಾ ರೆಡ್ಡಿ
94.	ಮಹದೇವಪುರ (ಎಸ್‌ಟಿ)	-ಹೆಚ್.ನಾಗೇಶ್
95.	ಆನೇಕಲ್ (ಎಸ್‌ಸಿ)	-ಬಿ.ಶಿವಣ್ಣ
96.	ಹೊಸಕೋಟೆ	-ಶರತ್ ಬಚ್ಚೇಗೌಡ
97.	ದೇವನಹಳ್ಳಿ (ಎಸ್‌ಸಿ)	-ಕೆ.ಎಚ್.ಮುನಿಯಪ್ಪ
98.	ದೊಡ್ಡಬಳ್ಳಾಪುರ	-ಟಿ.ವೆಂಕಟರಾಮಯ್ಯ
99.	ನೆಲಮಂಗಲ (ಎಸ್‌ಸಿ)	-ಶ್ರೀನಿವಾಸಯ್ಯ ಎನ್
100.	ಮಾಗಡಿ	-ಎಚ್.ಸಿ.ಬಾಲಕೃಷ್ಣ
101.	ರಾಮನಗರ	-ಇಕ್ಬಾಲ್ ಹುಸೇನ್ ಎಚ್.ಎ.
102.	ಕನಕಪುರ	-ಡಿ.ಕೆ.ಶಿವಕುಮಾರ್
103.	ಮಳವಳ್ಳಿ (ಎಸ್‌ಸಿ)	-ಪಿ.ಎಂ.ನರೇಂದ್ರಸ್ವಾಮಿ
104.	ಶ್ರೀರಂಗಪಟ್ಟಣ	-ಎ.ಬಿ.ರಮೇಶ್ ಬಂಡಿಸಿದ್ದೇಗೌಡ
105.	ನಾಗಮಂಗಲ	-ಚಲುವರಾಯಸ್ವಾಮಿ
106.	ಹೊಳೆನರಸೀಪುರ	-ಶ್ರೇಯಸ್ ಎಂ.ಪಟೇಲ್
107.	ಸಕಲೇಶಪುರ	-ಮುರಳಿ ಮೋಹನ್
108.	ಬೆಳ್ತಂಗಡಿ	-ರಕ್ಷಿತ್ ಶಿವರಾಮ್
109.	ಮೂಡುಬಿದಿರೆ	-ಮಿಥುನ್ ರೈ
110.	ಮಂಗಳೂರು (ಉಳ್ಳಾಲ)	-ಯು.ಟಿ.ಖಾದರ್
111.	ಬಂಟ್ವಾಳ	-ರಮಾನಾಥ ರೈ
112.	ಸುಳ್ಯ (ಎಸ್‌ಸಿ)	-ಕೃಷ್ಣಪ್ಪ ಜಿ.
113.	ವಿರಾಜಪೇಟೆ	-ಎ.ಎಸ್.ಪೊನ್ನಣ್ಣ
114.	ಪಿರಿಯಾಪಟ್ಟಣ	-ಕೆ.ವೆಂಕಟೇಶ್
115.	ಕೃಷ್ಣರಾಜನಗರ	-ಡಿ.ರವಿಶಂಕರ್
116.	ಹುಣಸೂರು	-ಎಚ್.ಪಿ.ಮಂಜುನಾಥ್
117.	ಹೆಗ್ಗಡದೇವನಕೋಟೆ (ಎಸ್‌ಟಿ)	-ಅನಿಲ್ ಕುಮಾರ್ ಸಿ
118.	ನಂಜನಗೂಡು (ಎಸ್‌ಸಿ)	-ದರ್ಶನ್ ಧ್ರುವನಾರಾಯಣ್
119.	ನರಸಿಂಹರಾಜ	-ತನ್ವೀರ್ ಸೇಠ್
120.	ವರುಣಾ	-ಸಿದ್ದರಾಮಯ್ಯ
121.	ಟಿ.ನರಸೀಪುರ (ಎಸ್‌ಸಿ)	-ಎಚ್.ಸಿ.ಮಹದೇವಪ್ಪ
122.	ಹನೂರು	-ಆರ್.ನರೇಂದ್ರ
123.	ಚಾಮರಾಜನಗರ	-ಸಿ.ಪುಟ್ಟರಂಗಶೆಟ್ಟಿ
124.	ಗುಂಡ್ಲುಪೇಟೆ-	ಕೆ.ಎಂ.ಗಣೇಶ್ ಪ್ರಸಾದ್

ಅದೇ ರೀತಿ ಹಾಲಿ ಶಾಸಕ ರಾಮಲಿಂಗಾರೆಡ್ಡಿ ಬಿಟಿಎಂ. ಲೇಔಟ್‌ನಲ್ಲಿ, ಅವರ ಪುತ್ರಿ ಸೌಮ್ಯರೆಡ್ಡಿ ಜಯನಗರದಿಂದ, ಮುನಿಯಪ್ಪ ದೇವನಹಳ್ಳಿಯಿಂದ, ಅವರ ಪುತ್ರಿ ರೂಪಾ ಶಶಿಕಲಾ ಬಂಗಾರಪೇಟೆಯಿಂದ ಕಣಕ್ಕಿಳಿದರೆ, ಎಂ.ಕೃಷ್ಣಪ್ಪ ವಿಜಯನಗರದಿಂದಲೂ, ಅವರ ಪುತ್ರ ಪ್ರಿಯಾಕೃಷ್ಣಾ ಗೋವಿಂದರಾಜನಗರ ಕ್ಷೇತ್ರದಿಂದ ಕಣಕ್ಕಿಳಿಯುತ್ತಿದ್ದಾರೆ. 124 ಕ್ಷೇತ್ರಗಳಿಗೆ ಪ್ರಕಟಿಸಿರುವ ಅಭ್ಯರ್ಥಿಗಳಲ್ಲಿ ವೀರಶೈವ ಸಮುದಾಯಕ್ಕೆ ಹೆಚ್ಚು ಆದ್ಯತೆ ನೀಡಿದ್ದರೂ, ಉಳಿದ ಎಲ್ಲಾ ಜಾತಿ ಜನಾಂಗಗಳಿಗೂ ಅವಕಾಶ ನೀಡುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಲಿಂಗಾಯಿತ-32, ಎಸ್‌ಸಿ-22, ಒಕ್ಕಲಿಗ-19, ಎಸ್‌ಟಿ-10, ಮುಸ್ಲಿಂ-9, ಕುರುಬ-6, ರೆಡ್ಡಿ-5, ಈಡಿಗ-5, ಬ್ರಾಹ್ಮಣ-5, ಮರಾಠ-2, ರಜಪೂತ, ಕುಂಬಾರ, ಬಂಟರು, ಕ್ರಿಶ್ಚಿಯನ್ ಹಾಗೂ ಬೆಸ್ತರಿಗೆ ತಲಾ ಒಂದು ಕಡೆ ಟಿಕೆಟ್ ನೀಡಲಾಗಿದೆ. ಉಳಿದ ಕ್ಷೇತ್ರಗಳಿಗೆ ಇನ್ನು ಮೂರು ನಾಲ್ಕು ದಿನದಲ್ಲೇ ಪಟ್ಟಿ ಪ್ರಕಟಿಸುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಬಹುತೇಕ ಶೇಕಡ 95 ರಷ್ಟು ಹಾಲಿ ಶಾಸಕರಿಗೆ ಟಿಕೆಟ್ ಸಿಗಲಿದೆ. ಕೆಲವು ಕ್ಷೇತ್ರಗಳಲ್ಲಿ ಮಾತುಕತೆ ಸಂಧಾನ ನಡೆಯುತ್ತಿದ್ದು, ಎರಡನೇ ಪಟ್ಟಿಯಲ್ಲಿ ಉಳಿದ ಹೆಸರುಗಳು ಪ್ರಕಟವಾಗಲಿವೆ ಎಂದರು.

ನಂಜನಗೂಡಿನಿಂದ ಧ್ರುವನಾರಾಯಣ್ ಅವರು ಸ್ಪರ್ಧಿಸಬೇಕಿತ್ತು. ಆದರೆ ಅವರು ನಮ್ಮನ್ನು ಅಗಲಿದ್ದಾರೆ. ಹೀಗಾಗಿ ಯುವಕರಾದ ಅವರ ಪುತ್ರನಿಗೆ ಟಿಕೆಟ್ ನೀಡಿದ್ದೇವೆ ಎಂದರು. ಸಿದ್ದರಾಮಯ್ಯ ಅವರಿಗೆ ಕ್ಷೇತ್ರದ ಆಯ್ಕೆಯನ್ನು ಅವರ ವಿವೇಚನಗೆ ಬಿಡಲಾಗಿತ್ತು. ಅವರು ವರುಣಾದಿಂದ ಸ್ಪರ್ಧಿಸಲು ಇಚ್ಚಿಸಿದ್ದಾರೆ. ಅದರಂತೆ ಪಕ್ಷ ಟಿಕೆಟ್ ನೀಡಿದೆ. ಅವರಿಗೆ ಮತ್ತೊಂದು ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡುತ್ತೀರಾ ಎಂಬ ಪ್ರಶ್ನೆಗೆ ಹೈಕಮಾಂಡ್ ಇದಕ್ಕೆ ಉತ್ತರಿಸಬೇಕು ಎಂದರು.

ಪಟ್ಟಿ ಬಿಡುಗಡೆ: ಡಿಕೆಶಿ

ಮಾತುಕತೆ ಸಂಧಾನ ನಡೆಯುತ್ತಿದ್ದು, ಎರಡನೇ ಪಟ್ಟಿಯಲ್ಲಿ ಉಳಿದ ಹೆಸರುಗಳು ಪ್ರಕಟವಾಗಲಿದೆ ಎಂದು ಹೇಳಿದರು.

ಧ್ರುವನಾರಾಯಣ ಅವರ ಪುತ್ರನಿಗೆ ಟಿಕೆಟ್ ನೀಡಿರುವ ವಿಚಾರವಾಗಿ ಮಾತನಾಡಿ, ಈ ಕ್ಷೇತ್ರದಲ್ಲಿ ಧ್ರುವನಾರಾಯಣ ಅವರು ಸ್ಪರ್ಧಿಸಬೇಕಿತ್ತು. ಆದರೆ, ಅವರು ನಮ್ಮನ್ನು ಅಗಲಿದ್ದಾರೆ. ಹೀಗಾಗಿ ಯುವಕರಾದ ಅವರ ಪುತ್ರನಿಗೆ ಟಿಕೆಟ್ ನೀಡಿದ್ದೇವೆಂದು ತಿಳಿಸಿದರು. ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರದಿಂದ ಸ್ಪರ್ಧಿಸುವ ವಿಚಾರವಾಗಿ ಮಾತನಾಡಿ, 'ಕ್ಷೇತ್ರ ಆಯ್ಕೆಯನ್ನು ಸಿದ್ದರಾಮಯ್ಯನವರ ವಿವೇಚನೆಗೆ ಬಿಡಲಾಗಿತ್ತು. ಅವರು ವರುಣಾದಿಂದ ಸ್ಪರ್ಧಿಸಲು ಇಚ್ಚಿಸಿದ್ದು, ಪಕ್ಷ ಟಿಕೆಟ್ ನೀಡಿದೆ ಎಂದರು. ಇನ್ನೂ, ಕೋಲಾರ ಹಾಗೂ ಬಾದಾಮಿ ಕ್ಷೇತ್ರಗಳಲ್ಲಿ ಟಿಕೆಟ್ ಘೋಷಣೆಯಾಗದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಮತ್ತೊಂದು ಕ್ಷೇತ್ರದಿಂದ ಸ್ಪರ್ಧಿಸಬಹುದೇ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿ, ಈ ಪ್ರಶ್ನೆಯನ್ನು ಪಕ್ಷದ ಹೈಕಮಾಂಡ್‌ಗೆ ಕೇಳಬೇಕು ಎಂದು ತಿಳಿಸಿದರು.

ಪಂಚರತ್ನ ಯಾತ್ರೆ ಸಮಾರೋಪ ಸಮಾವೇಶ

ರಚನೆಯ ಸ್ಪಷ್ಟ ಸಂದೇಶ ನೀಡಲಾಗುವುದು. ರಾಜ್ಯದಲ್ಲಿ ಹಿಂದೆಂದೂ ನಡೆಯದಿರದ, ಮುಂದೆಂದೂ ನಡೆಯದ ರೀತಿಯಲ್ಲಿ ಪಂಚರತ್ನ ಸಮಾರೋಪ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ಹೆಚ್‌ಡಿ.ದೇವೇಗೌಡರೇ ಅಟ್ರಾಕ್ಷನ್: ಪಂಚರತ್ನ ಸಮಾರೋಪ ಸಮಾವೇಶದ ಸೆಂಟರ್ ಆಫ್ ಅಟ್ರಾಕ್ಷನ್ ಹೆಚ್.ಡಿ.ದೇವೇಗೌಡರೇ ಆಗಿರಲಿದ್ದಾರೆ. ಕಳೆದ ಆರೇಳು ತಿಂಗಳಿಂದ ಅವರು, ಯಾವುದೇ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ. ಅಲ್ಲದೆ ಕಾರ್ಯಕರ್ತರು ಅವರನ್ನು ಭೇಟಿ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ನಾಳೆಯ ಪಂಚರತ್ನ ರಥಯಾತ್ರೆ ಸಮಾರೋಪ ಸಮಾವೇಶದ ಮೂಲಕ ಸಾರ್ವಜನಿಕರೊಂದಿಗೆ ಮಾತನಾಡಲಿದ್ದಾರೆ. ವೈದ್ಯರ ಸಲಹೆ ಮೇರೆಗೆ ರೋಡ್ ಶೋ ಇರುವುದಿಲ್ಲ. ನೇರವಾಗಿ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಅಭೂತಪೂರ್ವ ಬೆಂಬಲ: ಕಳೆದ ಮೂರು ತಿಂಗಳಿಂದ ರಾಜ್ಯದೆಲ್ಲೆಡೆ ನಡೆದ ಪಂಚರತ್ನ ರಥಯಾತ್ರೆಗೆ ಜನತೆಯ ಅಭೂತಪೂರ್ವ ಬೆಂಬಲ ದೊರೆತಿದೆ. ಎಲ್ಲಿಯೂ ಯಾವುದೇ ತರಹದ ತೊಂದರೆಯಾಗದೆ ಸಮಾರೋಪದ ಹಂತಕ್ಕೆ ತಲುಪಿದೆ. ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಜನರು ತಡರಾತ್ರಿಯವರೆಗೂ ಕಾದು ರಥಯಾತ್ರೆಯಲ್ಲಿ ಆಶೀರ್ವಾದ ಮಾಡಿದ್ದಾರೆ. ಹಾಗೆಯೇ ಸಮಾರೋಪ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕೆಂದು ತಾಯಿ ಚಾಮುಂಡೇಶ್ವರಿ ಹಾಗೂ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನಲ್ಲಿ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದರು.

ನಮ್ಮಲ್ಲಿ ದೊಡ್ಡ ನಾಯಕರ ದಂಡಿಲ್ಲ: ಮೈಸೂರು ಭಾಗದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿರುವ ಕುರಿತು ಪ್ರತಿಕ್ರಿಯಿಸಿದ ಹೆಚ್‌ಡಿಕೆ, ರಾಷ್ಟ್ರೀಯ ಪಕ್ಷಗಳಲ್ಲಿ ಇರುವಂತೆ ನಮ್ಮಲ್ಲಿ ದೊಡ್ಡ ನಾಯಕರ ದಂಡಿಲ್ಲ. ಇರುವುದೇ ಮೂರು ಮತ್ತೊಬ್ಬರು. ಸಿಎಂ ಇಬ್ರಾಹಿಂ ಅವರು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಆದರೆ ಈ ಕುರಿತು ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು. ಮುಖ್ಯವಾಗಿ ಅವರು ರಾಜ್ಯ ನಾಯಕರಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲಿಯೂ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು. ಆದ್ದರಿಂದ ಚರ್ಚಿಸಿ ತಿಳಿಸಲಾಗುವುದು ಎಂದು ಹೇಳಿದರು.

ರಾಷ್ಟ್ರ, ರಾಜ್ಯ ರಾಜಕಾರಣ ಕುರಿತು ಚರ್ಚೆ: ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಕುರಿತು ಪ್ರತಿಕ್ರಿಯಿಸಿ, ಪ್ರಾದೇಶಿಕ ಪಕ್ಷದ ಮುಖಂಡರನ್ನು ಭೇಟಿ ಮಾಡುವ ಅವರ ಕಾರ್ಯಕ್ರಮದಂತೆ ನಾನು ಕೂಡ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿದ್ದೇನೆ. ರಾಷ್ಟ್ರ, ರಾಜ್ಯ ರಾಜಕಾರಣ ಕುರಿತು ಹಲವಾರು ವಿಷಯಗಳನ್ನು ಚರ್ಚಿಸಲಾಯಿತು. ಮುಂಬರುವ ಲೋಕಸಭಾ ಚುನಾವಣೆಗೆ ಪ್ರಾದೇಶಿಕ ಪಕ್ಷಗಳು ಒಂದಾಗಿರುವಂತೆ ಚರ್ಚಿಸಲಾಯಿತು ಎಂದರು. ಶಾಸಕರಾದ ಜಿ.ಟಿ.ದೇವೇಗೌಡ, ಅಶ್ವಿನ್ ಕುಮಾರ್ ಸೇರಿದಂತೆ ಸ್ಥಳೀಯ ಮುಖಂಡರು, ಪಾಲಿಕೆ ಸದಸ್ಯರು, ಕಾರ್ಯಕರ್ತರು ಉಪಸ್ಥಿತರಿದ್ದರು.

ವೈರಮುಡಿ ಉತ್ಸವಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ: ಡಿಸಿ ಗೋಪಾಲಕೃಷ್ಣ



ಮಂಡ್ಯ, ಮಾ.25- ಮೇಲುಕೋಟೆ ಶ್ರೀಚೆಲುವನಾರಾಯಣಸ್ವಾಮಿ ವೈರಮುಡಿ ಬ್ರಹ್ಮೋತ್ಸವ ಮಾ.27ರಿಂದ ಏ.8ರವರೆಗೆ ನಡೆಯಲಿದ್ದು, ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ಶನಿವಾರ ಮೇಲುಕೋಟೆಯ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಏ.1ರಂದು ವೈರಮುಡಿ ಕಿರೀಟಧಾರಣೆ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ಸಮರ್ಪಕ ಮೂಲ ಸೌಕರ್ಯ ಕಲ್ಪಿಸುವಂತೆ ಸೂಚಿಸಿದರು.

ಅಗತ್ಯತೆಗೆ ತಕ್ಕಂತೆ ಕುಡಿಯುವ ನೀರಿನ ಟ್ಯಾಂಕರ್‌ಗಳು ವ್ಯವಸ್ಥೆಯಾಗಬೇಕು. ಬಿಸಿಲು ಹೆಚ್ಚಾಗಿರುವುದರಿಂದ ಟ್ಯಾಂಕರ್ ಖಾಲಿಯಾದ ತಕ್ಷಣ ಮರುಪೂರಣವಾಗಬೇಕು. ಶೌಚಾಲಯ, ವಾಹನ ನಿಲುಗಡೆ, ವಯಸ್ಸಾದವರು ಹಾಗೂ ವಿಕಲಚೇತನರಿಗೆ ಬ್ಯಾಟರಿ ಚಾಲಿತ ವಾಹನದ ವ್ಯವಸ್ಥೆಯಾಗಬೇಕು ಎಂದರು.

ಏ.1ರಂದು ವೈರಮುಡಿ ಕಿರೀಟ ಧಾರಣೆ ನಡೆಯುವುದರಿಂದ ರಾಜಮುಡಿ ಹಾಗೂ ವೈರಮುಡಿಯನ್ನು ಜಿಲ್ಲಾ ಖಜಾನೆಯಿಂದ ಮೇಲುಕೋಟೆಗೆ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಗ್ರಾಮಸ್ಥರು ಪೂಜೆ ಸಲ್ಲಿಸುತ್ತಾರೆ. ಈ ವೇಳೆ ಸೂಕ್ತ ಭದ್ರತೆ ವ್ಯವಸ್ಥೆಯಾಗಬೇಕು.

ಜಿಲ್ಲಾ ಖಜಾನೆಯಿಂದ, ಲಕ್ಷ್ಮಿ ಜನಾರ್ಧನ ಸ್ವಾಮಿ ದೇವಸ್ಥಾನ, ಇಂಡುವಾಳು, ತೂಬಿನಕೆರೆ, ಗಣಂಗೂರು, ಶೆಟ್ಟಿಹಳ್ಳಿ, ಕಿರಂಗೂರು ಬನ್ನಿಮಂಟಪ, ಕೂಡಲಕುಪ್ಪೆ ಗೇಟ್, ದರಸಗುಪ್ಪೆ, ಪಾಂಡವಪುರ ರೈಲ್ವೆ ನಿಲ್ದಾಣ, ಕೆನ್ನಾಳು, ಪಾಂಡವಪುರ, ಹಿರೇಮರಳಿ ಗೇಟ್, ಬಳಘಟ್ಟ, ಟಿ.ಎಸ್.ಛತ್ರ, ಮಹದೇಶ್ವರ ಪುರ, ಬೆಳ್ಳಾಳೆ, ಜಕ್ಕನಹಳ್ಳಿ, ತಗಲಕೆರೆ ಮೂಲಕ ಮೇಲುಕೋಟೆ ತಲುಪಲಿದೆ ಎಂದರು.

ಉಪವಿಭಾಗಾಧಿಕಾರಿ, ತಹಶೀಲ್ದಾರ್ ರಾಜಮುಡಿ ಹಾಗೂ ವೈರಮುಡಿ ಸಾಗುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿ ಯಾವುದಾದರೂ ಸ್ಥಳ ಬಿಟ್ಟು ಹೋಗಿದ್ದರೆ ಸೇರಿಸಿ. ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿ ಎಂದ ಅವರು, ಆರೋಗ್ಯ ಇಲಾಖೆಯಿಂದ ಆಂಬುಲೆನ್ಸ್ ಹಾಗೂ ವೈದ್ಯಕೀಯ ಸಿಬ್ಬಂದಿ, ಕೊಳದ ಹತ್ತಿರ ನುರಿತ ಈಜುಗಾರರ ನಿಯೋಜನೆ, ಸಿಸಿ ಟಿವಿ ಅಳವಡಿಕೆ, ದೀಪಾಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜು ಮಾತನಾಡಿದರು. ಸಭೆಯಲ್ಲಿ ಜಿಪಂ ಸಿಇಓ ಶಾಂತ ಹುಲ್ಮನಿ, ಎಎಸ್ಪಿ ತಿಮ್ಮಯ್ಯ, ಉಪವಿಭಾಗಾಧಿಕಾರಿ ನಂದೀಶ್ ಸೇರಿದಂತೆ ಇನ್ನಿತರಿದ್ದರು.

ಗೂಡ್ಸ್ ವಾಹನಕ್ಕೆ ಕಾರು ಡಿಕ್ಕಿ
ಕೊಡಗು ಮೂಲದ ತಾಯಿ, ಮಗ ಸಾವು

ಮದ್ದೂರು, ಮಾ.25- ವೇಗವಾಗಿ ಚಲಿಸುತ್ತಿದ್ದ ಗೂಡ್ಸ್ ವಾಹನ ಹಠಾತ್ ಬ್ರೇಕ್ ಹಾಕಿದ ಪರಿಣಾಮ ಹಿಂದೆ ಬರುತ್ತಿದ್ದ ಕಾರು ಡಿಕ್ಕಿ ಹೊಡೆದು ಕೊಡಗು ಮೂಲದ ತಾಯಿ, ಮಗ ಮೃತಪಟ್ಟು, ತಂದೆ ತೀವ್ರವಾಗಿ ಗಾಯಗೊಂಡಿರುವ ಘಟನೆ ಪಟ್ಟಣದ ಹೊರವಲಯದ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ. ಕೊಡಗು ಜಿಲ್ಲೆ, ನಾಪೋಕ್ಲು ಬಳಿಯ ಬಲಮುರಿ ನಿವಾಸಿಗಳಾದ ಚೆಯ್ಯಂಡ ಕವಿತಾ ಮುತ್ತಪ್ಪ (47), ಅವರ ಪುತ್ರ ಆರ್ಯ ಮುತ್ತಪ್ಪ (15) ಮೃತಪಟ್ಟ ದುರ್ದೈವಿಗಳಾಗಿದ್ದು, ಕಾರು ಚಾಲನೆ ಮಾಡುತ್ತಿದ್ದ ಆರ್ಯ ತಂದೆ ಕಟ್ಟಿ ಮುತ್ತಪ್ಪ (54) ತೀವ್ರವಾಗಿ ಗಾಯಗೊಂಡು ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೂಲತಃ ಕೊಡಗಿನವರಾದ ಮುತ್ತಪ್ಪ ಹಾಗೂ ಕವಿತಾ ದಂಪತಿ ಬೆಂಗಳೂರಲ್ಲಿ ವಾಸಿಸುತ್ತಿದ್ದರು. ಯುಗಾದಿ ಹಬ್ಬಕ್ಕೆಂದು ಸ್ವಗ್ರಾಮಕ್ಕೆ ಆಗಮಿಸಿದ್ದ ಇವರು, ಹಬ್ಬ ಮುಗಿಸಿ ಮಾರುತಿ ಸ್ವಿಫ್ಟ್ ಕಾರ್‌ನಲ್ಲಿ ವಾಪಸ್ ಬೆಂಗಳೂರಿಗೆ ತೆರಳುವಾಗ ಘಟನೆ ನಡೆದಿದೆ. ಪಟ್ಟಣದ ಹೊರವಲಯ ಐಶ್ವರ್ಯ ಕಾನ್ವೆಂಟ್ ಬಳಿ ಮಧ್ಯಾಹ್ನ 2.20ರ ಸುಮಾರಿಗೆ ಅಪಘಾತ ಸಂಭವಿಸಿದ್ದು, ಎಕ್ಸ್‌ಪ್ರೆಸ್ ವೇನಲ್ಲಿ ವೇಗವಾಗಿ ಚಲಿಸುತ್ತಿದ್ದ ಗೂಡ್ಸ್ ಟೆಂಪೊ ಬ್ರೇಕ್ ಹಾಕಿದ್ದೇ ಘಟನೆಗೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ. ಡಿಕ್ಕಿಯ ರಭಸಕ್ಕೆ ಆರ್ಯ ಸ್ಥಳದಲ್ಲೇ ಮೃತಪಟ್ಟರೇ ಕವಿತಾ ಮಂಡ್ಯ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದ ಸಂದರ್ಭದಲ್ಲಿ ಕೊನೆಯುಸಿರೆಳೆದರು. ಮುತ್ತಪ್ಪ ಸ್ಥಿತಿ ಚಿಂತಾಜನಕವಾಗಿದ್ದು ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಂಚಾರ ಠಾಣಾ ಸಬ್ ಇನ್‌ಸ್ಪೆಕ್ಟರ್ ಅಯ್ಯನಗೌಡ ಹಾಗೂ ಸಿಬ್ಬಂದಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವಲ್ಲಿ ನೆರವಾದರು. ಈ ಸಂಬಂಧ ಮದ್ದೂರು ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ನಿಂದ ಬಿದ್ದು ಯುವತಿ ಸಾವು

ಮದ್ದೂರು, ಮಾ.25- ಬೈಕ್‌ನಿಂದ ಆಯತಪ್ಪಿ ಬಿದ್ದ ಪರಿಣಾಮ ಯುವತಿ ಸ್ಥಳದಲ್ಲೇ ಸಾವನ್ನಪ್ಪಿ, ಯುವಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಗೆಜ್ಜಲಗೆರೆ ಸಮೀಪ ಶನಿವಾರ ಸಂಜೆ ನಡೆದಿದೆ.

ತಮಿಳುನಾಡು ಮೂಲದ ಪ್ರಿಯಾಂಕ ರಾಜ್(24) ಸ್ಥಳದಲ್ಲೇ ಸಾವನ್ನಪ್ಪಿದ್ದು, ಆಂಧ್ರಪ್ರದೇಶ ಮೂಲದ ಲಕ್ಷ್ಮಿನಾರಾಯಣಗೌಡ (25) ತೀವ್ರ ಗಾಯಗೊಂಡು ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರಿನ ಟಿಸಿಎಸ್ ಕಂಪನಿ ಉದ್ಯೋಗಿಗಳಾಗಿದ್ದ ಇವರಿಬ್ಬರೂ ರಜೆ ನಿಮಿತ್ತ ಬೈಕ್‌ನಲ್ಲಿ ಮೈಸೂರಿಗೆ ತೆರಳಿ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದ ವೇಳೆ ಮೈಸೂರು-ಬೆಂಗಳೂರು ದಶಪಥ ಹೆದ್ದಾರಿಯ ಗೆಜ್ಜಲಗೆರೆ ಸಮೀಪ ಆಯತಪ್ಪಿ ಬಿದ್ದು ಈ ದುರ್ಘಟನೆ ಸಂಭವಿಸಿದೆ. ಈ ವೇಳೆ ಸ್ಥಳಕ್ಕಾಗಮಿಸಿದ ಮದ್ದೂರು ಸಂಚಾರ ಠಾಣೆ ಪೊಲೀಸರು ಪರಿಶೀಲನೆ ನಡೆಸಿದರು. ಯುವತಿ ಶವ ಮದ್ದೂರು ತಾಲೂಕು ಆಸ್ಪತ್ರೆ ಶವಾಗಾರದಲ್ಲಿದ್ದು, ಈ ಸಂಬಂಧ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗೊಳ ಹೋಬಳಿಯ 300 ಮಂದಿಗೆ ಹಕ್ಕುಪತ್ರ ವಿತರಣೆ



ಶ್ರೀರಂಗಪಟ್ಟಣ, ಮಾ.25- ತಾಲೂಕಿನ ಬೆಳಗೊಳ ಹೋಬಳಿ ಮೈಸೂರಿನ ಮುಡಾ ವ್ಯಾಪ್ತಿಗೆ ಸೇರುವುದರಿಂದ ಭೂಗಳ್ಳರ ಕಣ್ಣು ಈ ಭೂಮಿ ಮೇಲಿದೆ. ನಾನು ಅದಕ್ಕೆ ಅವಕಾಶ ಕೊಡದೇ ಈ ಭಾಗದ 2 ಸಾವಿರಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ಮನೆ ಹಕ್ಕುಪತ್ರ ವಿತರಿಸಿದ್ದೇನೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ತಾಲೂಕಿನ ಬೆಳಗೊಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗೊಳ ಹೋಬಳಿಯ ಬೆಳಗೊಳ, ಹೊಸ ಆನಂದೂರು, ಮಜ್ಜಿಗೆಪುರ ಮತ್ತು ಕೆ.ಆರ್.ಸಾಗರ ಗ್ರಾಮದ 300ಕ್ಕೂ ಹೆಚ್ಚು ಬಡವರಿಗೆ ಮನೆಗಳ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ನಾನು ಜಾತಿ ಭೇದವಿಲ್ಲದೇ ಕ್ಷೇತ್ರದ ಪ್ರತಿಯೊಂದು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದ ಅವರು, ಯಾರೋ ಕೆಲವರು ವೈಯಕ್ತಿಕವಾಗಿ ನನಗೇನು ಸಹಾಯ ಮಾಡಿಲ್ಲ ಎಂದು ನನ್ನನ್ನು ದೂರಿದರೂ ಪರವಾಗಿಲ್ಲ. ಯಾವುದೇ ದಾಖಲೆಗಳಿಲ್ಲದೇ ಹತ್ತಾರು ವರ್ಷಗಳಿಂದ ವಾಸಿಸುತ್ತಿದ್ದ ಈ ಭಾಗದ ಜನರಿಗೆ ಮನೆ ಹಕ್ಕು ಪತ್ರ ವಿತರಿಸಿರುವುದು ಸಂತಸ ತಂದಿದೆ ಎಂದರು.

ಈ ಸಂದರ್ಭ ಕಂದಾಯ ಇಲಾಖೆ ಹಾಗೂ ಪಂಚಾಯಿತಿ ಸಿಬ್ಬಂದಿಯನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಬೆಳಗೊಳ ಗ್ರಾಪಂ ಸದಸ್ಯರಾದ ಪ್ರಕಾಶ್, ರವಿ, ಪ್ರಕಾಶ್, ಶಿವಕುಮಾರ್, ದಾಕ್ಷಾಯಿಣಿ, ವೆಂಕಟಲಕ್ಷ್ಮಮ್ಮ, ಕಾಂತರಾಜು, ಕೃಷ್ಣ, ನಾಗಣ್ಣ, ಕೆ.ಆರ್.ಸಾಗರ ಗ್ರಾಪಂ ಅಧ್ಯಕ್ಷ ಕೆ.ನರಸಿಂಹ, ಸದಸ್ಯ ಮಂಜುನಾಥ್, ಬೆಳಗೊಳ ಹೋಬಳಿ ಮುಖಂಡರಾದ ಬಿ.ವಿ.ಲೋಕೇಶ್, ಸ್ವಾಮಿಗೌಡ, ವಿಷಕಂಠ, ತಾಪಂ ಮಾಜಿ ಸದಸ್ಯರಾದ ಮಹದೇವಸ್ವಾಮಿ, ಭರತ್ ಕುಮಾರ್, ಸ್ವಾಮಣ್ಣ, ಬಾಲಕೃಷ್ಣ, ಉಪ ತಹಸೀಲ್ದಾರ್ ಸಾಕಮ್ಮ, ರಾಜಸ್ವ ನಿರೀಕ್ಷಕ ಜೆ.ಉಮೇಶ್, ಗ್ರಾಮಲೆಕ್ಕಿಗರಾದ ಹರ್ಷಿತಾ, ರಘು, ರಮೇಶ್, ಪಿಡಿಓ ರಫೀಕ್ ಸೇರಿದಂತೆ ನೂರಾರು ಫಲಾನುಭವಿಗಳಿದ್ದರು.

ಶಾಲಾ ಕೊಠಡಿ ಕಾಮಗಾರಿಗೆ ಭೂಮಿ ಪೂಜೆ



ಮಂಡ್ಯ, ಮಾ.25- ನಗರದ 35ನೇ ವಾರ್ಡ್ ದೇವೇಗೌಡನದೊಡ್ಡಿ ಸರ್ಕಾರಿ ಶಾಲೆಯಲ್ಲಿ ಲೋಕೋಪಯೋಗಿ ಇಲಾಖೆಯ 13.90 ಲಕ್ಷ ರೂ. ವೆಚ್ಚದ ನೂತನ ಶಾಲಾ ಕೊಠಡಿ ಕಾಮಗಾರಿಗೆ ಶಾಸಕ ಎಂ.ಶ್ರೀನಿವಾಸ್ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ದೇವೇಗೌಡನದೊಡ್ಡಿ ಗ್ರಾಮದ ರಸ್ತೆ, ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಅಭಿವೃದ್ಧಿಗೆ ಹಣ ಬಿಡುಗಡೆಯಾಗಿದ್ದು, ಹಂತ ಹಂತವಾಗಿ ಕಾಮಗಾರಿ ಆರಂಭಗೊಳ್ಳಲಿದೆ. ನಗರೋತ್ಥಾನ ಯೋಜನೆಯಡಿ ರಸ್ತೆ ಅಭಿವೃದ್ಧಿಗೆ ಟೆಂಡರ್ ಆಗಿದೆ. ಅಂಗನವಾಡಿಗೆ 20 ಲಕ್ಷ ರೂ. ಮಂಜೂರಾಗಿದೆ. ಶಾಲಾ ಕಟ್ಟಡಕ್ಕೆ ಕಳೆದ 5 ತಿಂಗಳಲ್ಲೇ ಹಣ ಬಿಡುಗಡೆಯಾಗಿತ್ತು ಎಂದರು. ಮುಂದಿನ ದಿನಗಳಲ್ಲಿ ಬಿಸಿಯೂಟದ ಕಟ್ಟಡ ಕಾಮಗಾರಿ ಅನುಮೋದನೆಗೊಳ್ಳಲಿದೆ ಎಂದ ಅವರು ಗ್ರಾಮಾಭಿವೃದ್ಧಿಗೆ ನಾನು ಸದಾ ಸಿದ್ಧ. ನಿಮ್ಮೂರಿಗೆ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರೇ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಯೋಗೇಶ್, ಶಿಕ್ಷಣ ಇಲಾಖೆ ಕ್ಷೇತ್ರಾಧಿಕಾರಿ ಉದಯ್, ನಗರಸಭಾ ಸದಸ್ಯೆ ಜಿ.ಎನ್.ಲಲಿತಾ, ಮಾಜಿ ಸದಸ್ಯ ಶಂಕರ್, ಅಧಿಕಾರಿಗಳಾದ ಸ್ವಾಮಿ, ಮಧುಸೂದನ್, ಭರತ್, ಮುಖ್ಯಶಿಕ್ಷಕಿ ರೋಜ್ ಮರಿಸಿ, ಸಹಶಿಕ್ಷಕಿ ಮಮತಾ, ಶಾಂತಮ್ಮ, ಗ್ರಾಮದ ಮುಖಂಡರಿದ್ದರು.

ವೈರಮುಡಿ ಬ್ರಹ್ಮೋತ್ಸವದ ವಿವರ

ಮಂಡ್ಯ, ಮಾ.25- ಮಾ.27 ರಂದು ಶ್ರೀವೈರಮುಡಿ ಬ್ರಹ್ಮೋತ್ಸವಕ್ಕೆ ಅಂಕುರಾರ್ಪಣೆ(ಮೃತ್ತಿಕಾ ಸಂಗ್ರಹಣೆ), ಮಾ.28ರಂದು ಕಲ್ಯಾಣೋತ್ಸವ- ಧಾರಾ ಮಹೋತ್ಸವ- ಅಧಿವಾಸನ- ರಕ್ಷಾ ಬಂಧನ- ಧ್ವಜ ಪ್ರತಿಷ್ಠೆ ಮಾ.29ರಂದು ಧ್ವಜಾರೋಹಣ- ಶ್ರೀ ರಾಮಾನುಜಾಚಾರ್ಯರಿಗೆ ಅಭಿಷೇಕ, ಭೇರಿತಾಡನ- ತಿರುಪ್ಪಲ್ಲಿ- ಹಂಸವಾಹನ- ಯಾಗಶಾಲಾ ಪ್ರವೇಶ, ಮಾ.30ರಂದು ಶ್ರೀರಾಮನವಮಿ- ಶೇಷವಾಹನ ಪಡಿಯೇತ್ತ ಮಾ.31 ರಂದು ನಾಗವಲ್ಲಿ ಮಹೋತ್ಸವ- ನರಾಂಧೋಳಿಕಾರೋಹಣ -ಚಂದ್ರಮಂಡಲ ವಾಹನ -ಪಡಿಯೇತ್ತ, ಏ.1 ರಂದು ಶ್ರೀವೈರಮುಡಿ ಕಿರೀಟಧಾರಣ ಮಹೋತ್ಸವ- ಪಡಿಯೇತ್ತ, ಏ.2 ರಂದು ಪ್ರಹ್ಲಾದ ಪರಿಪಾಲನಾ- ಗರುಡ ವಾಹನ- ವಿಶೇಷ ಪಡಿಯೇತ್ತ, ಏ.3 ರಂದು ಗಜೇಂದ್ರ ಮೋಕ್ಷ- ಅನೆವಸನ್ತ- ಕುದುರೆ ವಾಹನ- ಆನೆ ವಾಹನ ವಿಶೇಷ ಪಡಿಯೇತ್ತ, ಏ.4ರಂದು- ಶ್ರೀಮನ್ನಹಾರಥೋತ್ಸವ ಯಾತ್ರಾದಾನ, ರಥೋತ್ಸವ, ಶ್ರೀ ಚೆಲುವರಾಯಸ್ವಾಮಿ ಮತ್ತು ಶ್ರೀರಾಮಾನುಜರಿಗೆ ಅಭಿಷೇಕ, ಅಮ್ಮನವರ ಸನ್ನಧಿಯಲ್ಲಿ ಬಂಗಾರ ಪಲ್ಲಕ್ಕಿ ಉತ್ಸವ, ಏ.5 ರಂದು ಪಂಗುನ್ನುತ್ತರಮ್- ತೆಪ್ಪೋತ್ಸವ- ಡೋಲೋತ್ಸವ ಕುದುರೆ ವಾಹನ- ಕಳ್ಳರ ಸುಲಿಗೆ, ಏ.6 ರಂದು ಶ್ರೀನಾರಾಯಣಸ್ವಾಮಿ ಜಯನ್ತಿ ಸಂಧಾನ ಸೇವೆ- ಚೂರ್ಣಾಭಿಷೇಕ- ಅವಭೃಥ- ಪಟ್ಟಾಭಿಷೇಕ ಪುಷ್ಪಮಂಟಪಾರೋಹಣ- ಸಮರಭೂಪಾಲ ವಾಹನ- ಪಡಿಮಾಲೆ- ಪೂರ್ಣಾಹುತಿ, ಶಾತ್ತುಮೊರೈ, ಕುಂಭಪ್ರೋಕ್ಷಣೆ, ಏ.7 ರಂದು ಶ್ರೀನಾರಾಯಣಸ್ವಾಮಿಗೆ ಮಹಾಭಿಷೇಕ- ಪುಷ್ಪಯಾಗ- ಕತ್ತಲು ಪ್ರದಕ್ಷಿಣೆ- ಹನುಮಂತ ವಾಹನ- ಉದ್ವಾಸನ ಪ್ರಬಂಧ, ಏ.8 ರಂದು ಶ್ರೀಅಮ್ಮನವರಿಗೆ ಶ್ರೀ ಯೋಗನರಸಿಂಹಸ್ವಾಮಿಗೆ ಮಹಾಭಿಷೇಕ- ಶೇರ್ತಿಸೇವೆ ಕೊಡೈ ತಿರುನಾಳ್ ಉತ್ಸವ ನಡೆಯಲಿದೆ.

PUBLIC NOTICE

Notice is hereby given that my Client is entering into a sale transaction with Smt. Susheela Nagaraj and others having absolute ownership of site bearing No.75, Measuring East to west 60 Feet and North to South 45 Feet, Situated at Nachanahalli 'A' Block extension (J.P.Nagara), Khile Mohalla, Mysuru which is more fully described in the schedule here under. Any Person/s having or claiming any right/s, title, estate or interest/s by way of inheritance/s, mortgage, sale, lease lein, charge, trust, maintenance, easements, transfer, License, Possession, gift, encumbrance or in whatsoever manner are hereby required to give a notice of of the same to the undersigned in the address mentioned below within 07 days from the date of publication here of together with the copies of all documents on the basis of which such claims are made, failing which any such right, title, interest or claim, will be deemed to have been waived and not binding on my client and he will proceed to conclude the transaction without reference to the same if any.

Schedule: All the piece and parcel of residential house property bearing No.75, measuring east to west 60Feet and north to South 45Feet, consisting of 1388 Sq.ft. of ground floor building, Situated at Nachanahalli 'A' Block Extension (J.P.Nagar), Khille Mohalla, Mysuru bounded on the: East by: Road, West by: Site No.79, North by: Site No.74, South by: site No.76

Sd /-H.P.Rakshith. BAL., L.L.B,
Advocate, KAR No.1915/04,
1143/1E, 2nd floor, Chanakya Circle, Geetha Road,
Chamarajapuram, Mysuru-570005
Place: Mysuru, Date: 24.03.2023

PUBLIC NOTICE

It is hereby notified to the general public that my client Smt. Prabha Srinivasa Murthy, W/o Late T. Srinivasa Murthy intends to buy the schedule property from its present owner Smt. Bojamma. A.T., aged about 77 years, W/o Late A.C. Subbaiah, R/O Hebbale Village Virajpet Taluk, Coorg-571264, Aadhar No. 9210 2670 2571.

So any person or persons is holding any kinds of right title either as an agreement holder or holding any kind of GPA document or having any kind of claim on the foot of the said GPA or claiming or ascertaining any rights, title, interest, claim or whatsoever in the schedule property or any part there of in any manner holding any claims against the schedule property under any law for the time being force or has secured attachment from courts or intends to object for sale in favour of my clinet and the proposed mortgage to made out by my client in favour of her bankers on any legal grounds are hereby notified to submit their objections along with documents to the undersigned within 7 days of the issuance of this public notice with all documentary proof.

If no response is received within the said time my client shall proceed with the sale process will be concluded and there after no body whom-so-ever would have any claim what-so-ever and how-so-ever will not bind my clients right overthe schedule property.

SCHEDULE : All the part and parcel of the residential property bearing No. 3035 now holding MCC PID No. 3088195858 in ward No. 19 as per from No. 2 issued by MCC situated at Dattagalli 3rd Stage, Mysuru measuring East to West 12.0 meters and North to South 18.00 meters with residential building holding plinth area of 56.7418 sq. meters with vitrified flooring & all amenities.

Bounded on: East by: Property bearing No. 3036 ; West by: Property bearing No. 3034 ; North by: 12.00 meters Road ; South by: Property bearing No. 3060 & 3061.

Sd/- Sri S. Suresh, BBM, LL.B
Advocate, No. 974, 7th Main, 3rd Stage, Gokulam, Mysore-570 002.
Date: 25-03-2023

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಗೊಂಟು ಸಾಯಿ ರಾಮ್ ಯಾದವ್ ಬಿನ್ ಶ್ರೀ ಗೊಂಟು ಸತ್ತಯ್ಯ, #14, ತುಂಗಾ ರಸ್ತೆ, ರಾಘವೇಂದ್ರ ನಗರ, ಮೈಸೂರು-570 011, ಇವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಶ್ರೀ ಪ್ರಕಾಶ್.ಟಿ.ಡಿ. ಬಿನ್ ಲೇ. ತಿರುಮಲ ರಾವ್‌ರವರಿಂದ ಕ್ರಯಕ್ಕೆ ಖರೀದಿಸಲು ಒಪ್ಪಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ವಗೈರೆಗಳಿದ್ದಲ್ಲಿ ಈ ದಿನದಿಂದ 15 ದಿನಗಳೊಳಗೆ ನಮ್ಮ ಕಕ್ಷಿದಾರರಿಗಾಗಲಿ, ನಮ್ಮ ಕಛೇರಿಗಾಗಲಿ ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಮ್ಮ ಕಕ್ಷಿದಾರರು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆ. ನಂತರ ಬಂದ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ನಂ. 173/3 ರಲ್ಲಿರುವ 3.22 ಎಕರೆ ಜಮೀನಿಗೆ ಚಕ್ಕುಬಂದಿ: ಪೂ: ಸರ್ವೆ ನಂ. 173/1, ಪ: ಸರ್ವೆ ನಂ. 174, ಉ: ಸರ್ವೆ ನಂ. 171, ದ: ಮೈಸೂರು – ಮಹದೇವಪುರ ರಸ್ತೆ.

ಸಹಿ/- ರಾಜೇಶ. ಕೆ.ಕೆ., ವಕೀಲರು,
KAR No. 1641/05, #1242, ಒ.ಟಿ.ಸಿ. 2/2,
1ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ,
ಮೈಸೂರು-570 004.
ಮೊ: 9343354445

ದಿನಾಂಕ: 25-03-2023
ಮೈಸೂರು

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ವಾಣಿವಿಲಾಸ ಒಚ (ಹೊರ) ವಿಭಾಗ, ವಾಣಿವಿಲಾಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ : ಮೈಮನಪಾ/ಕಾಇಂ/ವಾವಿನೀಸ&ಒಚ(ಹೊರ)/ತಿದ್ದುಪಡಿ-ಟಿಎನ್-18/1645/2022-23 ದಿನಾಂಕ: 24-03-2023

ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ : 1. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ :

ಮೈಮನಪಾ/ಕಾಇಂ/ವಾವಿನೀಸ & ಒಚ(ಹೊರ)ಟಿಎನ್-18/1628/2022-23 ದಿನಾಂಕ: 24-03-2023

ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಪಾಲಿಕೆ ವತಿಯಿಂದ ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕ ಕಾರಣಗಳಿಂದಾಗಿ ಸದರಿ ಪ್ರಕಟಣೆಯಲ್ಲಿನ ಅಲ್ಪಾವಧಿ ಟೆಂಡರ್ ಬದಲಾಗಿ ಪೂರ್ಣಾವಧಿ ಟೆಂಡರ್‌ನ್ನು ತಿದ್ದುಪಡಿ ಮಾಡಲಾಗಿದೆ. ತಿದ್ದುಪಡಿ ದಿನಾಂಕಗಳು ಕೆಳಕಂಡಂತಿರುತ್ತದೆ.

ಕ್ರ.ಸಂ.	ವಿವರ	ಕಾಮಗಾರಿ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಬೆಳಿಗ್ಗೆ 10.00 ಗಂಟೆ ರಿಂದ: ಇ-ಪೋರ್ಟಲ್‌ನಲ್ಲಿ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ	ಸಂಜೆ 5.30 ಗಂಟೆ ಒಳಗೆ: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 5.45 ಗಂಟೆಯ ನಂತರ: ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಕಾರ್ಯಪಾಲಕ ಅಭಿಯಂತರರು (ವಾ.ವಿ.ನೀ.ಸ & ಒಚ (ಹೊರ) ವಿಭಾಗ)	9 ಸಂಖ್ಯೆ	189.31	27.03.2023	11.04.2023	12.04.2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ವಾಣಿವಿಲಾಸ&ಒಚ (ಹೊರ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ರಾಹುಲ್ ಗಾಂಧಿ ಅನರ್ಹತೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಮಡಿಕೇರಿ, ಮಾ.25– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿರುವ ಕ್ರಮವನ್ನು ಖಂಡಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು. ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಪ್ರಮುಖರು ಹಾಗೂ ಕಾರ್ಯಕರ್ತರು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿ ಅಸಮಾಧಾನ ವ್ಯಕ್ತಪಡಿಸಿದರು. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಈ ಸಂದರ್ಭ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಕೇಂದ್ರ ಸರಕಾರ ತನ್ನ ಅಧಿಕಾರದ ಪ್ರಭಾವ ಬಳಸಿ ವಿರೋಧ ಪಕ್ಷಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಎಂದು ಆರೋಪಿಸಿದರು. ರಾಹುಲ್ ಗಾಂಧಿ ಅವರು ನಡೆಸಿದ 'ಭಾರತ್ ಜೋಡೋ' ಯಾತ್ರೆಯ ಯಶಸ್ವಿಯನ್ನು ತಡೆಯುವ ಸಲುವಾಗಿ ಕೋರ್ಟ್ ತೀರ್ಪು ಹೊರಬಂದ ಕೆಲವೇ ಕ್ಷಣಗಳಲ್ಲಿ ಅವರ ಸಂಸತ್ ಸದಸ್ಯತ್ವವನ್ನು ಅನರ್ಹಗೊಳಿಸಿದ್ದು, ಇದು ರಾಹುಲ್ ಗಾಂಧಿ ಅವರಿಗೆ ಮಾಡಿದ ಅನ್ಯಾಯ ಎಂದು ಅಸಮಾಧಾನ ಹೊರ ಹಾಕಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಹೈಕೋರ್ಟ್ ವಕೀಲ ಹೆಚ್.ಎಸ್.ಚಂದ್ರಮೌಳಿ ಮಾತನಾಡಿ, ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿರುವುದು ಕೋರ್ಟ್ ತೀರ್ಪಿನ ವಿರುದ್ಧ ಅಲ್ಲ ಎಂದು ಸ್ಪಷ್ಟಪಡಿಸಿದರು. ತಾವು ಕೂಡ ನ್ಯಾಯವಾದಿಯಾಗಿ ಹಲವಾರು ಪ್ರಕರಣಗಳಲ್ಲಿ ವಾದಿಸಿದ್ದೇವೆ. ಕೆಳ ನ್ಯಾಯಾಲಯ ನೀಡಿದ ತೀರ್ಪಿನ ಕುರಿತು ಮೇಲಿನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಪ್ರಶ್ನಿಸುವ ಅವಕಾಶವಿದೆ ಆದರೆ ತೀರ್ಪನ್ನು ನೆಪವಾಗಿಸಿಕೊಂಡು ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯತ್ವ ರದ್ದು ಮಾಡಲಾಗಿದೆ.ಇದು ಅವರನ್ನು ಆರಿಸಿದ ಕ್ಷೇತ್ರದ ಜನರಿಗೆ ಮಾಡಿದ ಅವಮಾನವಾಗಿದ್ದು, ಇದನ್ನು ಧಿಕ್ಕರಿಸುವುದಾಗಿ ಹೇಳಿದರು.

ಪ್ರತಿಭಟನೆಯಲ್ಲಿ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್, ಮಡಿಕೇರಿ ಬ್ಲಾಕ್ ಅಧ್ಯಕ್ಷ ಹೆಚ್.ಎ.ಹಂಸ, ಮಡಿಕೇರಿ ನಗರಾಧ್ಯಕ್ಷ ಬಿ.ವೈ.ರಾಜೇಶ್, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಎಂ.ಇಸ್ಮಾಯಿಲ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುರಯ್ಯ ಅಬ್ರಾರ್, ಪ್ರಧಾನ ಕಾರ್ಯದರ್ಶಿ ಮಿನಾಜ್ ಪ್ರವೀಣ್, ಸೇವಾದಳ ಅಧ್ಯಕ್ಷ ಕಾನೆಹಿತ್ಲು ಮೊಣ್ಣಪ್ಪ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಅಧ್ಯಕ್ಷ ತೆನ್ನಿರಾ ಮೈನ, ಪ್ರಮುಖರಾದ ಆರ್.ಪಿ.ಚಂದ್ರಶೇಖರ್, ಚುಮ್ಮಿದೇವಯ್ಯ, ಜಫ್ರುಲ್ಲ, ಮುಕ್ಕಟೀರ ಸಂದೀಪ್, ಕೆ.ಜಿ.ಪೀಟರ್, ಎ.ಟಿ.ದೇವಯ್ಯ, ಟಿ.ಹೆಚ್.ಉದಯ ಕುಮಾರ್, ವೆಂಕಟೇಶ್ ಹಾಗೂ ವಿವಿಧ ಘಟಕದ ಅಧ್ಯಕ್ಷರು, ಸದಸ್ಯರು ಮತ್ತು ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ವಿಧಾನಸಭಾ ಚುನಾವಣೆ: ಕಾಂಗ್ರೆಸ್ ಮೊದಲ ಪಟ್ಟಿ ಬಿಡುಗಡೆ

ವಿರಾಜಪೇಟೆಗೆ ಎ.ಎಸ್.ಪೊನ್ನಣ್ಣ ಅಭ್ಯರ್ಥಿ

ಅಂತಿಮಗೊಳ್ಳದ ಮಡಿಕೇರಿ ಕ್ಷೇತ್ರದ ಅಭ್ಯರ್ಥಿ ಆಯ್ಕೆ



ಮಡಿಕೇರಿ, ಮಾ.25– ರಾಜ್ಯ ವಿಧಾನಸಭಾ ಚುನಾವಣೆಗೆ ದಿನಗಳು ಸಮೀಪಿಸುತ್ತಿದ್ದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಯಾಗಿದೆ. ಕೊಡಗಿನ ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಹೈ ಕೋರ್ಟ್ ವಕೀಲ, ಮಾಜಿ ಅಡ್ವೋಕೇಟ್ ಜನರಲ್ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರನ್ನು ಅಭ್ಯರ್ಥಿ ಎಂದು ಘೋಷಿಸಲಾಗಿದೆ.

ವಿರಾಜಪೇಟೆ ಕ್ಷೇತ್ರದ ಟಿಕೆಟ್ ರೇಸ್‌ನಲ್ಲಿ ಮಾಜಿ ವಿಧಾನಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಚೆಪ್ಪುಡಿರ ಅರುಣ್ ಮಾಚಯ್ಯ ಅವರುಗಳ ಹೆಸರುಗಳು ಕೇಳಿ ಬಂದಿತ್ತು. ಆದರೆ ಕಾಂಗ್ರೆಸ್ ನಡೆಸಿದ ಆಂತರಿಕ ಸಮೀಕ್ಷೆಯಲ್ಲಿ ಪೊನ್ನಣ್ಣ ಹೆಸರು ಪ್ರಬಲವಾಗಿ ಕೇಳಿ ಬಂದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈ ಕಮಾಂಡ್ ಪೊನ್ನಣ್ಣ ಅವರನ್ನು ಅಭ್ಯರ್ಥಿಯನ್ನಾಗಿಸಿದೆ.

ಈ ಬಾರಿಯ ಚುನಾವಣೆಯಲ್ಲಿ ವಿರಾಜಪೇಟೆ ಕ್ಷೇತ್ರದ ಟಿಕೆಟ್ ತಮಗೆ ದೊರೆಯಲಿದೆ ಎಂದು ಮೊದಲೇ ವಿಶ್ವಾಸ ಹೊಂದಿದ್ದ ಪೊನ್ನಣ್ಣ ಈ ಹಿಂದಿನಿಂದಲೇ ಪಕ್ಷ ಸಂಘಟನೆ ಸಹಿತ ಚುನಾವಣಾ ಸಭೆ ಸಮಾರಂಭಗಳಲ್ಲಿ ತೊಡಗಿಸಿಕೊಂಡಿದ್ದರು. ವಿರಾಜಪೇಟೆ ಕ್ಷೇತ್ರದಲ್ಲಿ ಕಾರ್ಯಕರ್ತರೊಂದಿಗೆ ಮನೆ ಮನೆಗೆ ತೆರಳಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಣೆ, ವಿರಾಜಪೇಟೆಯಲ್ಲಿ ಕಾಂಗ್ರೆಸ್ ಜನಸ್ಪಂದನಾ ಸಭೆ, ಪೊನ್ನಂಪೇಟೆಯಲ್ಲಿ ಬುಡಕಟ್ಟು ಜನಾಂಗಗಳ ಸಮಾವೇಶ, ಕಾಂಗ್ರೆಸ್ ಮಹಿಳಾ ಸಮಾವೇಶಗಳನ್ನು ಆಯೋಜಿಸಿ ಮತದಾರರನ್ನು ಹಿಡಿದಿಡುವ ಪ್ರಯತ್ನ ನಡೆಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕುರಿತು ಪ್ರತಿಕ್ರಿಯಿಸಿದ ಪೊನ್ನಣ್ಣ, ತಮ್ಮ ಮೇಲೆ ವಿಶ್ವಾಸವಿಟ್ಟು ತಮ್ಮನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ರಂದೀಪ್‌ಸಿಂಗ್ ಸುರ್ಜೆವಾಲಾ ಸೇರಿದಂತೆ ಪಕ್ಷದ ಎಲ್ಲಾ ಹಿರಿಯ ನಾಯಕರಿಗೆ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

ಕ್ಷೇತ್ರದ ಮತದಾರರು ಈ ಬಾರಿ ಬದಲಾವಣೆಯನ್ನು ಬಯಸಿದ್ದಾರೆ. ಪಕ್ಷ ಸಂಘಟನೆ ಕೂಡ ಬೂತ್ ಮಟ್ಟದಿಂದಲೇ ಬಲಿಷ್ಠವಾಗಿದೆ. ತಾವು ಚುನಾವಣಾ ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲಾ ಮತದಾರರು ಕಾಂಗ್ರೆಸ್ ಪರ ಒಲವು ತೋರುತ್ತಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಮೂಲಭೂತ ಸಮಸ್ಯೆ, ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನದೊಂದಿಗೆ ಭ್ರಷ್ಟಾಚಾರ ರಹಿತ, ಜನಪರ ಆಡಳಿತ ನೀಡುವುದಾಗಿ ಇದೇ ಸಂದರ್ಭ ಭರವಸೆ ನೀಡಿದರು. ಕ್ಷೇತ್ರದಲ್ಲಿ ನವ ಮನ್ವಂತರಕ್ಕೆ ನಾಂದಿ ಹಾಡುವ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಗೆಲುವಿಗೆ ಒಗ್ಗಟ್ಟಿನಿಂದ ಶ್ರಮಿಸುವಂತೆ ಎ.ಎಸ್.ಪೊನ್ನಣ್ಣ ಕರೆ ನೀಡಿದರು.

ಅಂತಿಮವಾಗದ ಮಡಿಕೇರಿ ಕ್ಷೇತ್ರ ಮಡಿಕೇರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಹೈ ಕೋರ್ಟ್ ವಕೀಲ ಹೆಚ್.ಎಸ್. ಚಂದ್ರಮೌಳಿ, ವಿಧಾನಪರಿಷತ್ ಚುನಾವಣೆ ಎದುರಿಸಿ ಪರಾಭವಗೊಂಡಿದ್ದ ಡಾ. ಮಂಥರ್ ಗೌಡ, ಮಾಜಿ ಸಚಿವ ಜೀವಿಜಯ ಅವರ ಹೆಸರುಗಳು ಕೇಳಿ ಬಂದಿದೆ. ಈ ಪೈಕಿ ಚಂದ್ರಮೌಳಿ ಅಥವಾ ಮಂಥರ್ ಗೌಡ ಈ ಎರಡು ಹೆಸರುಗಳು ಹೈಕಮಾಂಡ್ ಅಂಗಳದಲ್ಲಿದೆ ಎನ್ನಲಾಗುತ್ತಿದೆ. ಈ ಪೈಕಿ ಒಬ್ಬರ ಹೆಸರು ಅಂತಿಮಗೊಳ್ಳಲಿದ್ದು, ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದು ಸದ್ಯಕ್ಕೆ ನಿಗೂಢವಾಗಿದೆ. ಆದರೆ ಸಂಭಾವ್ಯ ಅಭ್ಯರ್ಥಿಗಳು ಮಡಿಕೇರಿ ಕ್ಷೇತ್ರದಲ್ಲಿ ಈಗಾಗಲೇ ಚುನಾವಣಾ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ.

ನಿಧನ

ನೆರವಂಡ ತಂಗಮ್ಮ ಬೋಪಯ್ಯ



ಮೂರ್ನಾಡು, ಮಾ. 25– ಕೊಡಗಿನ ಮೂರ್ನಾಡು ನಿವಾಸಿ ನೆರವಂಡ (ಕುಂಬಳದಾಳು) ತಂಗಮ್ಮ ಬೋಪಯ್ಯ (ತಾಮನೆ ಬೊಳಕರಂಡ, ಪಾರಣೆ) ಇಂದು ನಿಧನರಾದರು. ಅವರಿಗೆ 88 ವರ್ಷ ವಯಸ್ಸಾಗಿತ್ತು ಇವರ ಪಾರ್ಥಿವ ಶರೀರವನ್ನು ನಾಳೆ (ಮಾ.26) ಮಧ್ಯಾಹ್ನ 1 ಗಂಟೆವರೆಗೆ ಮೂರ್ನಾಡಿನ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುತ್ತಿದ್ದು, ನಂತರ ಮಡಿಕೇರಿ ಕೊಡವ ಸಮಾಜದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ಅಲ್ಲಾರಂಡ ತಿಮ್ಮಯ್ಯ

ಅಮ್ಮತ್ತಿ, ಮಾ. 25– ಅಮ್ಮತ್ತಿಯ ಅಲ್ಲಾರಂಡ ತಿಮ್ಮಯ್ಯ(90) ಅವರು ಶುಕ್ರವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಅಮ್ಮತ್ತಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಲ್ಲೆಂಗಡ ಚೆಂಗಪ್ಪ

ಮೈಸೂರು, ಮಾ. 25– ಮೈಸೂರಿನ ವಿಜಯನಗರ ನಿವಾಸಿ ಕಲ್ಲೆಂಗಡ ಚೆಂಗಪ್ಪ(80) ಅವರು ಇಂದು ಬೆಳಗ್ಗೆ ನಿಧನರಾದರು ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ಇಂದು ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಜ್ಜಿಮಾಡ ಚಿಣ್ಣಮ್ಮ



ಮೈಸೂರು, ಮಾ. 25– ಮೂಲತಃ ಕೊಡಗಿನ ಶ್ರೀಮಂಗಲದವರಾಗಿದ್ದು, ಬೆಂಗಳೂರಿನ ಕೋಣನಕುಂಟೆಯಲ್ಲಿ ವಾಸವಿದ್ದ ಅಜ್ಜಿಮಾಡ ಚಿಣ್ಣಮ್ಮ(77) ಇಂದು ಬೆಳಗ್ಗೆ ನಿಧನರಾದರು. ಅಂತ್ಯಕ್ರಿಯೆ ಇಂದು ಮಧ್ಯಾಹ್ನ ವಿಲ್ಸನ್ ಗಾರ್ಡನ್ ರುದ್ರಭೂಮಿಯಲ್ಲಿ ನೆರವೇರಿತು ಕುಟುಂಬದ ಮೂಲಗಳು ತಿಳಿಸಿವೆ.

ಪ್ರವಾಸಿಗರ ಲಕ್ಷಾಂತರ ರೂ. ನಗ–ನಾಣ್ಯ ದೋಚಿದ್ದ ಪ್ರಕರಣ ಬಯಲು

ಅಂತರ್ ಜಿಲ್ಲಾ ಕಳ್ಳರ ಬಂಧನ; ಆಭರಣ, ನಗದು ವಶ



ಕುಶಾಲನಗರ, ಮಾ.25– ಸಮೀಪದ ಪ್ರವಾಸಿ ತಾಣ ಕಾವೇರಿ ನಿಸರ್ಗಧಾಮದ ಬಳಿ ಇರುವ ಅಮ್ಮನವನ ರೆಸಾರ್ಟ್‌ನಲ್ಲಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, ವಜ್ರದ ಹರಳುಗಳು ಹಾಗೂ ನಗದು ದೋಚಿ ಪರಾರಿಯಾಗಿದ್ದ ಅಂತರ್ ಜಿಲ್ಲಾ ಕಳ್ಳರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಪಟ್ಟಣದ ಡಿವೈಎಸ್ಪಿ ಕಚೇರಿಯಲ್ಲಿ ಶನಿವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸುದ್ದಿಗಾರರಿಗೆ ಈ ಕುರಿತು ವಿವರ ನೀಡಿದರು.

ರೆಸಾರ್ಟ್‌ನಲ್ಲಿ ಕಳೆದ ವರ್ಷ ಅ.16 ರಂದು ಉತ್ತರ ಭಾರತದ ಗುಜರಾತ್‌ನ ಪ್ರವಾಸಿಗರು ತಂಗಿದ್ದ ರೂಮ್‌ನಲ್ಲಿ ಕಳ್ಳತನ ನಡೆದಿತ್ತು. ಈ ಕುರಿತು ರೆಸಾರ್ಟ್ ಸಿಬ್ಬಂದಿಗಳು ನೀಡಿದ ದೂರಿನ ಮೇರೆಗೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಳವು ಪ್ರಕರಣ ಪತ್ತೆ ಮಾಡುವ ನಿಟ್ಟಿನಲ್ಲಿ ಜಿಲ್ಲಾ ಅಪರಾಧ ಪತ್ತೆ ದಳ ಹಾಗೂ ಸಿಪಿಐ ಕುಶಾಲನಗರ ವೃತ್ತದವರ ನೇತೃತ್ವದಲ್ಲಿ ತಂಡವನ್ನು ರಚನೆ ಮಾಡಲಾಗಿತ್ತು. ಈ ತಂಡ ಕಾರ್ಯಪ್ರವೃತ್ತರಾಗಿ ಕಳ್ಳತನ ಮಾಡಿದ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದೆ. ಇದರಿಂದ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯ 2 ಪ್ರಕರಣ ಹಾಗೂ ಚಿಕ್ಕಮಗಳೂರು ಜಿಲ್ಲೆಯ 2 ಪ್ರಕರಣ ಸೇರಿ ಒಟ್ಟು ನಾಲ್ಕು ಪ್ರಕರಣಗಳು ಪತ್ತೆಯಾಗಿವೆ ಎಂದು ಅವರು ವಿವರಿಸಿದರು.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕುಕ್ಕುಂದೂರು ಬಳಿಯ ಬಂಗ್ಲೆಗುಡ್ಡೆ ರಹಮತ್ ಎಂಬುವವರ ಬಾಡಿಗೆ ಮನೆಯಲ್ಲಿರುವ ಪೌತಿ ಫಯಾಜ್ ಅವರ ಮಗ ಗುಜರಿ ವ್ಯಾಪಾರ ನಾಡುತ್ತಿದ್ದ ಖಾಸೀಂ(32) ಹಾಗೂ ರೆಂಜಲಾ ಗ್ರಾಮದ ಮೊರತ್ತಿಗುಂಡಿ ಬಳಿಯ ಬದ್ರಿಯಾ ಮಂಜಿಲ್ ನಿವಾಸಿ ಮೊಯ್ದು ಕೊಂಜ್ಜ ಅವರ ಮಗ ಚಾಲಕ ಮೊಹಮ್ಮದ್ ಸಿರಾಜುದ್ದೀನ್ ಬಂಧಿತ ಆರೋಪಿಗಳಾಗಿದ್ದಾರೆ. ಬಂಧಿತ ಆರೋಪಿಗಳಿಂದ 8 ಲಕ್ಷ ಬೆಲೆ ಬಾಳುವ 160 ಗ್ರಾಂ ಚಿನ್ನಾಭರಣ, ಒಂದು ಲಕ್ಷ ಬೆಲೆ ಬಾಳುವ ವಜ್ರದ ಹರಳುಗಳು, ಎರಡು ಲಕ್ಷದ ಇಪ್ಪತ್ತಮೂರು ಸಾವಿರ ನಗದು, ಒಂದು ಲಕ್ಷ ಬೆಲೆ ಬಾಳುವ ಕೃತ್ಯಕ್ಕೆ ಬಳಸಿದ ಕಾರು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಎಸ್ಪಿ ಕೆ.ರಾಮರಾಜನ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೆ.ಎಸ್.ಸುಂದರರಾಜ್ ನಿರ್ದೇಶನದಂತೆ ಸೋಮವಾರಪೇಟೆ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕ ಆರ್.ವಿ. ಗಂಗಾಧರಪ್ಪ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಬಿ.ಜಿ.ಮಹೇಶ್, ಪಿಎಸ್‌ಐಗಳಾದ ಪುನೀತ್, ಶ್ರೀಧರ್, ದಿನೇಶ್ ಕುಮಾರ್, ಎಎಸ್‌ಐ ವೆಂಕಟೇಶ್, ಅರುಣ್, ಸಿಬ್ಬಂದಿಗಳಾದ ಯೋಗೇಶ್, ನಿರಂಜನ್, ವಸಂತ್, ದಯಾನಂದ್, ಲೋಕೇಶ್, ಪ್ರಕಾಶ್, ಪ್ರವೀಣ್, ಸಂದೇಶ್, ಸಿಡಿಆರ್ ಘಟಕದ ಸಿಬ್ಬಂದಿಗಳಾದ ರಾಜೇಶ್, ಗಿರೀಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪ್ರಕರಣವನ್ನು ಪತ್ತೆ ಹಚ್ಚಿದ ಎಲ್ಲಾ ಪೊಲೀಸ್ ಅಧಿಕಾರಿಗಳಿಗೂ ಹಾಗೂ ಸಿಬ್ಬಂದಿಗಳ ಕಾರ್ಯವನ್ನು ಶ್ಲಾಘಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಬಹುಮಾನ ಘೋಷಿಸಿದ್ದಾರೆ.

ಘಟನೆ ವಿವರ: ಗುಜರಾತ್‌ನ ಅಬ್ಬಾ (52 ವರ್ಷ) ಅವರು ತಮ್ಮ ಮಕ್ಕಳು ಹಾಗೂ ಸ್ನೇಹಿತರೊಂದಿಗೆ ಕಳೆದ ವರ್ಷ ಅ.16 ರಂದು ಕೊಡಗಿನ ಪ್ರವಾಸಿ ತಾಣಗಳ ವೀಕ್ಷಣೆಗೆ ಆಗಮಿಸಿ ಅಮ್ಮನವನ ರೆಸಾರ್ಟ್‌ನಲ್ಲಿ ತಂಗಿದ್ದರು. ಎರಡು ರೂಮ್‌ಗಳನ್ನು ಬುಕ್ ಮಾಡಿದ್ದ ಅವರು ಮಡಿಕೇರಿ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಣೆ ಮಾಡಿ ರೆಸಾರ್ಟ್‌ಗೆ ತೆರಳಿ ವಾಸ್ತವ್ಯ ಹೂಡಿದ್ದರು. ಮರುದಿನ ಬೆಳಗ್ಗೆ ರೆಸಾರ್ಟ್ ರೆಸ್ಟೋರೆಂಟ್‌ನಲ್ಲಿ ಉಪಾಹಾರ ಸೇವಿಸಿ ಮತ್ತೆ ಪ್ರೇಕ್ಷಣೀಯ ಸ್ಥಳ ವೀಕ್ಷಣೆಗೆ ಹೋಗಲು ತಮ್ಮ ರೂಮ್‌ನ ಟೇಬಲ್ ಮೇಲೆ ಇಟ್ಟಿದ್ದ ಬ್ಯಾಗ್ ನೋಡಿದಾಗ ಬ್ಯಾಗಿನಲ್ಲಿದ್ದ ಚಿನ್ನಾಭರಣ, ವಜ್ರಾಭರಣ ಮತ್ತು ನಗದು ಕಳುವಾಗಿರುವುದು ತಿಳಿಯಿತು. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿತ್ತು.

ವಿಧಾನಸಭಾ ಚುನಾವಣೆ: ಕಾಂಗ್ರೆಸ್ ಪಕ್ಷದ 124 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಚಾ.ನಗರ–ಪುಟ್ಟರಂಗಶೆಟ್ಟಿ, ಹನೂರು–ನರೇಂದ್ರ, ಗುಂಡ್ಲುಪೇಟೆ–ಗಣೇಶಪ್ರಸಾದ್ ಅಭ್ಯರ್ಥಿ



ಸಿ. ಪುಟ್ಟರಂಗಶೆಟ್ಟಿ



ಆರ್. ನರೇಂದ್ರ



ಎಚ್.ಎಂ.ಗಣೇಶಪ್ರಸಾದ್

ಚಾಮರಾಜನಗರ, ಮಾ.25– ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ 124 ಮಂದಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಯಾಗಿದ್ದು, ಚಾಮರಾಜನಗರ ಜಿಲ್ಲೆಯಿಂದ ಮೂವರು ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಗೊಳಿಸಿದ್ದು, ಕೊಳ್ಳೇಗಾಲ ಮೀಸಲು ಕ್ಷೇತ್ರದ ಅಭ್ಯರ್ಥಿಯನ್ನು ಶೀಘ್ರದಲ್ಲೇ ಇತ್ಯರ್ಥಗೊಳಿಸಿ ಘೋಷಿಸುವ ಸಾಧ್ಯತೆ ಇದೆ.

ಎಐಸಿಸಿ ಬಿಡುಗಡೆ ಮಾಡಿರುವ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಎಲ್ಲರ ನಿರೀಕ್ಷೆಯಂತೆಯೇ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಹಾಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ, ಹನೂರು ವಿಧಾನಸಭಾ ಕ್ಷೇತ್ರದಿಂದ ಹಾಲಿ ಶಾಸಕ ಆರ್.ನರೇಂದ್ರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ಎಚ್.ಎಂ. ಗಣೇಶಪ್ರಸಾದ್ ಅವರ ಹೆಸರುಗಳನ್ನು ಘೋಷಿಸಿದೆ.

ಜಿಲ್ಲೆಯ ಮೀಸಲು ವಿಧಾನಸಭಾ ಕ್ಷೇತ್ರವಾದ ಕೊಳ್ಳೇಗಾಲದಿಂದ ನಾಲ್ವರು ಮಾಜಿ ಶಾಸಕರು ಆಕಾಂಕ್ಷಿಗಳಿದ್ದು, ಇವರಲ್ಲಿ ಯಾರಿಗೆ 'ಕೈ' ಟಿಕೆಟ್ ದೊರೆಯುತ್ತದೆ ಎಂಬುದು ಇನ್ನೆರಡ್ಮೂರು ದಿನಗಳ ಕಾಲ ಕಾದು ನೋಡಬೇಕಿದೆ.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ಮಾಜಿ ಸಚಿವ ದಿ.ಎಚ್.ಎಸ್. ಮಹದೇವಪ್ರಸಾದ್ ಅವರ ಪುತ್ರ ಎಚ್.ಎಂ. ಗಣೇಶಪ್ರಸಾದ್ ಹಾಗೂ ಕಾಂಗ್ರೆಸ್‌ನ ಹಿರಿಯ ಮುಖಂಡ ಎಚ್.ಎಸ್. ನಂಜಪ್ಪ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದರು. ಅಲ್ಲದೇ ಹನೂರಿನಿಂದ ಹಾಲಿ ಶಾಸಕ ಆರ್. ನರೇಂದ್ರ ಹಾಗೂ ಮುಖಂಡ ನಾಗೇಂದ್ರ ಕೈ ಟಿಕೇಟ್‌ಗಾಗಿ ಅರ್ಜಿ ಸಲ್ಲಿಸಿದ್ದರು. ಈ ಪೈಕಿ ವರಿಷ್ಠರು ಜಿಲ್ಲೆಯ ಎರಡು ಕ್ಷೇತ್ರಗಳಿಗೆ ಹಾಲಿ ಶಾಸಕರಿಗೆ ಹಾಗೂ ಗುಂಡ್ಲುಪೇಟೆ ಕ್ಷೇತ್ರಕ್ಕೆ ಮಹದೇವಪ್ರಸಾದ್ ಅವರ ಪುತ್ರ ಗಣೇಶಪ್ರಸಾದ್ ಅವರಿಗೆ ಮಣೆ ಹಾಕಿದ್ದಾರೆ.

ಇತಿಹಾಸ ನಿರ್ಮಿಸಲು 'ಕೈ' ಶಾಸಕರು ತಯಾರಿ: ಜಿಲ್ಲೆಯ ಚಾಮರಾಜನಗರ ಹಾಗೂ ಹನೂರು ವಿಧಾನಸಭಾ ಕ್ಷೇತ್ರದಿಂದ ಹ್ಯಾಟ್ರಿಕ್ ಗೆಲುವು ದಾಖಲಿಸಿರುವ ಹಾಲಿ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಹಾಗೂ ಆರ್. ನರೇಂದ್ರ ಸತತ ನಾಲ್ಕನೇ ಬಾರಿ ಗೆಲುವು ದಾಖಲಿಸುವ ಮೂಲಕ ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ನೂತನ ದಾಖಲೆ ನಿರ್ಮಿಸಲು ತಯಾರಿ ನಡೆಸುತ್ತಿದ್ದಾರೆ.

ಜಿಲ್ಲೆಯ ರಾಜಕೀಯ ಇತಿಹಾಸದ ಪುಟಗಳನ್ನು ಒಮ್ಮೆ ತಿರುವಿ ಹಾಕಿದರೆ ಯಾರಿಗೂ ಒಮ್ಮೆಯೂ ಸತತ ನಾಲ್ಕನೇ ಗೆಲುವಿನ ಹೆಗ್ಗಳಿಕೆ ದಕ್ಕಿಲ್ಲ. ಮೂರು ಅಥವಾ ನಾಲ್ಕು ಬಾರಿ ಆಯ್ಕೆಯಾದವರು ಇದ್ದಾಗ್ಯೂ ಒಬ್ಬರೂ ಸತತ ನಾಲ್ಕನೇ ಗೆಲುವು ಪಡೆದ ಉದಾಹರಣೆಗಳಿಲ್ಲ. ಹೀಗಾಗಿ, ಚಾಮರಾಜನಗರದಲ್ಲಿ ಪುಟ್ಟರಂಗಶೆಟ್ಟಿ ಹಾಗೂ ಹನೂರಿನಲ್ಲಿ ನರೇಂದ್ರ ಮತ್ತೆ ಆಯ್ಕೆಯಾದರೆ ಅವರು ಹೊಸ ಇತಿಹಾಸ ನಿರ್ಮಿಸುತ್ತಾರೆ.

ಗಣೇಶಪ್ರಸಾದ್‌ಗೆ ಚೊಚ್ಚಲ ಸ್ಪರ್ಧೆ: ಇನ್ನು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಮಾಜಿ ಸಚಿವ ದಿ.ಎಚ್.ಎಸ್.ಮಹದೇವಪ್ರಸಾದ್ ಅವರ ಪುತ್ರ ಎಚ್.ಎಂ.ಗಣೇಶಪ್ರಸಾದ್ ಅವರಿಗೆ ಇದು ಚೊಚ್ಚಲ ಚುನಾವಣೆಯಾಗಿದ್ದು, ಮೊದಲ ಸ್ಪರ್ಧೆಯಲ್ಲಿಯೇ ಗೆಲುವು ದಾಖಲಿಸಲು ನಿರಂತರ ಪ್ರಯತ್ನದಲ್ಲಿದ್ದಾರೆ.

ತಾಯಿ ಮಾಜಿ ಸಚಿವರಾದ ಡಾ.ಗೀತಾ ಮಹದೇವಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಚುನಾವಣಾ ಅಖಾಡಕ್ಕಿಳಿದಿರುವ ಗಣೇಶಪ್ರಸಾದ್ ಅವರು ಈಗಾಗಲೇ ಕ್ಷೇತ್ರದಲ್ಲಿ ಮಿಂಚಿನ ಸಂಚಾರ ನಡೆಸುವ ಮೂಲಕ ಅಪಾರ ಜನ್ನಮಣೆ ಗಳಿಸಿಕೊಂಡಿದ್ದಾರೆ. ಹೀಗಾಗಿ, ಈ ಬಾರಿಯ ಚುನಾವಣೆಯಲ್ಲಿ ಎದುರಾಳಿ ಪಕ್ಷಗಳಿಗೆ ಪ್ರಬಲ ಪೈಪೋಟಿ ನೀಡಲು ಗಣೇಶಪ್ರಸಾದ್ ಸಜ್ಜುಗೊಂಡಿದ್ದು, ಈ ಬಾರಿಯ ಚುನಾವಣೆ ಹಿಂದಿನ ಚುನಾವಣೆಗಿಂತ ಬಾರಿ ಮಹತ್ವವನ್ನು ಪಡೆದುಕೊಂಡಿದೆ.

ಕೊಳ್ಳೇಗಾಲದಲ್ಲಿ ಅಂತಿಮಗೊಳ್ಳದ ಅಭ್ಯರ್ಥಿ ಹೆಸರು

ಜಿಲ್ಲೆಯ ಮೀಸಲು ವಿಧಾನಸಭಾ ಕ್ಷೇತ್ರವಾದ ಕೊಳ್ಳೇಗಾಲ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಹೆಸರು ಇನ್ನೂ ಘೋಷಣೆಯಾಗಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಇನ್ನೆರಡ್ಮೂರು ದಿನಗಳಲ್ಲಿ ಎರಡನೇ ಪಟ್ಟಿ ಪ್ರಕಟಣೆ ಮಾಡಲಾಗುವುದು ಎಂದು ತಿಳಿಸಿದ್ದು, ಅಂದು ಅಭ್ಯರ್ಥಿ ಹೆಸರು ಅಂತಿಮವಾಗುತ್ತದೆ ಎಂದು ಹೇಳಲಾಗುತ್ತಿದೆ. ಕ್ಷೇತ್ರದಲ್ಲಿ ಈಗಾಗಲೇ ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್. ಜಯಣ್ಣ, ಎಸ್.ಬಾಲರಾಜು ಹಾಗೂ ಕಾಂಗ್ರೆಸ್ ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಪುಷ್ಪ ಅಮರನಾಥ್ ಅವರು ಟಿಕೆಟ್ ನೀಡುವಂತೆ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದರು. ಜೊತೆಗೆ ಇತ್ತೀಚೆಗೆ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದ ಜಿ.ಎನ್. ನಂಜುಂಡಸ್ವಾಮಿ ಅವರು ಕೂಡ ಆಕಾಂಕ್ಷಿ ಎಂದು ಹೇಳಲಾಗುತ್ತಿದೆ. ವರಿಷ್ಠರು ಯಾರಿಗೆ ಟಿಕೆಟ್ ನೀಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಪಕ್ಷದ ನಾಯಕರ ವಿಶ್ವಾಸಕ್ಕೆ ಧಕ್ಕೆ ತರುವುದಿಲ್ಲ

ಕಾಂಗ್ರೆಸ್ ಪಕ್ಷದ ಮೊದಲ ಪಟ್ಟಿಯಲ್ಲಿ ಟಿಕೆಟ್ ದೊರೆತಿರುವ ಗುಂಡ್ಲುಪೇಟೆಯ ಎಚ್.ಎಂ. ಗಣೇಶ್ ಪ್ರಸಾದ್ ಹಾಗೂ ಚಾಮರಾಜನಗರದ ಸಿ.ಪುಟ್ಟರಂಗಶೆಟ್ಟಿ 'ಮೈಸೂರು ಮಿತ್ರ'ನಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಎಚ್.ಎಂ. ಗಣೇಶಪ್ರಸಾದ್

ಮೈಸೂರು ಮಿತ್ರ: ಮೊದಲ ಪಟ್ಟಿಯಲ್ಲಿಯೇ ತಮ್ಮ ಹೆಸರು ಪ್ರಕಟವಾಗಿರುವುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಗಣೇಶ್ ಪ್ರಸಾದ್: ಬಹಳ ಖುಷಿಯಾಯಿತು. ಪಕ್ಷದ ಹಿರಿಯ ನಾಯಕರು ನನ್ನ ಮೇಲೆ ವಿಶ್ವಾಸ ಇಟ್ಟು ಮೊದಲ ಪಟ್ಟಿಯಲ್ಲಿಯೇ ನನ್ನ ಹೆಸರನ್ನು ಪ್ರಕಟಿಸಿದ್ದಕ್ಕೆ ಎಲ್ಲಾ ನಾಯಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪಕ್ಷದ ನಾಯಕರ ವಿಶ್ವಾಸಕ್ಕೆ ಧಕ್ಕೆ ತರುವಂತಹ ಕೆಲಸವನ್ನು ನಾನು ಮಾಡುವುದಿಲ್ಲ.

ಮಿತ್ರ: ಇದು ತಮಗೆ ಮೊದಲ ಚುನಾವಣೆ, ಸಿದ್ಧತೆ ಹೇಗಿದೆ?

ಗಣೇಶ್: ಕಳೆದ ಐದು ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿದ್ದೇನೆ. ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಭೇಟಿ ನೀಡಿ ಮತದಾರರ ಬೆಂಬಲ ಕೇಳಿದ್ದೇನೆ. ಗ್ರಾಮಗಳಿಗೆ ಭೇಟಿ ನೀಡುವ ದಿನಾಂಕ ಮತ್ತು ಸಮಯದ ಪಟ್ಟಿಯನ್ನು ಸಿದ್ಧಪಡಿಸುತ್ತಿದ್ದೇನೆ.

ಮಿತ್ರ: ಕ್ಷೇತ್ರದಲ್ಲಿ ತಮಗೆ ಪೂರಕ ವಾತಾವರಣ ಇದೆಯೇ?

ಗಣೇಶ್ : ಬಹಳ ಚೆನ್ನಾಗಿದೆ. ಕ್ಷೇತ್ರದ ಮತದಾರರು ಕಾಂಗ್ರೆಸ್ ಪರವಾಗಿದ್ದಾರೆ. ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಕಾಂಗ್ರೆಸ್ ಗೆಲುವಿಗೆ ಪೂರಕವಾದ ವಾತಾವರಣವಿದೆ.

ಮಿತ್ರ: ತಮ್ಮ ಗೆಲುವಿಗೆ ಸಹಾಯಕಾರಿ ಅಂಶಗಳೇನು?

ಗಣೇಶ್ : ಕ್ಷೇತ್ರದಲ್ಲಿ ಐದು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಭ್ರಷ್ಟಾಚಾರ ಮಿತಿಮೀರಿದೆ. ಕೊರೊನಾ ಸಂದರ್ಭದಲ್ಲಿ ಜೀವಭಯವನ್ನು ಬಿಟ್ಟು ಕಷ್ಟದಲ್ಲಿರುವ ಜನರಿಗೆ ನೆರವಾಗಿದ್ದೇನೆ. ಪಕ್ಷದ ಹಿರಿಯರ ಮಾರ್ಗದರ್ಶನದಂತೆ ನಡೆಯುತ್ತಿರುವುದು ನನಗೆ ಪ್ಲಸ್ ಪಾಯಿಂಟ್ ಆಗಿದೆ.

ನನ್ನ ಪರವಾಗಿ ಮತದಾರರಿದ್ದಾರೆ...

ಸಿ. ಪುಟ್ಟರಂಗಶೆಟ್ಟಿ

ಮೈಸೂರು ಮಿತ್ರ: 4ನೇ ಬಾರಿ ನಿಮಗೆ 'ಕೈ' ಟಿಕೆಟ್ ಸಿಕ್ಕಿದೆ ಏನನ್ನಿಸುತ್ತಿದೆ?

ಪುಟ್ಟರಂಗಶೆಟ್ಟಿ : ಪಕ್ಷಕ್ಕೆ ಪ್ರಾಮಾಣಿಕವಾಗಿ ಇರುವುದರ ಫಲವಾಗಿ ಕ್ಷೇತ್ರದ ಮತದಾರ ಪ್ರಭುಗಳ ಆಶಯದಂತೆ ಈ ಬಾರಿಯೂ ಟಿಕೆಟ್ ಸಿಕ್ಕಿದೆ.

ಮಿತ್ರ: ಕ್ಷೇತ್ರದಲ್ಲಿ ವಾತಾವರಣ ಹೇಗಿದೆ?

ಪುಟ್ಟರಂಗಶೆಟ್ಟಿ : ನಾನು ಕಳೆದ 15 ವರ್ಷಗಳಿಂದ ಶಾಸಕನಾಗಿ ಪ್ರಾಮಾಣಿಕವಾಗಿ ಕ್ಷೇತ್ರದ ಅಭಿವೃದ್ಧಿಗೆ ದುಡಿದಿದ್ದೇನೆ ಬಹಳ ನಿಷ್ಠೆಯಿಂದ, ಯಾವುದೇ ಭೇದ ಭಾವವಿಲ್ಲದೆ ಕ್ಷೇತ್ರದ ಜನರ ಕಷ್ಟ–ಸುಖಗಳಲ್ಲಿ ಬಾಗಿಯಾಗಿದ್ದೇನೆ. ಹೀಗಾಗಿ ನನ್ನ ಪರ ಮತದಾರರು ಇದ್ದಾರೆ ಎಂಬ ನಂಬಿಕೆ ನನ್ನಲ್ಲಿದೆ.

ಮಿತ್ರ : ತಮ್ಮ ಗೆಲುವಿಗೆ ಪೂರಕವಾದ ಅಂಶಗಳೇನು?

ಪುಟ್ಟರಂಗಶೆಟ್ಟಿ : ಸರ್ಕಾರ ನೀಡಿದ ಅನುದಾನವನ್ನು ಸದ್ಬಳಕೆ ಮಾಡಿದ್ದೇನೆ. ಕ್ಷೇತ್ರದಲ್ಲಿ ಹೆಚ್ಚು ಕಾಲ ಇದ್ದು, ಜನರಿಗೆ ಸಿಗುತ್ತೇನೆ. ಬೇರೆಯವರ ರೀತಿ ನಾನು ಸುಳ್ಳು ಹೇಳುವುದಿಲ್ಲ. ನನ್ನದು ನೇರ ನಡೆ, ನುಡಿ.

ಬಾವಿಗೆ ಹಾರಿ ಗೃಹಿಣಿ ಆತ್ಮಹತ್ಯೆ

ಚಾಮರಾಜನಗರ, ಮಾ.25– ಬಾವಿಗೆ ಹಾರಿ ಗೃಹಿಣಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮೂಡ್ನಾಕೂಡು ಗ್ರಾಮದಲ್ಲಿ ಶನಿವಾರ ಬೆಳಕಿಗೆ ಬಂದಿದೆ.

ಗ್ರಾಮದ ನಿವಾಸಿ ಮಹೇಶ್ ಎಂಬುವರ ಪತ್ನಿ ಶಾಲಿನಿ(21) ಆತ್ಮಹತ್ಯೆಗೆ ಶರಣಾದ ದುರ್ದೈವಿ.

ತಾಲೂಕಿನ ವಡಾದಾಪಟ್ಟಣ ಗ್ರಾಮದ ಶಾಲಿನಿಯನ್ನು ಮೂಡ್ನಾಕೂಡಿನ ಮಹೇಶ್‌ಗೆ ಕಳೆದ 9 ತಿಂಗಳ ಹಿಂದೆ ಕೊಟ್ಟು ವಿವಾಹ ಮಾಡಿಕೊಡಲಾಗಿತ್ತು. ಶುಕ್ರವಾರ ರಾತ್ರಿ ಗಂಡ ಹೆಂಡತಿ ನಡುವೆ ಜಗಳ ನಡೆದಿದೆ ಎಂದು ಹೇಳಲಾಗುತ್ತಿದ್ದು, ಇದರಿಂದ ಬೇಸತ್ತು ಈಕೆ ಮನೆ ಬಿಟ್ಟು ಹೋಗಿದ್ದಾರೆ ಎನ್ನಲಾಗುತ್ತಿದೆ. ಶುಕ್ರವಾರ ರಾತ್ರಿ ಅವರ ಜಮೀನಿನಲ್ಲಿರುವ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಹಶೀಲ್ದಾರ್ ಬಸವರಾಜು, ಡಿವೈಎಸ್ಪಿ ಪ್ರಿಯದರ್ಶಿನಿ ಈ ಸಾಣಿಕೊಪ್ಪ, ಇನ್ಸ್‌ಪೆಕ್ಟರ್ ಮಲ್ಲೇಶ್ ಅವರು ಪರಿಶೀಲನೆ ನಡೆಸಿ, ಮೃತದೇಹವನ್ನು ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಒಪ್ಪಿಸಲಾಯಿತು. ಮೃತಳ ಗಂಡ ಮಹೇಶ್(45) ನನ್ನು ಪೊಲೀಸರು ವಶಕ್ಕೆ ಪಡೆದು ಆತನ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಕೊಳ್ಳೇಗಾಲದಲ್ಲಿ ಬೃಹತ್ ಉದ್ಯೋಗ ಮೇಳ

ಕೊಳ್ಳೇಗಾಲ, ಮಾ.25– ಮಾಜಿ ರಾಜ್ಯಪಾಲರಾದ ಬಿ.ರಾಚಯ್ಯ ಪ್ರತಿಷ್ಠಾನದ ವತಿಯಿಂದ ಬಿ. ರಾಚಯ್ಯನವರ 100ನೇ ಜನುಮ ದಿನದ ಅಂಗವಾಗಿ ಕೊಳ್ಳೇಗಾಲದ ನ್ಯಾಷನಲ್ ಶಾಲಾ ಆವರಣದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಮಾ.26ರಂದು ಆಯೋಜಿಸಲಾಗಿದೆ. ನುರಿತ ಕಂಪನಿಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿದ್ದು, ಇದರಿಂದ ನಿರುದ್ಯೋಗಿಗಳಿಗೆ ಉದ್ಯೋಗದ ವಿಫುಲ ಅವಕಾಶಗಳಿವೆ. ರಾಚಯ್ಯ ಪ್ರತಿಷ್ಠಾನದ ಅನೇಕ ಸೇವಾ ಕಾರ್ಯಕ್ರಮಗಳನ್ನು ಪ್ರತಿ ಬಾರಿಯೂ ಹಮ್ಮಿಕೊಳ್ಳುತ್ತಿದ್ದು, ಈ ಬಾರಿ ನಿರುದ್ಯೋಗಿಗಳ ಅನುಕೂಲಕ್ಕಾಗಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಮಾಜಿ ಶಾಸಕರು, ರಾಚಯ್ಯ ಟ್ರಸ್ಟ್ ಅಧ್ಯಕ್ಷರೂ ಆದ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮಾ.12ರಂದು ಉದ್ಯೋಗ ಮೇಳ ಕಾರ್ಯಕ್ರಮ ನಡೆಯಬೇಕಿತ್ತು. ಕೆಪಿಸಿಸಿ ಕಾರ್ಯಾಧ್ಯಕ್ಷರೂ, ಮಾಜಿ ಸಂಸದರೂ ಆದ ಆರ್. ಧ್ರುವನಾರಾಯಣ್ ಅವರ ನಿಧನದ ಹಿನ್ನೆಲೆ ಮುಂದೂಡಲಾಗಿತ್ತು. ನೀತಿ ಸಂಹಿತೆ ಜಾರಿಯಾಗುವ ಸಾಧ್ಯತೆಯಿರುವುದರಿಂದ ಮಾ.26ರಂದು ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ಇದರ ಸದುಪಯೋಗಪಡಿಸಿಕೊಳ್ಳುವಂತೆ ಕೋರಿದರು.

ಮೇಳವನ್ನು ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸುವರು. ಆಯ್ಕೆಗೊಂಡವರಿಗೆ ಮೈಸೂರಿನ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಆಯ್ಕೆ ಪ್ರಮಾಣ ಪತ್ರ ವಿತರಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರುಗಳಾದ ಎಸ್.ಜಯಣ್ಣ, ಎಸ್.ಬಾಲರಾಜು, ಜಿ.ಎನ್. ನಂಜುಂಡಸ್ವಾಮಿ, ನಗಸಭೆ ಸದಸ್ಯೆ ರೇಖಾ ರಮೇಶ್, ನಗರಸಭಾ ಎಲ್ಲಾ ಸದಸ್ಯರು, ಗಣ್ಯರು ಪಾಲ್ಗೊಳ್ಳಲಿದ್ದು, ಅಂದಿನ ಮೇಳದಲ್ಲಿ ನಿರುದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಉದ್ಯೋಗ ಗಿಟ್ಟಿಸುವ ಮೂಲಕ ಬದುಕು ಹಸನು ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ನಗರಸಭಾಧ್ಯಕ್ಷೆ ರೇಖಾ ರಮೇಶ್, ಮಾಜಿ ಅಧ್ಯಕ್ಷರುಗಳಾದ ರಮೇಶ್, ಬಸ್ತಿಪುರ ಶಾಂತು, ಉಪಾಧ್ಯಕ್ಷೆ ಸುಶೀಲ, ಸ್ಥಾಯಿ ಸಮಿತಿಯ ಅಧ್ಯಕ್ಷ ಗುಪ್ತ, ಸದಸ್ಯರಾದ ರಾಘವೇಂದ್ರ, ಸುಮ ಸುಬ್ಬಣ್ಣ, ಮಂಜುನಾಥ್, ಸುರೇಶ್, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಬಸ್ತಿಪುರ ರವಿ, ಚಿನ್ನಸ್ವಾಮಿ ಮಾಳಿಗೆ, ಅಣಗಳ್ಳಿ ಬಸವರಾಜು, ಶಾಂತು, ಹೊಂಗನೂರು ಚೇತನ್ ಇನ್ನಿತರರು ಇದ್ದರು

ಇಂದು ಗುಂಡ್ಲುಪೇಟೆಯಲ್ಲಿ ಫಲಾನುಭವಿಗಳ ಸಮ್ಮೇಳನ

ಚಾಮರಾಜನಗರ, ಮಾ.25– ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮ್ಮೇಳನವನ್ನು ಮಾ.26 ರಂದು ಬೆಳಗ್ಗೆ 10 ಗಂಟೆಗೆ ಗುಂಡ್ಲುಪೇಟೆಯ ಡಿ. ದೇವರಾಜ ಅರಸು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಸಮ್ಮೇಳನ ಉದ್ಘಾಟಿಸುವರು. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎನ್. ಮಹೇಶ್, ಆರ್. ನರೇಂದ್ರ, ಮರಿತಿಬ್ಬೇಗೌಡ, ಡಾ. ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ಗುಂಡ್ಲುಪೇಟೆ ಪುರಸಭೆ ಅಧ್ಯಕ್ಷರಾದ ಪಿ.ಗಿರೀಶ್, ಉಪಾಧ್ಯಕ್ಷರಾದ ದೀಪಿಕಾ ಅಶ್ವಿನ್, ಸದಸ್ಯ ಜಿ.ಎಸ್.ಕಿರಣ್ ಮುಖ್ಯಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಸವಿತಾ ಸಮಾಜ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಚಿನ್ನಸ್ವಾಮಿ ರಾಜೀನಾಮೆ

ಚಾಮರಾಜನಗರ, ಮಾ.25– ಚಾಮರಾಜನಗರ ಜಿಲ್ಲಾ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಚಿನ್ನಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆ. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಇದೇ ಮಾ.28ರಂದು ನಗರದ ಶಿವಕುಮಾರಸ್ವಾಮಿ ಸಮುದಾಯ ಭವನದ ಹಿಂಭಾಗವಿರುವ ಸವಿತಾ ಸಮಾಜದ ಜಿಲ್ಲಾ ಸಮುದಾಯ ಭವನದಲ್ಲಿ ಸಮುದಾಯದ ಸಭೆ ಆಹ್ವಾನಿಸಲಾಗಿದ್ದು, ಅಂದೇ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಹೀಗಾಗಿ ಸಮುದಾಯದ ಮುಖಂಡರು, ಯುವಕರು ಸಭೆಗೆ ಆಗಮಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷನಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ ಇದು ತೃಪ್ತಿ ನೀಡಿದೆ. ಮುಂದಿನ ದಿನಗಳಲ್ಲಿ ಇತರರಿಗೆ ಅವಕಾಶ ನೀಡುವ ಉದ್ದೇಶದಿಂದ ರಾಜೀನಾಮೆ ನೀಡುತ್ತಿದ್ದೇನೆ ಎಂದರು.

ಕೊರೊನಾ ಸಂದರ್ಭದಲ್ಲಿ ನನ್ನಿಂದ ಸಾಧ್ಯವಾದಷ್ಟು ಸಮುದಾಯಕ್ಕೆ ಅನುಕೂಲವಾಗುವ ಕೆಲಸ ಮಾಡಿದ್ದೇನೆ. ಸಮುದಾಯದ ಜನರು ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ನಾನು ಅಧ್ಯಕ್ಷನಾದ ಬಳಿಕ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುತ್ತಾ ಬಂದಿದ್ದೇನೆ ಎಂದರು.

ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್‌ಗೆ ಮನವಿ



ಮೈಸೂರು,ಮಾ.25(ಪಿಎಂ)– ವಕೀಲರಾದ ಪ್ರೇಮಕುಮಾರಿ ಅವರು ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದು, ಅವರಿಗೆ ಟಿಕೆಟ್ ನೀಡಬೇಕೆಂದು ಮೈಸೂರು ವಕೀಲರ ಸಂಘದ ಮಹಿಳಾ ಜಂಟಿ ಕಾರ್ಯದರ್ಶಿ ಪಿ.ಎಸ್.ಭಾಗ್ಯಮ್ಮ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಲತಃ ತಿ.ನರಸೀಪುರ ತಾಲೂಕಿನ ಹೆಮ್ಮಿಗೆಯವರಾದ ಪ್ರೇಮಕುಮಾರಿ, ರಾಜ್ಯ ಹೈಕೋರ್ಟ್ ಮತ್ತು ಮೈಸೂರು ಜಿಲ್ಲಾ ಕೋರ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಲವು ವರ್ಷಗಳಿಂದ ಬಿಜೆಪಿಯಲ್ಲಿ ತೊಡಗಿಸಿಕೊಂಡಿರುವ ಅವರು 30 ವರ್ಷಗಳ ರಾಜಕೀಯ ಅನುಭವ ಹೊಂದಿದ್ದಾರೆ. ತಾಪಂ ಸದಸ್ಯೆಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಮಹಿಳಾ ಸಮುದಾಯದ ಬಗ್ಗೆ ಕಾಳಜಿ ಹೊಂದಿರುವ ಅವರಿಗೆ ಬಿಜೆಪಿ ವರಿಷ್ಠರು ಟಿಕೆಟ್ ನೀಡಬೇಕು ಎಂದು ಕೋರಿದರು. ವಕೀಲರಾದ ಆಶಾ, ನಾಗರತ್ನ, ಯಶೋಧಾ, ಉಮಾ ಗೋಷ್ಠಿಯಲ್ಲಿದ್ದರು.



ಹರಿ ಮುರಾರಿ ಟ್ರಸ್ಟ್‌ನ ಅಲೋಕ್ ಗುಪ್ತಾ ಅವರು ಮೈಸೂರಿನ ಗೋಕುಲಂನ ಶ್ರೀ ರುದ್ರಾ ಅಂತ್ಯ ಸಂಸ್ಕಾರ ಚಾರಿಟಬಲ್ ಟ್ರಸ್ಟ್‌ಗೆ ಅತ್ಯಾಧುನಿಕ ಅನಿಲ ಚಿತಾಗಾರ ಯಂತ್ರವನ್ನು ಕೊಡುಗೆಯಾಗಿ ನೀಡಿದರು. ಈ ಸಂದರ್ಭ ಮೇಯರ್ ಶಿವಕುಮಾರ್, ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಟ್ರಸ್ಟ್ ಅಧ್ಯಕ್ಷ ಪಿ.ವಿಶ್ವನಾಥ್, ಉಪಾಧ್ಯಕ್ಷ ಆರ್.ಗುರು, ಧರ್ಮದರ್ಶಿ ಗುಂಡಪ್ಪಗೌಡ, ಕಾರ್ಯದರ್ಶಿ ಕೆಎಸ್‌ಎನ್ ಪ್ರಸಾದ್ ಶೇಷಾದ್ರಿ ಹಾಗೂ ಶ್ರೀಶೈಲ ರಾಮಣ್ಣ ಇದ್ದರು.

ರಾಹುಲ್ ಗಾಂಧಿ ಜನಪ್ರಿಯತೆ ಸಹಿಸದೇ 'ಅನರ್ಹ' ಅಸ್ತ್ರ ಪ್ರಯೋಗ

ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿಸೋಜಾ ಆಕ್ರೋಶ



ಮೈಸೂರು, ಮಾ.25(ಎಂಟಿವೈ)– ಭಾರತ್ ಜೋಡೋ ಯಾತ್ರೆಯ ಮೂಲಕ ಜನಪ್ರಿಯತೆ ಪಡೆದಿದ್ದ ಸಂಸದ ರಾಹುಲ್ ಗಾಂಧಿ ಏಳಿಗೆ ಸಹಿಸದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸುವ ಮೂಲಕ ವಿರೋಧ ಪಕ್ಷಗಳ ದನಿಯನ್ನು ಕುಗ್ಗಿಸುವ ಸಂಚು ಮುಂದುವರೆಸಿದೆ ಎಂದು ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿಸೋಜಾ ಕಿಡಿಕಾರಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಖಾಸಗಿ ರೆಸಾರ್ಟ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ವರಿಷ್ಠರೂ ಆಗಿರುವ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸಿದ ಭಾರತ್ ಜೋಡೋ ಯಾತ್ರೆಯಿಂದಾಗಿ ದೇಶದುದ್ದಗಲಕ್ಕೂ ಕಾಂಗ್ರೆಸ್ ಪರ ಒಲವು ಹೆಚ್ಚಾಗಿದೆ. ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಜನರಿಗೆ ಮನವರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗುತ್ತಿರುವುದನ್ನು ಮನಗಂಡು ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವವನ್ನು ರದ್ದುಗೊಳಿಸಿದ್ದಾರೆ ಎಂದರು.

ಕೇಂದ್ರದ ಈ ನಿರ್ಧಾರ ವಿರೋಧ ಪಕ್ಷಗಳ ಬೆದರಿಸುವ ಕುತಂತ್ರವಾಗಿದೆ. ಇಂತಹ ಕುತಂತ್ರ ರಾಜಕಾರಣಕ್ಕೆ ಕಾಂಗ್ರೆಸ್ ಬಗ್ಗುವುದಿಲ್ಲ. ರಾಹುಲ್ ಗಾಂಧಿ ದೇಶದುದ್ದಗಲಕ್ಕೂ ಎಲ್ಲಾ ವರ್ಗದ ಜನರ ಮನಸ್ಸನ್ನು ಬೆಸೆಯುವ ಕೆಲಸ ಮಾಡಿದ್ದಾರೆ. ಇದು ಮುಂಬರುವ ಲೋಕಸಭಾ ಚುನಾವಣೆ ಮೇಲೆ ಸಾಕಷ್ಟು ಪರಿಣಾಮ ಬೀರಲಿದ್ದು, ಇದರಿಂದ ಬಿಜೆಪಿಗೆ ದೊಡ್ಡ ನಡುಕ ಶುರುವಾಗಿದೆ. ಆ ಕಾರಣದಿಂದಲೇ ಬಿಜೆಪಿ ವಿರುದ್ಧ ಮಾತನಾಡುವವರ ದನಿ ಕುಗ್ಗಿಸಲಾಗುತ್ತಿದೆ. ಆ ಮೂಲಕ ಪ್ರಜಾಪ್ರಭುತ್ವದ ವಿರೋಧಿ ನೀತಿ ಅನುಸರಿಸಲಾಗುತ್ತಿದೆ ಎಂದು ಕಿಡಿಕಾರಿದರು.

ಅದಾನಿ ಸಮೂಹದ ಭ್ರಷ್ಟಾಚಾರ ಕುರಿತು ಹಿಂಡನ್‌ಬರ್ಗ್ ಆರೋಪವನ್ನು ಜಂಟಿ ಸಂಸದೀಯ ಸಮಿತಿ(ಜೆಪಿಸಿ) ಮೂಲಕ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಆಗ್ರಹಿಸುತ್ತಿರುವುದು ಬಿಜೆಪಿಗೆ ಭಯ ಶುರುವಾಗಿರುವಂತೆ ಕಾಣುತ್ತಿದೆ. ಆದ್ದರಿಂದಲೇ ಸಣ್ಣ ಪ್ರಕರಣವನ್ನು ಮುಂದಿಟ್ಟುಕೊಂಡು ರಾಹುಲ್ ಅವರನ್ನು ಸಂಕಷ್ಟಕ್ಕೆ ಸಿಲುಕಿಸುವ ಪಿತೂರಿ ಮಾಡುತ್ತಿದೆ. ಇದರ ವಿರುದ್ಧ ಮಹಿಳಾ ಕಾಂಗ್ರೆಸ್ ದೇಶವ್ಯಾಪ್ತಿ ಸಹಿ ಸಂಗ್ರಹ ಚಳವಳಿ ನಡೆಸಲಿದೆ ಎಂದು ಹೇಳಿದರು.

ಶೇ.40ರಷ್ಟು ಕಮಿಷನ್ ಸರ್ಕಾರ: ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬೊಮ್ಮಾಯಿ ನಾಯಕತ್ವದ ಬಿಜೆಪಿ ಸರ್ಕಾರ ಶೇ.40 ಕಮಿಷನ್ ಇಲ್ಲದೇ ಯಾವುದೇ ಕೆಲಸ ಮಾಡುತ್ತಿಲ್ಲ ಎಂಬುದು ದೇಶವ್ಯಾಪಿ ಕೇಳಿ ಬರುತ್ತಿದೆ. ಈ ಹಿಂದೆ ಶಂಕುಸ್ಥಾಪನೆಗೆಂದು ಮೋದಿ ಅವರು ಕರ್ನಾಟಕಕ್ಕೆ ಬಂದಿದ್ದ ವೇಳೆ ಕೆಲವು ರಸ್ತೆಗಳಿಗೆ ತರಾತುರಿಯಲ್ಲಿ ಡಾಂಬರ್ ಹಾಕಲಾಯಿತು. ಆದರೆ, ಮೋದಿ ಹೊಸದಿಲ್ಲಿ ತಲುಪುವ ಮುನ್ನವೇ ಡಾಂಬರ್ ಕಿತ್ತು ಬಂದಿದ್ದ ಘಟನೆ ಶೇ.40 ಭ್ರಷ್ಟಾಚಾರಕ್ಕೆ ಸೂಕ್ತ ಉದಾಹರಣೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಉದ್ದೇಶದಿಂದ ಪ್ರಿಯಾಂಕಾ ಗಾಂಧಿ ಪ್ರಚಾರಕ್ಕೆ ಆಗಮಿಸಲಿದ್ದಾರೆ. ಈ ಹಿಂದೆ ನಡೆದ ಪ್ರಜಾಧ್ವನಿ ಯಾತ್ರೆಯ ವೇಳೆ ಪ್ರತಿ ಮನೆಯ ಒಡತಿಗೆ ಮಾಸಿಕ 2000 ರೂ ಸಹಾಯಧನದ ಗ್ಯಾರಂಟಿ ಕಾರ್ಡ್ ಉದ್ಘಾಟನೆ ವೇಳೆ ಅವರು ಕರ್ನಾಟಕಕ್ಕೆ ಬಂದಿದ್ದರು ಎಂದರು. ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಇದ್ದರು.

ಮೂರನೇ ಪುಟದಿಂದ

ಪ್ರಧಾನಿ ಮೋದಿ ಭೇಟಿ


ಸೇರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೊಸ ಗಣತಿಯಂತೆ 175ಕ್ಕೂ ಹೆಚ್ಚು ಹುಲಿಗಳಿರುವುದು ದೃಢಪಟ್ಟಿದೆ. 1020 ಚ.ಕಿ.ಮಿ ವಿಸ್ತಾರ ಹೊಂದಿರುವ ಈ ಅರಣ್ಯ ಪ್ರದೇಶದಲ್ಲಿ ಈ ಹಿಂದಿನ ಗಣತಿಯಲ್ಲಿ 139 ಹುಲಿಗಳಿದ್ದವು.

ನಾಗರಹೊಳೆಯಲ್ಲಿ 145ಕ್ಕೂ ಹೆಚ್ಚು: ಮೈಸೂರು ಹಾಗೂ ಕೊಡಗು ಜಿಲ್ಲೆಗೆ ಸೇರಿರುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ 145ಕ್ಕೂ ಹುಲಿ ಕಂಡುಬಂದಿದೆ. 200 ಚ.ಕಿ.ಮಿ ಬಫರ್ ಜೋನ್ ಪ್ರದೇಶದೊಂದಿಗೆ 843 ಚ.ಕಿ ವಿಸ್ತಾರವಿರುವ ಈ ಅರಣ್ಯ ಪ್ರದೇಶದಲ್ಲಿ ಈ ಹಿಂದೆ 110ಕ್ಕೂ ಹುಲಿಗಳಿದ್ದವು.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ ಹುಲಿ ಸಂರಕ್ಷಿತ ಪ್ರದೇಶ 572 ಚದರ ಕಿ.ಮಿ ವ್ಯಾಪ್ತಿಯಲ್ಲಿ ವಿಸ್ತರಿಸಿದ್ದು, ಆರು ರೇಂಜ್, ಎರಡು ಉಪವಿಭಾಗ ಹೊಂದಿದೆ. ಗಣತಿಯಲ್ಲಿ 65–75 ಹುಲಿಗಳು ಪತ್ತೆಯಾಗಿವೆ.

ಮಲೆ ಮಹದೇಶ್ವರ ಬೆಟ್ಟದಲ್ಲೂ 23 ಹುಲಿ: ರಾಜ್ಯದ ನೂತನ ಹುಲಿ ಸಂರಕ್ಷಿತ ಪ್ರದೇಶವಾದ ಮಲೆ ಮಹದೇಶ್ವರ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶ 920 ಚ.ಕಿ.ಮಿ ವಿಸ್ತಾರವಾದ ಬೆಟ್ಟ ಗುಡ್ಡಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿದೆ. 7 ರೇಂಜ್, 3 ಉಪ ವಿಭಾಗಗಳಲ್ಲಿ 23–30 ಹುಲಿಗಳು ನೆಲೆಸಿವೆ ಎನ್ನಲಾಗಿದೆ. ನಾಗರಹೊಳೆಗಿಂತ ಶೇ.20ರಷ್ಟು ಹೆಚ್ಚಿನ ಕಾಡು ಕಂಡು ಬಂದಿದೆ. ಹುಲಿ ಕಂಡು ಬಂದ ಹಿನ್ನೆಲೆಯಲ್ಲಿ ಮಲೆ ಮಹದೇಶ್ವರ ವನ್ಯಧಾಮವನ್ನು ಹೊಸದಾಗಿ ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಸತ್ಯಮಂಗಲ, ಬಿಳಿಗಿರಿ ರಂಗನಬೆಟ್ಟ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತೆ ಮಲೆ ಮಹದೇಶ್ವರ ಬೆಟ್ಟದ ಕಾಡು ಇದೆ.

ಗಿರಿಜಮ್ಮ ನಿಧನ



ಮೈಸೂರು, ಮಾ.25– ಶ್ರೀರಾಂಪುರ 2ನೇ ಹಂತದ ನಿವಾಸಿ ಶ್ರೀಮತಿ ಗಿರಿಜಮ್ಮ(78) ಅವರು ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂ ಸ್ಮಶಾನದಲ್ಲಿ ಇಂದು ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸಂಘ–ಸಂಸ್ಥೆಗಳ ನೆರವು ಪಡೆಯಲು ಪರಿಶೀಲಿಸಿ ನೋಡಿ

● ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿ ಅಧ್ಯಕ್ಷ ನ್ಯಾ. ಸುಭಾಷ್ ಬಿ.ಆಡಿ ಸಲಹೆ

● ಮೈಸೂರಿನ ಸೌಂದರ್ಯ, ಸ್ವಚ್ಛತೆ ಸಂಬಂಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ



ಕಸ ಎಸೆಯುವವರಿಗೆ ದಂಡ ವಿಧಿಸಿ

ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಮನೆಯಲ್ಲೇ ಹಸಿ ಕಸ ಹಾಗೂ ಒಣ ಕಸವಾಗಿ ವಿಂಗಡಿಸಿ, ನೀಡಬೇಕು. ತ್ಯಾಜ್ಯವನ್ನು ಮನಬಂದಲ್ಲಿ ಎಸೆಯುವವರಿಗೆ ದಂಡ ವಿಧಿಸಬೇಕು. ಸ್ವಚ್ಛತೆಗೆ ಸಹಕರಿಸದೆ ಹೋದವರಿಗೆ ದಂಡ ವಿಧಿಸದೆ ಹೋದರೆ ನಗರವನ್ನು ಶುಚಿಯಾಗಿಡಲು ಸಾಧ್ಯವಿಲ್ಲ. ಈ ಹಿಂದೆ ಮೈಸೂರು ಸ್ವಚ್ಛ ನಗರ ಬಿರುದು ಪಡೆದಿತ್ತು. ಆದರೆ, ಈಗ ಸ್ವಚ್ಛತೆಯಲ್ಲಿ ಸ್ವಲ್ಪ ಹಿನ್ನೆಡೆಯಾದಂತೆ ಕಂಡು ಬರುತ್ತಿದೆ. ಇಂದೋರ್ ಸ್ವಚ್ಛತೆಯಲ್ಲಿ ದೇಶದ ನಂ.1 ಆಗಲು ಪ್ರಮುಖ ಕಾರಣ ಅಲ್ಲಿಯ ಜನರು, ಜನಪ್ರತಿನಿಧಿಗಳು, ಅಧಿಕಾರಿಗಳು, ಸಂಘ ಸಂಸ್ಥೆಗಳು ಹಾಗೂ ಶಾಲಾ, ಕಾಲೇಜು ಸ್ವಚ್ಛತೆಗೆ ನೀಡುತ್ತಿರುವ ಸಹಕಾರ. ಕೇವಲ ಪೌರಕಾರ್ಮಿಕರಿಂದ ಮಾತ್ರ ನಗರದ ಸ್ವಚ್ಛತೆ ಕಾಪಾಡಲು ಸಾಧ್ಯವಿಲ್ಲ. ಇದಕ್ಕೆ ಜನರ ಮಾನಸಿಕತೆಯೂ ಬದಲಾಗಬೇಕಾಗಿದೆ ಎಂದರು.

ಮೈಸೂರು, ಮಾ.25(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿಗೆ ಪಾರಂಪರಿಕ ಕಟ್ಟಡಗಳೇ ಭೂಷಣದಂತಿದ್ದು, ಅವುಗಳ ಸಂರಕ್ಷಣೆಗೆ ಸಂಘ–ಸಂಸ್ಥೆಗಳ ನೆರವು ಪಡೆದುಕೊಳ್ಳುವ ಸಾಧ್ಯ–ಸಾಧ್ಯತೆ ಪರಿಶೀಲಿಸುವಂತೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿ ಅಧ್ಯಕ್ಷರಾದ ನ್ಯಾಯಮೂರ್ತಿ ಸುಭಾಷ್ ಬಿ. ಆಡಿ ಸೂಚಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಸ್ವಚ್ಛತೆ ಕುರಿತಂತೆ ಮಹಾನಗರ ಪಾಲಿಕೆಯ ಪಾಲುದಾರರು ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಸಲಹೆ–ಸೂಚನೆ ಆಲಿಸಿದರು.

ಈ ವೇಳೆ ಪಾರಂಪರಿಕ ತಜ್ಞ ಪ್ರೊ.ರಂಗರಾಜು ಮಾತನಾಡಿ, ಮೈಸೂರಿನಲ್ಲಿರುವ ಹಲವು ಪಾರಂಪರಿಕ ಕಟ್ಟಡಗಳು ದುಸ್ಥಿತಿ ತಲುಪಿವೆ. ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ, ಮಹಾರಾಣಿ ವಿಜ್ಞಾನ ಕಾಲೇಜಿನ ಒಂದು ಭಾಗ ಕುಸಿದಿದೆ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸರ್ಕಾರ ಮುಂದಾಗಿಲ್ಲ. ಅನುದಾನದ ಕೊರತೆ ಕಾರಣ ಸಂರಕ್ಷಣಾ ಕಾರ್ಯ ನಡೆಸುತ್ತಿಲ್ಲ. ನಿರ್ಲಕ್ಷ್ಯ ಮುಂದುವರೆದರೆ ಪಾರಂಪರಿಕ ಕಟ್ಟಡಗಳು ಅವನತಿಯತ್ತ ಸಾಗುತ್ತವೆ. ಈ ಹಿನ್ನೆಲೆಯಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಅನುದಾನ ಕೊಡಿಸುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ, ಮೈಸೂರು ನಗರಕ್ಕೆ ಪಾರಂಪರಿಕ ನಗರ ಕೀರ್ತಿಯೂ ಇದೆ. ಇಲ್ಲಿರುವ ಅನೇಕ ಪಾರಂಪರಿಕ ಕಟ್ಟಡಗಳು ಮೈಸೂರಿನ ಹಿರಿಮೆ ಹೆಚ್ಚಿಸಿವೆ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮಾಡದಿದ್ದರೆ ಮೈಸೂರು ನಗರ ಪಾರಂಪರಿಕ ನಗರ ಮಹತ್ವ ಕಳೆದುಕೊಳ್ಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಅನುದಾನ ಇಲ್ಲದಿದ್ದರೆ ಸಂಘ–ಸಂಸ್ಥೆಗಳು ಹಾಗೂ ಕಂಪನಿಗಳ ನೆರವು ಪಡೆದುಕೊಳ್ಳಬೇಕು. ಕಂಪನಿಗಳು ಒಂದೊಂದು ಪಾರಂಪರಿಕ ಕಟ್ಟಡಗಳನ್ನು ದತ್ತು ಪಡೆದುಕೊಂಡು ಸಂರಕ್ಷಣೆ ಮಾಡಬಹುದು. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಆರೋಗ್ಯಾಧಿಕಾರಿ ಡಾ.ಡಿ.ಜಿ. ನಾಗರಾಜ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ಸೇರಿದಂತೆ ಇನ್ನಿರರು ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದಲ್ಲಿ ತಿರುಪತಿ ಮಾದರಿ ಪ್ಲಾಸ್ಟಿಕ್ ಹಾವಳಿ ಹತ್ತಿಕ್ಕಿ



ಮೈಸೂರು,ಮಾ.25(ಎಂಟಿವೈ)– ಮೈಸೂರು ಭಾಗದ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣವಾಗಿರುವ ಚಾಮುಂಡಿ ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿ ಸಲು ತಿರುಪತಿ ಮಾದರಿಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿ ಅಧ್ಯಕ್ಷ ನ್ಯಾ.ಸುಭಾಷ್ ಬಿ.ಆಡಿ ಸೂಚಿಸಿದ್ದಾರೆ. ಚಾಮುಂಡಿಬೆಟ್ಟದ ಪಾವಿತ್ರ್ಯತೆ, ಪರಿಸರ ಸಂರಕ್ಷಣೆಗೆ ಪ್ಲಾಸ್ಟಿಕ್ ನಿಷೇಧಿಸಬೇಕು. ತಿರುಪತಿಯಲ್ಲಿ ಪ್ಲಾಸ್ಟಿಕ್ ನಿಷೇಧ ಆದೇಶ ವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಇದರಿಂದ ಅಲ್ಲಿ ಎಲ್ಲಿಯೂ ಪ್ಲಾಸ್ಟಿಕ್ ವಸ್ತು ಕಾಣುವುದೇ ಇಲ್ಲ. ಈ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಹಾಗೂ ಚಾಮುಂಡಿ ಬೆಟ್ಟ ಗ್ರಾಮ ಪಂಚಾಯಿತಿ ಸದಸ್ಯರೊಂದಿಗೆ ಚರ್ಚೆ ನಡೆಸುವುದಾಗಿ ತಿಳಿಸಿದರು.

ಬೆಟ್ಟದ ರಸ್ತೆಯ ಪ್ರವೇಶ ದ್ವಾರದಲ್ಲಿಯೇ ಖಾಸಗಿ ವಾಹನಗಳಲ್ಲದೆ ಬಸ್‌ಗಳಲ್ಲೂ ತಪಾಸಣಾ ಕಾರ್ಯ ನಡೆಯಬೇಕು. ಅಲ್ಲದೇ, ಬೆಟ್ಟಕ್ಕೆ ಪ್ಲಾಸ್ಟಿಕ್ ವಸ್ತು ತಂದರೆ ದಂಡ ವಿಧಿಸುವುದಾಗಿ ಎಚ್ಚರಿಕೆ ಸಂದೇಶ ಬಿತ್ತರಿಸಬೇಕು. ಆಗ ಮಾತ್ರ ಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ ತಡೆಗಟ್ಟಬಹುದು. ಬೆಟ್ಟದಲ್ಲಿರುವ ಮಳಿಗೆಗಳಲ್ಲೂ ಪ್ಲಾಸ್ಟಿಕ್ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕಿ, ಎಚ್ಚರಿಕೆ ನೀಡಿದ ನಂತರವೂ ಪ್ಲಾಸ್ಟಿಕ್ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳು ವಂತೆ ಸೂಚಿಸಿದರಲ್ಲದೆ, ಚಾಮುಂಡಿಬೆಟ್ಟದ ತಪ್ಪಲು ಹಾಗೂ ಬೆಟ್ಟದ ಮೇಲ್ಭಾಗದಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಹಾಕಬೇಕು. ಬೆಟ್ಟದ ಮೇಲ್ಭಾಗದಲ್ಲಿ ಎರಡು ಮಹಡಿಗಿಂತ ಎತ್ತರದ ಕಟ್ಟಡ ನಿರ್ಮಿಸಲು ಅನುಮತಿ ನೀಡಬಾರದು ಎಂದು ಸೂಚಿಸಿದರು.

ಅಮೆರಿಕ: ಭೀಕರ ಸುಂಟರಗಾಳಿಗೆ 23 ಮಂದಿ ಸಾವು

ವಾಷಿಂಗ್ಟನ್, ಮಾ.25– ಅಮೆರಿಕದ ದಕ್ಷಿಣ ರಾಜ್ಯಗಳಾದ ಅಲಬಾಮಾ ಮತ್ತು ಮಿಸಿಸಿಪ್ಪಿಗಳಲ್ಲಿ ಶುಕ್ರವಾರ ಬೀಸಿದ ಭೀಕರ ಸುಂಟರಗಾಳಿಯ ಪರಿಣಾಮ ಕಟ್ಟಡಗಳು ಕುಸಿದು ಬಿದ್ದು 23 ಮಂದಿ ಸಾವನ್ನಪ್ಪಿದ್ದಾರೆ. ಹವಾಮಾನ ವೈಪರೀತ್ಯದಿಂದ ಆಲಿಕಲ್ಲುಗಳು ಬಿದ್ದಿವೆ, ಹಲವೆಡೆ ವಿದ್ಯುತ್‌ಸಂಪರ್ಕ ಕಡಿತಗೊಂಡಿದೆ. ಚಂಡಮಾರುತದ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ಅಧಿಕಾರಿಗಳು 'ನಿಮ್ಮ ಜೀವ ಅಪಾಯದಲ್ಲಿದೆ, ಪ್ರಾಣವನ್ನು ರಕ್ಷಿಸಿಕೊಳ್ಳಿ' ಎಂದು ಜನರಿಗೆ ಎಚ್ಚರಿಕೆ ನೀಡಿದ್ದಾರೆ. ಸುಂಟರಗಾಳಿಯು ಮಿಸಿಸಿಪ್ಪಿಯ 96 ಕಿ.ಮೀ.ನಷ್ಟು ದೂರದವರೆಗೆ ಹಾನಿ ಮಾಡಿದೆ ಎಂದು ರಾಷ್ಟ್ರೀಯ ಹವಾಮಾನ ಸಂಸ್ಥೆಯು ತಿಳಿಸಿದೆ.

ಆದಿಚುಂಚನಗಿರಿ ಶ್ರೀಗಳ ಬಳಿ ರಂಗಾಯಣ ನಿರ್ದೇಶಕರ ಕ್ಷಮೆ ಹೋರಾಟ ಕೈಬಿಡಲು ಒಕ್ಕಲಿಗರ ನಿರ್ಧಾರ



ಮೈಸೂರು, ಮಾ.25(ಎಸ್‌ಪಿಎನ್)– ಆದಿಚುಂಚನಗಿರಿ ಶ್ರೀಗಳ ಕುರಿತು ಹೇಳಿಕೆ ನೀಡಿದ್ದ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪನವರೇ, ಶ್ರೀಗಳ ಬಳಿ ಖುದ್ದು ಕ್ಷಮೆಯಾಚಿಸಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಹಮ್ಮಿಕೊಳ್ಳಲಾಗಿದ್ದ ವಿವಿಧ ರೀತಿಯ ಹೋರಾಟಗಳನ್ನು ಕೈಬಿಡಲು ಮೈಸೂರು ಜಿಲ್ಲಾ ಒಕ್ಕಲಿಗರ ಹಿತಚಿಂತಕರ ವೇದಿಕೆ ನಿರ್ಧರಿಸಿ ನಿರ್ಣಯ ಕೈಗೊಂಡಿತು.

ನ್ಯೂ ಕಾಂತರಾಜೇ ಅರಸ್ ರಸ್ತೆಯ ಶ್ರೀ ಬಂದಂತಮ್ಮ ಮತ್ತು ಕಾಳಮ್ಮ ದೇವಸ್ಥಾನದ ಆವರಣದಲ್ಲಿ ಜಿಲ್ಲಾ ಒಕ್ಕಲಿಗರ ಹಿತಚಿಂತಕರ ವೇದಿಕೆ ವತಿಯಿಂದ ಶನಿವಾರ ನಡೆದ ಸಭೆಯಲ್ಲಿ ಮೈಸೂರು ಜಿಲ್ಲಾ ಮತ್ತು ತಾಲೂಕು ಒಕ್ಕಲಿಗ ಮುಖಂಡರ ಸಮ್ಮುಖದಲ್ಲಿ ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ ಶನಿವಾರ ನಿರ್ಣಯ ಮಂಡಿಸಿದರು.

ನಂತರ ಈ ನಿರ್ಣಯದ ಪರ ವಿವಿಧ ಮುಖಂಡರು ಮಾತನಾಡಿ, ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆದೇಶದಂತೆ ಶ್ರೀಗಳ ವಿರುದ್ಧ ಹೇಳಿಕೆ ನೀಡಿರುವ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧದ ಹಮ್ಮಿಕೊಳ್ಳಬೇಕಿದ್ದ ವಿವಿಧ ರೀತಿಯ ಹೋರಾಟವನ್ನು ಇಲ್ಲಿಗೆ ಕೈಬಿಟ್ಟು, ಇಂತಹ ಘಟನೆ ಮತ್ತೊಮ್ಮೆ ಮರುಕಳಿಸದಂತೆ ಎಚ್ಚರಿಕೆ ವಹಿಸುವಂತೆ ಎಚ್ಚರಿಕೆ ನೀಡಿದರು.

ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಕಾರ್ಯದರ್ಶಿ ಚೇತನ್, ಮುಖಂಡರಾದ ಗಂಗಾಧರ್, ಮಂಜೇಗೌಡ, ಶ್ರೀಧರ್, ಶಂಕರ್, ಕಾಳಪ್ಪ ರಾಜಣ್ಣ, ಒಕ್ಕಲಿಗರ ಹಿತಚಿಂತಕರ ವೇದಿಕೆಯ ರವಿಗೌಡ, ದತ್ತು ರಾಜ್‌ಕುಮಾರ್, ಕನ್ನಡ ಪರ ಹೋರಾಟಗಾರ ಶಿವಶಂಕರ್, ಕಿಲಾರೆ ಜಯರಾಂ, ಶ್ರೀ ಬಂದಂತಮ್ಮ ಮತ್ತು ಕಾಳಮ್ಮ ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಬಿ.ರಮೇಶ್, ಅಣ್ಣೇಗೌಡ, ತಮ್ಮಯ್ಯ, ಪಡುವಾರಹಳ್ಳಿ ಕೃಷ್ಣಪ್ಪ, ಇತಿಹಾಸ ಭೈರಪ್ಪ, ರವಿ ರಾಜಕೀಯ, ಉಮಾಶಂಕರ್, ಎನ್.ಆರ್.ಮೊಹಲ್ಲಾದ ರಾಮಣ್ಣ, ಸುಶೀಲ ನಂಜಪ್ಪ, ಯಮುನಾ, ಗುರುರಾಜ್, ಕನ್ನಡಪರ ಹೋರಾಟಗಾರ ತೇಜೇಶ್ ಲೋಕೇಶ್‌ಗೌಡ, ವಕೀಲ ದಿನೇಶ್‌ಗೌಡ ಸೇರಿದಂತೆ ಇನ್ನಿತರ ಮುಖಂಡರು ಉಪಸ್ಥಿತರಿದ್ದರು. ಈ ವೇಳೆ ಮಾಜಿ ಶಾಸಕ ವಾಸು ಉಪಸ್ಥಿತರಿದ್ದರು. ಈ ಸಭೆಯ ನಿರ್ಣಯಕ್ಕೆ ಬೆಂಬಲ ಘೋಷಿಸಿದರು.

ನೆಹರೂಗೆ ಪ್ರಧಾನಿ ಹುದ್ದೆ ಗಾಂಧೀಜಿ ಕೊಟ್ಟ ಗಿಫ್ಟ್!

● ನಾಡಿನ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ವಿವರಣೆ ● ಚುನಾವಣೆಯಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲರು ಗೆದ್ದರೂ ಪದವಿ ತ್ಯಾಗ ಮಾಡಿದರು ● ಅಜಕ್ಕಳ ಗಿರೀಶ ಭಟ್‌ರ 'ಬಹುವಚನಕ್ಕೊಂದೇ ತತ್ತ್ವ' ಕೃತಿ ಬಿಡುಗಡೆ



ಬಹುತ್ವದ ಕಲ್ಪನೆ ಭಾರತಕ್ಕೆ ಹೊಸದಲ್ಲ

"ರಿಲಿಜಿಯನ್ ಪದವನ್ನು ಧರ್ಮ ಎಂದು, ಗಾಡ್ ಎನ್ನುವುದನ್ನು ದೇವರು ಎಂದು ಮಾಡಲಾಗಿತ್ತು. ಅದರೆ ಭಾರತದ ಬಹುತ್ವದ ಧರ್ಮಕ್ಕೂ, ಪಾಶ್ಚಾತ್ಯ ಧರ್ಮಕ್ಕೂ ಬಹಳ ವ್ಯತ್ಯಾಸವಿದೆ. ಆರ್ಯರು ಬೇರೆ ದೇಶದಿಂದ ಬಂದವರು ಎಂದು ಹಲವು ತತ್ವಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಅದರೆ ಇವತ್ತಿನ ಪರಿಸ್ಥಿತಿಯಲ್ಲಿ ಆರ್ಯರ ಆಕ್ರಮಣದ ಇತಿಹಾಸ ಸುಳ್ಳು ಎಂದು ಗೊತ್ತಾಗಿದೆ. ಬಹುತ್ವದ ಕಲ್ಪನೆ ಭಾರತ ದೇಶಕ್ಕೆ ಹೊಸದೇನು ಅಲ್ಲ. ಎಲ್ಲರನ್ನೂ ಒಂದೇ ರೀತಿ ನೋಡುವುದು ಸ್ವಾಭಾವಿಕ ಗುಣ. ಬೇರೆ ದೇಶದಲ್ಲಿ ಒಂದೇ ಧರ್ಮ, ಒಂದೇ ಸಂಸ್ಕೃತಿ ವ್ಯವಸ್ಥೆ ಇದೆ. ಭಾರತದಲ್ಲಿ ಬಹುತ್ವದ ಸಂಸ್ಕೃತಿಯನ್ನು ಒಳಗೊಂಡಿದ್ದೇವೆ. ಇಂದಿಗೂ ಡಾ.ಎಸ್.ಎಲ್.ಭೈರಪ್ಪ ಅವರಂತಹವರ ಸಾಹಿತ್ಯ ಕೃತಿಗಳು ಚರ್ಚೆಯಾಗದಂತೆ, ವಿಮರ್ಶೆಗೆ ಒಳಪಡದಂತೆ ನೋಡಿಕೊಳ್ಳುವ ಒಂದು ವರ್ಗವಿದೆ. ಆದರೆ, ಈಗ ಎಲ್ಲರಿಗೂ ವಾಸ್ತವ ಏನು ಎಂಬುದು ಅರಿವಾಗುತ್ತಿದೆ.

–ಲೇಖಕ ರೋಹಿತ್ ಚಕ್ರತೀರ್ಥ

"ಹಿಂದೂ ಧರ್ಮದಲ್ಲಿ ಬಹುತ್ವ ಧರ್ಮ ಅಡಗಿದೆ. ದಕ್ಷಿಣ ಭಾರತದಲ್ಲಿ ಋಷಿ ಅಗಸ್ತ್ಯ ಮಹಾ ಮುನಿಗಳು ಲಲಿತ ಸಹಸ್ರನಾಮ, ಶ್ರೀ ಚಕ್ರ ಆರಾಧನೆ, ಸೂರ್ಯ ಆರಾಧನೆಯ ಬಗ್ಗೆ ಋಗ್ವೇದದಲ್ಲಿ ಹೇಳಿದ್ದಾರೆ. ಭಾರತವಲ್ಲದೆ, ಮಲೇಷಿಯಾ, ಇಂಡೋನೇಷಿಯಾದಲ್ಲಿ ಇಂದಿಗೂ ಭೂಕಂಪವಾದಾಗ ಅಲ್ಲಿ ಅನೇಕ ಶಿವನ ವಿಗ್ರಹದ ಜೊತೆ ಅಗಸ್ತ್ಯ ಮಹಾ ಮುನಿಗಳ ವಿಗ್ರಹವು ಪತ್ತೆಯಾಗುತ್ತಿವೆ.

–ವಕೀಲ ಓ.ಶಾಮಭಟ್, ಅಧ್ಯಕ್ಷ, ಸಾಮಾಜಿಕ ನ್ಯಾಯ ವೇದಿಕೆ

ಮೈಸೂರು, ಮಾ.25(ಜಿಎ)– ಮಹಾತ್ಮ ಗಾಂಧೀಜಿ ಅವರಿಗೆ ನೆಹರು ಅವರ ಮೇಲಿನ ವ್ಯಾಮೋಹ ಹೆಚ್ಚಾಗಿದ್ದರ ಪರಿಣಾಮ ಸರ್ದಾರ್ ವಲ್ಲಭಾಯ್ ಪಟೇಲರು ಪ್ರಧಾನಿ ಹುದ್ದೆಯಿಂದ ವಂಚಿತರಾಗ ಬೇಕಾಗಿ ಬಂತು. ನೆಹರು ಎಲೆಕ್ಷನ್‌ನಲ್ಲಿ ಗೆದ್ದು ಬಂದವರಲ್ಲ. ಗಾಂಧೀಜಿಯವರು ಕೊಟ್ಟ ಗಿಫ್ಟ್ ಎಂದು ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ತಿಳಿಸಿದರು.

ಸಾಮಾಜಿಕ ನ್ಯಾಯ ವೇದಿಕೆ ಮತ್ತು ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಸಹಯೋಗದಲ್ಲಿ ಮೈಸೂರು ಜೆಎಲ್‌ಬಿ ರಸ್ತೆಯ ಗೋಪಾಲಸ್ವಾಮಿ ಕಾಲೇಜಿನಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿಂತಕ ಅಜಕ್ಕಳ ಗಿರೀಶ ಭಟ್‌ರ 'ಬಹುವಚನಕ್ಕೊಂದೇ ತತ್ತ್ವ' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಸ್ವತಂತ್ರ ಭಾರತದ ಮೊದಲ ಪ್ರಧಾನಿ ಆಯ್ಕೆ ಸಂದರ್ಭದಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲರಿಗೆ ಅಧಿಕ ಬೆಂಬಲ ವ್ಯಕ್ತವಾಗಿತ್ತು. ಈ ವೇಳೆ ನೆಹರು ಕೋಪಗೊಂಡು ಸಭೆಯಿಂದ ಹೊರ ನಡೆದಿದ್ದರು. ಆ ವೇಳೆ ನೆಹರು ಮೇಲೆ ಹೆಚ್ಚು ವ್ಯಾಮೋಹ ಹೊಂದಿದ್ದ ಗಾಂಧೀಜಿಯವರು, ಸರ್ದಾರ್ ವಲ್ಲಭಭಾಯ್ ಪಟೇಲರಿಗೆ ಪ್ರಧಾನಿ ಸ್ಥಾನ ತ್ಯಜಿಸುವಂತೆ ತಿಳಿಸಿದ್ದರಿಂದ ನೆಹರು ಅವರಿಗೆ ಪ್ರಧಾನಿಯಾಗುವ ಅವಕಾಶ ದೊರೆಯಿತು ಎಂದರು.

ನೆಹರು ಪ್ರಧಾನಿಯಾದ ನಂತರ ದೇಶದಲ್ಲಿ ಏನೆಲ್ಲಾ ಆಯಿತೆಂದು ತಿಳಿದಿದೆ. ಬೇರಿಯರ್ ಎಲ್ವಿನ್ ಎಂಬ ಕ್ರೈಸ್ತ ಪಾದ್ರಿಗೆ ಲಕ್ಷಾಂತರ ಹಣ ನೀಡಿದ್ದರ ಫಲವಾಗಿ ಮೇಘಾಲಯ ಭಾಗದದಲ್ಲಿ ಬುಡಕಟ್ಟು ಸಮುದಾಯದವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲಾಯಿತು. ಮದರ್ ಥೆರೆಸಾ ಸೇವೆ ಮಾಡಿದ ಎಲ್ಲರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಕರೆದುಕೊಂಡು ಹೋದರು. ಇದಕ್ಕೆಲ್ಲ ಯಾರು ಹೊಣೆ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಿದೆ ಎಂದು ನೆಹರು ಆಡಳಿತ, ಚಿಂತನೆ ಕುರಿತು ವಿಷಾಧಿಸಿದರು.

ಜೈಲಿನಲ್ಲೇ ಎಲ್ಲಾ ಸವಲತ್ತು: ನೆಹರೂ ಅವರಿಗೆ ಕೃಷ್ಣ ಅಶೀಸಿಂಗ್ ಎಂಬ ತಂಗಿ ಇದ್ದರು. ಅವರ 'ವಿತ್ ನೋ ರಿಗ್ರೇಟ್' ಪುಸ್ತಕವನ್ನು ದೇಜಗೌ 'ನೆನಪು ಕಹಿ ಇಲ್ಲ' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ನೆಹರು ಅವರು ನೈನಿತಾಲ್‌ನ ಜೈಲಿನಲ್ಲಿ ಹೇಗಿದ್ದರು ಎಂಬುದನ್ನು ಉಲ್ಲೇಖಿಸಿದ್ದಾರೆ. ನೆಹರು ಇದ್ದ ಜೈಲಿನಲ್ಲಿ ದೊಡ್ಡದಾದ ಗಾಜಿನ ಕಿಟಕಿ, ಬರೆಯೋದಕ್ಕೆ ದೊಡ್ಡ ಕುರ್ಚಿ, ವಿಶ್ರಾಂತಿಗೆ ಮಂಚ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳಿದ್ದವು ಎಂದು ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ. ನೆಹರು ತಮ್ಮ 'ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕವನ್ನು ಬರೆದದ್ದು ಜೈಲಿನಲ್ಲೇ. ಬ್ರಿಟಿಷ್ ಇತಿಹಾಸಕಾರರು ತಮ್ಮ ಅನುಕೂಲಕ್ಕೋಸ್ಕರ ಬರೆದುಕೊಂಡಿದ್ದ ಇತಿಹಾಸವನ್ನೇ ಇಟ್ಟುಕೊಂಡು ಬರೆದಿದ್ದರಿಂದ ಅವರ ಕೃತಿಯೂ ಬಹುಬೇಗನೆ ಪ್ರಸಿದ್ಧಿ ಪಡೆದು, ಸಿನಿಮಾವೂ ಆಯಿತು ಎಂದು ತಿಳಿಸಿದರು.

ಸಾವರ್ಕರ್ ಕುರಿತು ಪ್ರಸ್ತಾಪ: ಚಿಂತಕ ಅಜಕ್ಕಳ ಗಿರೀಶ ಭಟ್‌ರ ಕೃತಿಯಲ್ಲಿ ಸಾವರ್ಕರ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರ ಬಗ್ಗೆ ಇಂದಿಗೂ ಅನೇಕ ಚರ್ಚೆಗಳು ನಡೆಯುತ್ತಿವೆ. ಸಾವರ್ಕರ್ ಅವರಿಗೆ 52 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗಿತ್ತು. ರಾಜಕೀಯಕ್ಕೆ ಹೋಗುವುದಿಲ್ಲ ಎಂದು ಬ್ರಿಟಿಷರಿಗೆ ಮುಚ್ಚಳಿಕೆ ಪತ್ರ ಬರೆದುಕೊಟ್ಟ ಬಳಿಕ ಜೈಲಿನಿಂದ ಬಿಡುಗಡೆಯಾದರು. ಆದರೆ, ಇದೇ ವಿಚಾರವನ್ನು ಮುಂದಿಟ್ಟುಕೊಂಡು ಸಾವರ್ಕರ್ ಕ್ಷಮೆ ಯಾಚಿಸಿದರು ಎಂದು ಕೆಲವರು ಟೀಕಿಸುತ್ತಾರೆ. ಆದರೆ ಸಾವರ್ಕರ್ ಅನುಭವಿಸಿದ ನರಕಯಾತನೆಯ ಜೈಲು ಶಿಕ್ಷೆಯನ್ನು, ನೆಹರು ಅನುಭವಿಸಿದ ಜೈಲು ಶಿಕ್ಷೆಗೆ ಹೋಲಿಕೆ ಮಾಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಕನ್ನಡ ಪ್ರೊಫೆಸರ್ ಅಜಕ್ಕಳ ಇಂಗ್ಲಿಷ್‌ನಲ್ಲಿ ಎಂಎ ಮಾಡಿ, ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದಾರೆ. ಭಾರತದ ಸಾಮಾಜಿಕ ಚಿಂತನೆಗಳ ಅರಿವಿನಿಂದ ಬೇರೆ ಸಾಹಿತಿಗಳಿಗಿಂತ ಭಿನ್ನವಾಗಿ ಬರೆಯುವ ಮತ್ತು ವಿಶ್ಲೇಷಿಸುವುದನ್ನು ಕರಗತ ಮಾಡಿಕೊಂಡಿದ್ದಾರೆ. ನಾನು ಹಲವು ವರ್ಷಗಳಿಂದ ಅವರ ವಿಶ್ಲೇಷಣೆಯನ್ನು ಓದಿದ್ದೇನೆ. ನಿರಂತರ ಅಧ್ಯಯನವಿಲ್ಲದೆ ಈ ರೀತಿಯ ಪುಸ್ತಕ ಬರೆಯಲು ಸಾಧ್ಯವಿಲ್ಲ. ಪುಸ್ತಕ ಉತ್ತಮವಾಗಿ ಮೂಡಿ ಬಂದಿದ್ದು, ಸಮಗ್ರ ವಿವರಣೆ ನೀಡಿದ್ದಾರೆ. ಕೆಲವು ಟೆಕ್ನಿಕಲ್ ಪದಗಳನ್ನು ಬಳಸಿದ್ದಾರೆ. ಅದು ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಅದನ್ನು ಸರಿಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಾಮಾಜಿಕ ನ್ಯಾಯ ವೇದಿಕೆಯ ಅಧ್ಯಕ್ಷ ಹಿರಿಯ ವಕೀಲ ಓ.ಶಾಮಭಟ್, ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಮುರಳಿ, ಲೇಖಕ ಅಜಕ್ಕಳ ಗಿರೀಶ ಭಟ್, ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು.

ಹಳೆ ಮೈಸೂರು ಭಾಗದ ಕಾಂಗ್ರೆಸ್ 'ಟಿಕೆಟ್' ಅದೃಷ್ಟಶಾಲಿಗಳು

ಕೆಲವರಿಗೆ ಆಯ್ಕೆ, ಮತ್ತೆ ಕೆಲವರು ಪುನರಾಯ್ಕೆ ಕಸರತ್ತು

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿರುವ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಆರನೇ ಬಾರಿ ವಿಧಾನಸೌಧ ಪ್ರವೇಶಿಸುವ ನಿರೀಕ್ಷೆಯಲ್ಲಿದ್ದಾರೆ. ಹಾಗೆಯೇ ಡಾ. ಹೆಚ್.ಸಿ.ಮಹದೇವಪ್ಪ ಸಹ ಟಿ.ನರಸೀಪುರದಿಂದ 6ನೇ ಬಾರಿ ಆಯ್ಕೆಯ ತವಕದಲ್ಲಿದ್ದಾರೆ.

■ ತನ್ವೀರ್ ಸೇಠ್



ನರಸಿಂಹರಾಜ ಕ್ಷೇತ್ರದಲ್ಲಿ ತನ್ವೀರ್ ಸೇಠ್ ಕುಟುಂಬದವರದ್ದೇ ಪಾರುಪತ್ಯ. ತನ್ವೀರ್ ಅವರ ತಾತ ಮಹಮ್ಮದ್ ಸೇಠ್, ತಂದೆ ಅಜೀಜ್ ಸೇಠ್ ಈ ಕ್ಷೇತ್ರದಲ್ಲಿ ಹಲವು ಬಾರಿ ಜಯಶೀಲರಾಗಿದ್ದಾರೆ. ಅಜೀಜ್ ಸೇಠ್ ನಿಧನದ ನಂತರ ನಡೆದ ಉಪ ಚುನಾವಣೆ ಸೇರಿ ಒಟ್ಟು 5 ಚುನಾವಣೆಗಳಲ್ಲಿ ಸತತವಾಗಿ ಗೆದ್ದು, ಸೋಲಿಲ್ಲದ ಸರದಾರನಾಗಿರುವ ತನ್ವೀರ್ ಸೇಠ್ ಅವರಿಗೆ 6ನೇ ಬಾರಿ ಸ್ಪರ್ಧೆಗೆ ಕಾಂಗ್ರೆಸ್ ಅವಕಾಶ ಕಲ್ಪಿಸಿದೆ. ಇತ್ತೀಚೆಗಷ್ಟೇ ಆರೋಗ್ಯ ದೃಷ್ಟಿಯಿಂದ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ತನ್ವೀರ್ ಸೇಠ್ ಎಐಸಿಸಿ ಮತ್ತು ಕೆಪಿಸಿಸಿಗೆ ಪತ್ರ ಬರೆದಿದ್ದರು. ಅದೇ ವೇಳೆ ಪಕ್ಷ ಕೈಗೊಳ್ಳುವ ನಿರ್ಧಾರಕ್ಕೆ ತಾವು ಬದ್ಧ ಎಂದೂ ತಿಳಿಸಿದ್ದರು. ಇದೀಗ ಕಾಂಗ್ರೆಸ್ ತನ್ವೀರ್ ಅವರನ್ನೇ ಎನ್.ಆರ್. ಕ್ಷೇತ್ರದಲ್ಲಿ ಅಭ್ಯರ್ಥಿಯಾಗಿ 6ನೇ ಬಾರಿಗೆ ಕಣಕ್ಕಿಳಿಸಿದೆ.

■ ದರ್ಶನ್ ಧ್ರುವನಾರಾಯಣ್



ಮಾಜಿ ಸಂಸದ ಆರ್.ಧ್ರುವನಾರಾಯಣ್ ಪುತ್ರ ದರ್ಶನ್ ಧ್ರುವನಾರಾಯಣ್ ತಮ್ಮ ತಂದೆಯ ಅಕಾಲಿಕ ನಿಧನದಿಂದ ತಂದೆಯ ಅಭಿಮಾನಿಗಳ ಒತ್ತಾಯದಿಂದಾಗಿ ಅನಿರೀಕ್ಷಿತವಾಗಿ ರಾಜಕೀಯ ಪ್ರವೇಶಿಸಿದ್ದಾರೆ. ತಂದೆ ಎರಡು ಬಾರಿ ಸಂಸದ ಹಾಗೂ ಎರಡು ಬಾರಿ ಶಾಸಕರಾಗಿದ್ದರೂ, ರಾಜಕಾರಣದಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಳ್ಳದೇ ಇದ್ದ ವಕೀಲ ದರ್ಶನ್ ಧ್ರುವನಾರಾಯಣ್, ಪ್ರಥಮ ಬಾರಿಗೆ ನಂಜನಗೂಡು ಕ್ಷೇತ್ರದಿಂದ ಕಣಕ್ಕಿಳಿಯಲು ಕಾಂಗ್ರೆಸ್ ಅವಕಾಶ ಕಲ್ಪಿಸಿದೆ.

■ ಹೆಚ್.ಪಿ.ಮಂಜುನಾಥ್



ಹಿರಿಯ ಕಾಂಗ್ರೆಸ್ ಮುಖಂಡ ಪ್ರೇಮಕುಮಾರ್ ಪುತ್ರ ಹೆಚ್.ಪಿ. ಮಂಜುನಾಥ್ ಹುಣಸೂರು ಕ್ಷೇತ್ರದಲ್ಲಿ ನಾಲ್ಕು ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಒಂದು ಉಪ ಚುನಾವಣೆ ಸೇರಿದಂತೆ ಮೂರು ಬಾರಿ ಗೆಲುವು ಸಾಧಿಸಿದ್ದಾರೆ. ನಾಲ್ಕನೇ ಗೆಲುವಿಗಾಗಿ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಮುಂಬರುವ ಚುನಾವಣೆಯಲ್ಲಿ ಕಣಕ್ಕಿಳಿಯಲಿದ್ದಾರೆ. ಹಾಲಿ ಶಾಸಕರಾಗಿರುವ ಅವರಿಗೆ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರ ಪುತ್ರ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತೀವ್ರ ಪೈಪೋಟಿ ನೀಡಲಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬಂದಿದೆ.

■ ಅನಿಲ್ ಚಿಕ್ಕಮಾದು



ಹೆಚ್.ಡಿ.ಕೋಟೆಯ ಹಾಲಿ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಕಾಂಗ್ರೆಸ್ ಟಿಕೆಟ್ ದೊರೆತಿದೆ. ಇವರು ಮಾಜಿ ಶಾಸಕ ದಿವಂಗತ ಎಸ್.ಚಿಕ್ಕಮಾದು ಪುತ್ರ. ಚಿಕ್ಕಮಾದು ಅವರು ಹುಣಸೂರಿನಲ್ಲಿ ಸುದೀರ್ಘ ಕಾಲ ರಾಜಕಾರಣ ಮಾಡಿಕೊಂಡು ಬಂದಿದ್ದರು. ಆ ಕ್ಷೇತ್ರದಲ್ಲಿ ಉಪ ಚುನಾವಣೆಯೊಂದರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದ ಅವರು, ನಂತರ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಪರಾಭವಗೊಂಡಿದ್ದರು. ಕಾಂಗ್ರೆಸ್‌ನ ಒಳ ಜಗಳದಿಂದ ಬೇಸತ್ತಿದ್ದ ಅವರು, ಜೆಡಿಎಸ್ ಸೇರಿ ವಿಧಾನಪರಿಷತ್ ಸದಸ್ಯರಾದರು. ಹೆಚ್.ಡಿ.ಕೋಟೆ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರವಾದಾಗ ಜೆಡಿಎಸ್‌ನಿಂದ ಈ ಕ್ಷೇತ್ರದಲ್ಲಿ ಸ್ಪರ್ಧಿಸಿ ಶಾಸಕರಾಗಿದ್ದರು. ಅವರ ನಿಧನದ ನಂತರ ಪುತ್ರ ಅನಿಲ್ ಚಿಕ್ಕಮಾದು ತಂದೆ ಪ್ರತಿನಿಧಿಸಿದ್ದ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಪ್ರಥಮ ಚುನಾವಣೆಯಲ್ಲೇ ಗೆಲುವಿನ ನಗೆ ಬೀರಿದ್ದರು. ಇದೀಗ ಎರಡನೇ ಬಾರಿಗೆ ಅವರು ಹೆಚ್.ಡಿ.ಕೋಟೆಯಿಂದ ಸ್ಪರ್ಧೆಗಿಳಿಯಲಿದ್ದಾರೆ.

■ ಡಿ.ರವಿಶಂಕರ್



ಕೆ.ಆರ್.ನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಮೂರನೇ ಬಾರಿಗೆ ಡಿ.ರವಿಶಂಕರ್ ಅವರಿಗೆ ಟಿಕೆಟ್ ನೀಡಿದೆ. ಹಿಂದಿನ ಎರಡು ಚುನಾವಣೆಗಳಲ್ಲಿ ಅವರು ಹಾಲಿ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಅವರಿಗೆ ಪ್ರಬಲ ಪೈಪೋಟಿ ನೀಡಿದ್ದರು. ಕಳೆದ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಪರಾಭವಗೊಂಡಿದ್ದ ಅವರಿಗೆ ಕಾಂಗ್ರೆಸ್ ಮತ್ತೆ ಟಿಕೆಟ್ ನೀಡಿದೆ. ಡಿ.ರವಿಶಂಕರ್ ತಂದೆ ದೊಡ್ಡಸೋಮೇಗೌಡರೂ ಒಮ್ಮೆ ಸಾ.ರಾ.ಮಹೇಶ್ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು.

■ ಕೆ.ವೆಂಕಟೇಶ್



ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಕೆ.ವೆಂಕಟೇಶ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ಜನತಾ ಪರಿವಾರದಲ್ಲಿದ್ದ ಇವರು, ಸಿದ್ದರಾಮಯ್ಯ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದಾಗ ಅವರೊಂದಿಗೆ ತಾವೂ ಕೂಡ ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಒಟ್ಟು 6 ಚುನಾವಣೆಗಳಲ್ಲಿ ಸ್ಪರ್ಧಿಸಿ ಎರಡು ಬಾರಿ ಜನತಾ ಪರಿವಾರ ಮತ್ತು ಎರಡು ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದಾರೆ. ಅದೇ ರೀತಿ ಜನತಾ ಪರಿವಾರ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ತಲಾ ಒಂದು ಬಾರಿ ಸೋಲನನುಭವಿಸಿದ್ದಾರೆ. ಈ ಕ್ಷೇತ್ರದಲ್ಲಿ ಏಳನೇ ಬಾರಿಗೆ ಸ್ಪರ್ಧಿಸಲು ಕಾಂಗ್ರೆಸ್ ಅವಕಾಶ ಕಲ್ಪಿಸಿದೆ.

■ ಡಾ.ಹೆಚ್.ಸಿ.ಮಹದೇವಪ್ಪ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಡಾ. ಹೆಚ್.ಸಿ.ಮಹದೇವಪ್ಪ ಜನತಾ ಪರಿವಾರದಲ್ಲಿದ್ದು, ಸಿದ್ದರಾಮಯ್ಯ ಅವರೊಂದಿಗೆ ಕಾಂಗ್ರೆಸ್



ಸೇರ್ಪಡೆಗೊಂಡವರು. ಟಿ.ನರಸೀಪುರ ಕ್ಷೇತ್ರದಲ್ಲಿ 8 ಬಾರಿ ಸ್ಪರ್ಧಿಸಿ 5 ಬಾರಿ ಗೆಲುವು ಕಂಡಿದ್ದಾರೆ. ಮಾಜಿ ಸಚಿವರಾಗಿರುವ ಇವರು, ಜನತಾ ಪರಿವಾರದಿಂದ 4 ಬಾರಿ ಸ್ಪರ್ಧಿಸಿ 2 ಬಾರಿ ಸೋಲನುಭವಿಸಿದರೆ, ಕಾಂಗ್ರೆಸ್ ಅಭ್ಯರ್ಥಿಯಾಗಿ 4 ಚುನಾವಣೆಗಳಲ್ಲಿ ಸ್ಪರ್ಧಿಸಿ, ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದಾರೆ. ಇವರು ಜನತಾ ಪರಿವಾರದ ಆಡಳಿತದಲ್ಲಿ ಆರೋಗ್ಯ ಸಚಿವರಾಗಿ ನಂತರ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಆಡಳಿತದಲ್ಲಿ ಲೋಕೋಪಯೋಗಿ ಸಚಿವರಾಗಿದ್ದರು. ಈ ಬಾರಿ ಟಿ.ನರಸೀಪುರ ಕ್ಷೇತ್ರದಲ್ಲಿ ತಮ್ಮ ಪುತ್ರ ಸುನೀಲ್ ಬೋಸ್‌ಗೆ ಮತ್ತು ತಮಗೆ ನಂಜನಗೂಡು ಕ್ಷೇತ್ರದಲ್ಲಿ ಟಿಕೆಟ್ ಪಡೆಯಲು ಪ್ರಯತ್ನಿಸಿದ್ದರು. ಧ್ರುವನಾರಾಯಣ್ ನಿಧನದ ಹಿನ್ನೆಲೆಯಲ್ಲಿ ಕಾಂಗ್ರೆಸ್ ವರಿಷ್ಠರು ಮಹದೇವಪ್ಪ ಅವರಿಗೆ ನಂಜನಗೂಡು ಟಿಕೆಟ್ ನೀಡದೆ ಟಿ.ನರಸೀಪುರದಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದಾರೆ.

ತಂದೆಗೆ 'ವರುಣಾ' ತ್ಯಾಗ!

ಧ್ರುವನಾರಾಯಣರ ಸಾರ್ಥಕ ಸೇವೆಗೆ ಕಾಂಗ್ರೆಸ್ ಮನ್ನಣೆ; ಪುತ್ರ ದರ್ಶನ್‌ಗೆ ನಂ.ಗೂಡು ಟಿಕೆಟ್



ರಾಜ್ಯ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ಮೈಸೂರು ನಗರ ಸೇರಿದಂತೆ ಜಿಲ್ಲೆಯ 11 ಕ್ಷೇತ್ರಗಳ ಪೈಕಿ ಮೂರನ್ನು ಹೊರತುಪಡಿಸಿ, ಉಳಿದ 8 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ಡಾ.ಯತೀಂದ್ರ ಹೊರತುಪಡಿಸಿ ಎಲ್ಲಾ ಹಾಲಿ ಶಾಸಕರಿಗೆ ಟಿಕೆಟ್ ನೀಡಲಾಗಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪುತ್ರ ಡಾ. ಯತೀಂದ್ರ ಶಾಸಕರಾಗಿರುವ ಹಾಗೂ ಕ್ಷೇತ್ರ ರಚನೆಯಾದ ಮೊದಲ ಎರಡು ಚುನಾವಣೆಗಳಲ್ಲಿ ಸತತವಾಗಿ ಗೆಲುವು ಸಾಧಿಸಿ ತಾವು ಮುಖ್ಯಮಂತ್ರಿಯಾಗಲು ಕಾರಣವಾಗಿದ್ದ ವರುಣಾದಿಂದ ಸ್ಪರ್ಧಿಸಲಿದ್ದಾರೆ. ಹೀಗಾಗಿ ಅವರ ಪುತ್ರ ಡಾ.ಯತೀಂದ್ರ ಅವರಿಗೆ ಟಿಕೆಟ್ ಕೈತಪ್ಪಿದೆ. ನಂಜನಗೂಡು ಟಿಕೆಟ್‌ಗಾಗಿ ಡಾ. ಹೆಚ್.ಸಿ.ಮಹದೇವಪ್ಪ ಮತ್ತು ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ತೀವ್ರ ಪೈಪೋಟಿ ನಡೆಸಿದ್ದರು. ಧ್ರುವನಾರಾಯಣ್ ನಿಧನದ ಹಿನ್ನೆಲೆಯಲ್ಲಿ ಅವರ ಪುತ್ರ ದರ್ಶನ್ ಧ್ರುವನಾರಾಯಣ್ ಅವರಿಗೆ ಟಿಕೆಟ್ ನೀಡಲಾಗಿದೆ.

ನರಸಿಂಹರಾಜದಲ್ಲಿ ತನ್ವೀರ್ ಸೇಠ್, ಹುಣಸೂರಿನಲ್ಲಿ ಹೆಚ್.ಪಿ.ಮಂಜುನಾಥ್, ಹೆಚ್.ಡಿ.ಕೋಟೆಯಲ್ಲಿ ಅನಿಲ್ ಚಿಕ್ಕಮಾದು ಹಾಲಿ ಶಾಸಕರಾಗಿದ್ದು, ಅವರಿಗೆ ಟಿಕೆಟ್ ಘೋಷಿಸಲಾಗಿದೆ. ಟಿ.ನರಸೀಪುರದಲ್ಲಿ ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಪುತ್ರ ಅನಿಲ್ ಬೋಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದರಾದರೂ, ಈ ಕ್ಷೇತ್ರದಲ್ಲಿ ಡಾ. ಹೆಚ್.ಸಿ.ಮಹದೇವಪ್ಪನವರಿಗೆ ಟಿಕೆಟ್ ನೀಡಲಾಗಿದೆ. ಕೆ.ಆರ್.ನಗರದಲ್ಲಿ ಕಳೆದ ಎರಡು ಚುನಾವಣೆಗಳಲ್ಲಿ ಸಾ.ರಾ.ಮಹೇಶ್ ವಿರುದ್ಧ ಪರಾಭವಗೊಂಡಿದ್ದ ಡಿ.ರವಿಶಂಕರ್ ಅವರಿಗೆ ಟಿಕೆಟ್ ನೀಡಲಾಗಿದ್ದು, ಪಿರಿಯಾಪಟ್ಟಣದಲ್ಲಿ ಮಾಜಿ ಶಾಸಕ ಕೆ.ವೆಂಕಟೇಶ್ ಅವರಿಗೆ ಟಿಕೆಟ್ ನೀಡಲಾಗಿದೆ. ಉಳಿದಂತೆ ಕೃಷ್ಣರಾಜ, ಚಾಮರಾಜ ಮತ್ತು ಚಾಮುಂಡೇಶ್ವರಿ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದ್ದು, ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಿಲ್ಲ. ಚಾಮರಾಜ ಕ್ಷೇತ್ರದಲ್ಲಿ ಮಾಜಿ ಶಾಸಕ ವಾಸು ಮತ್ತು ಸಿದ್ದರಾಮಯ್ಯ ಅವರ ಆಪ್ತ ಕೆ.ಹರೀಶ್‌ಗೌಡ ಪ್ರಬಲ ಆಕಾಂಕ್ಷಿಗಳಾಗಿದ್ದು, ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿಯವರು ವಾಸು ಅವರಿಗೆ ಟಿಕೆಟ್ ನೀಡಬೇಕೆಂದು ಎಐಸಿಸಿ ಮಟ್ಟದಲ್ಲಿ ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ. ಮತ್ತೊಂದೆಡೆ ಹರೀಶ್‌ಗೌಡರಿಗೆ ಟಿಕೆಟ್ ಕೊಡಿಸಲು ಸಿದ್ದರಾಮಯ್ಯ ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿನ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿದೆ. ಕೃಷ್ಣರಾಜ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಆಪ್ತ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್ ಮತ್ತು ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್ ಪುತ್ರ ಎನ್.ಎಂ.ನವೀನ್‌ಕುಮಾರ್ ನಡುವೆ ಪೈಪೋಟಿ ಇದೆ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಟಿಕೆಟ್ ಆಕಾಂಕ್ಷಿಗಳ ದಂಡೇ ಇದೆ. ಈ ಕ್ಷೇತ್ರದಲ್ಲಿ ಹಾಲಿ ಶಾಸಕರಾಗಿರುವ ಜೆಡಿಎಸ್‌ನ ಜಿ.ಟಿ.ದೇವೇಗೌಡರ ವಿರುದ್ಧ ಸೂಕ್ತ ಅಭ್ಯರ್ಥಿ ಆಯ್ಕೆ ಕಾಂಗ್ರೆಸ್‌ಗೆ ಜಟಿಲವಾಗಿದೆ. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಕೂರ್ಗಳ್ಳಿ ಮಹದೇವ್, ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಜಿ.ಟಿ.ದೇವೇಗೌಡರೊಂದಿಗೆ ಮುನಿಸಿಕೊಂಡು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿರುವ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಕೆಂಪನಾಯಕ ಸೇರಿದಂತೆ 16 ಮಂದಿ ಆಕಾಂಕ್ಷಿಗಳು ಈ ಕ್ಷೇತ್ರದ ಟಿಕೆಟ್‌ಗಾಗಿ ಮುಗಿಬಿದ್ದಿದ್ದಾರೆ. ಮತ್ತೊಂದೆಡೆ ತಂದೆಗಾಗಿ ವರುಣಾ ಕ್ಷೇತ್ರವನ್ನು ತೊರೆದಿರುವ ಶಾಸಕ ಡಾ. ಯತೀಂದ್ರ ಅವರನ್ನು ಸಿದ್ದರಾಮಯ್ಯ ಅವರ ತವರು ಕ್ಷೇತ್ರವಾಗಿದ್ದ ಚಾಮುಂಡೇಶ್ವರಿಯಲ್ಲಿ ಕಣಕ್ಕಿಳಿಸುವ ಬಗ್ಗೆಯೂ ಚಿಂತನೆ ನಡೆದಿದೆ ಎಂದು ಹೇಳಲಾಗಿದೆ.

■ ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ ಕ್ಷೇತ್ರದ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ನಿಷ್ಠಾವಂತ ಕಾಂಗ್ರೆಸ್ಸಿಗನಾಗಿದ್ದು, ಯಳಂದೂರಿನವರಾದ ಇವರು, ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದವರು. ಕ್ಷೇತ್ರ ಪುನರ್ವಿಂಗಡಣೆಯಲ್ಲಿ ನಂಜನಗೂಡು ಪರಿಶಿಷ್ಟ ಜಾತಿಗೆ ಮೀಸಲಾಗಿದ್ದರಿಂದ ಮಾಜಿ ಸಚಿವ ಎಂ.ಮಹದೇವ್ ಅವರು ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಮಹದೇವ್ ಸುದೀರ್ಘ ಕಾಲ ಕಾಂಗ್ರೆಸ್‌ನಲ್ಲಿದ್ದಾಗ ಅವರ ಶಿಷ್ಯನಾಗಿದ್ದ ಪುಟ್ಟರಂಗಶೆಟ್ಟಿ ಅವರನ್ನು ಚಾಮರಾಜನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಕಣಕ್ಕಿಳಿಸಿತ್ತು. ಮೊದಲ ಚುನಾವಣೆಯಲ್ಲೇ ತನ್ನ ರಾಜಕೀಯ ಗುರು ಎಂ.ಮಹದೇವ್ ಅವರನ್ನು ಮಣಿಸಿ ವಿಧಾನಸಭೆ ಪ್ರವೇಶಿಸಿದ ಸಿ.ಪುಟ್ಟರಂಗಶೆಟ್ಟಿ ಸತತವಾಗಿ ಮೂರು ಚುನಾವಣೆಗಳಲ್ಲಿ ಗೆಲುವು ಸಾಧಿಸುವ ಮೂಲಕ ಈ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾದ ಇವರು, ಈ ಕ್ಷೇತ್ರದ ಶಾಸಕರಲ್ಲಿ ಪ್ರಥಮವಾಗಿ ಮಂತ್ರಿಯಾದವರೂ ಕೂಡ. ಈಗ ಮತ್ತೆ ಇವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದು, ಸತತ ನಾಲ್ಕನೇ ಗೆಲುವಿಗಾಗಿ ಪುಟ್ಟರಂಗಶೆಟ್ಟಿ ಸ್ಪರ್ಧೆಗಿಳಿಯಲಿದ್ದಾರೆ.

■ ಆರ್.ನರೇಂದ್ರ



ಹನೂರು ಕ್ಷೇತ್ರ ಎಂದರೆ ರಾಜೂಗೌಡ ಮತ್ತು ನಾಗಪ್ಪ ಕುಟುಂಬದ ಹಣಾಹಣಿ ಕ್ಷೇತ್ರ ಎಂದೇ ಹೆಸರುವಾಸಿಯಾಗಿದೆ. ಅದರಲ್ಲೂ ರಾಜೂಗೌಡರ ಕುಟುಂಬ ಹೆಚ್ಚಿನ ಬಾರಿ ಗೆಲುವು ಸಾಧಿಸಿದೆ. ಮಾಜಿ ಸಚಿವ ರಾಜೂಗೌಡರ ಪುತ್ರ ಆರ್.ನರೇಂದ್ರ ಈ ಕ್ಷೇತ್ರದ ಹಾಲಿ ಶಾಸಕ. ಈ ಕ್ಷೇತ್ರದಲ್ಲಿ ನರೇಂದ್ರ ಅವರ ದೊಡ್ಡಪ್ಪ ಜಿ.ವಿ.ಗೌಡ ಮತ್ತು ತಂದೆ ರಾಜೂಗೌಡ ಶಾಸಕರಾಗಿದ್ದರು. ರಾಜೂಗೌಡ ಮತ್ತು ನಾಗಪ್ಪ ನಿಧನರಾದಾಗ ಈ ಎರಡೂ ಕುಟುಂಬಗಳ ವಾರಸುದಾರರು ಪರಸ್ಪರ ಸ್ಪರ್ಧೆಗಿಳಿದಿದ್ದರು. ಆಗ ನಡೆದ ಮೊದಲ ಚುನಾವಣೆಯಲ್ಲಿ ನಾಗಪ್ಪ ಪತ್ನಿ ಪರಿಮಳಾ ನಾಗಪ್ಪ ಅವರು ನರೇಂದ್ರ ವಿರುದ್ಧ ಗೆಲುವು ಸಾಧಿಸಿದ್ದರು. ನಂತರ ನಡೆದ ಮೂರೂ ಚುನಾವಣೆಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಸತತವಾಗಿ ಗೆಲುವು ಸಾಧಿಸುವ ಮೂಲಕ ಆರ್.ನರೇಂದ್ರ ಹ್ಯಾಟ್ರಿಕ್ ಬಾರಿಸಿದ್ದಾರೆ. ಇದೀಗ ನಾಲ್ಕನೇ ಗೆಲುವಿಗಾಗಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವರು ಸ್ಪರ್ಧಿಸಲಿದ್ದಾರೆ.

■ ಹೆಚ್.ಎಂ.ಗಣೇಶ್ ಪ್ರಸಾದ್



ಗುಂಡ್ಲುಪೇಟೆ ಕ್ಷೇತ್ರಕ್ಕೆ ಹೆಚ್.ಎಂ. ಗಣೇಶ್ ಪ್ರಸಾದ್‌ಗೆ ಕಾಂಗ್ರೆಸ್ ಟಿಕೆಟ್ ಘೋಷಿಸಿದೆ. ಇವರು ದಿವಂಗತ ಸಚಿವ ಹೆಚ್.ಎಸ್.ಮಹದೇವ ಪ್ರಸಾದ್ ಅವರ ಪುತ್ರ. ಗುಂಡ್ಲುಪೇಟೆ ಕ್ಷೇತ್ರದಲ್ಲಿ ಮಾಜಿ ವಿಧಾನಸಭಾಧ್ಯಕ್ಷೆ ನಾಗರತ್ನಮ್ಮ ಅವರ ನಿಧನದ ನಂತರ ಸತತವಾಗಿ ಗೆಲುವು ಸಾಧಿಸಿಕೊಂಡು ಬಂದವರು ಮಹದೇವ ಪ್ರಸಾದ್. ಜನತಾ ಪರಿವಾರದಲ್ಲಿದ್ದ ಇವರು ಕಾಂಗ್ರೆಸ್ ಸೇರಿದ ನಂತರವೂ ಅವರ ಗೆಲುವಿನ ಓಟ ಮುಂದುವರೆದಿತ್ತು. ಜನತಾ ಪರಿವಾರ ಹಾಗೂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಆಡಳಿತದಲ್ಲಿ ಅವರು ಸಚಿವರಾಗಿದ್ದರು. ಅವರ ಅಕಾಲಿಕ ನಿಧನದ ನಂತರ ನಡೆದ ಉಪ ಚುನಾವಣೆಯಲ್ಲಿ ಮಹದೇವ ಪ್ರಸಾದ್ ಪತ್ನಿ ಡಾ. ಗೀತಾ ಮಹದೇವ ಪ್ರಸಾದ್ ಸ್ಪರ್ಧಿಸಿ ಗೆಲುವು ಸಾಧಿಸಿದ್ದಲ್ಲದೇ, ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದರು. ಕಳೆದ ಚುನಾವಣೆಯಲ್ಲಿ ಗೀತಾ ಮಹದೇವ ಪ್ರಸಾದ್ ಬಿಜೆಪಿಯ ನಿರಂಜನ ಕುಮಾರ್ ಎದುರು ಪರಾಭವಗೊಂಡಿದ್ದು, ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಇವರ ಪುತ್ರ ಗಣೇಶ್‌ಪ್ರಸಾದ್ ಅವರಿಗೆ ಕಾಂಗ್ರೆಸ್ ಅವಕಾಶ ಕಲ್ಪಿಸಿದೆ. ತಂದೆ ಹಾಗೂ ತಾಯಿಯೊಂದಿಗೆ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಗಣೇಶ್ ಪ್ರಸಾದ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಚೊಚ್ಚಲ ಚುನಾವಣೆ ಎದುರಿಸಲಿದ್ದಾರೆ.

■ ಎ.ಎಸ್.ಪೊನ್ನಣ್ಣ



ವಿರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ. ಇವರು ವಿಧಾನಪರಿಷತ್ ಮಾಜಿ ಸದಸ್ಯರೂ ಆದ ರಾಜಕೀಯ ಮುತ್ಸದ್ದಿ ದಿವಂಗತ ಎ.ಕೆ.ಸುಬ್ಬಯ್ಯ ಅವರ ಪುತ್ರ. ಹೈಕೋರ್ಟ್ ವಕೀಲರಾಗಿರುವ ಇವರು, ರಾಜ್ಯ ಸರ್ಕಾರದ ಅಡ್ವೋಕೇಟ್ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು. ಎ.ಕೆ.ಸುಬ್ಬಯ್ಯ ಅವರ ನಿಧನದ ನಂತರ ವಿರಾಜಪೇಟೆ ಕ್ಷೇತ್ರದಲ್ಲಿ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡ ಇವರಿಗೆ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಸ್ಥಾನವನ್ನು ನೀಡಲಾಗಿತ್ತು. ತಮ್ಮ ತಂದೆ ಹಾಗೂ ತಾಯಿ ಹೆಸರಿನಲ್ಲಿ ಟ್ರಸ್ಟ್‌ವೊಂದನ್ನು ಸ್ಥಾಪಿಸಿರುವ ಇವರ ಕುಟುಂಬ ವಿರಾಜಪೇಟೆ ಕ್ಷೇತ್ರಾದ್ಯಂತ ಹಲವಾರು ಸಮಾಜ ಸೇವೆಗಳ ಮೂಲಕ ಬಡವರಿಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದೆ. ಕೆಲವು ಗ್ರಾಮಗಳಲ್ಲಿ ಟ್ರಸ್ಟ್ ವತಿಯಿಂದಲೇ ಕೆಲ ಮೂಲಭೂತ ಸೌಕರ್ಯಗಳನ್ನೂ ಕೂಡ ಕಲ್ಪಿಸಿದೆ. ಸತತವಾಗಿ ವಿರಾಜಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲನನುಭವಿಸುತ್ತಾ ಬಂದಿದ್ದು, ಇದೀಗ ಎ.ಕೆ.ಸುಬ್ಬಯ್ಯ ಅವರ ಪುತ್ರ ಎ.ಎಸ್.ಪೊನ್ನಣ್ಣ ಅವರನ್ನು ಅಭ್ಯರ್ಥಿಯಾಗಿ ಕಾಂಗ್ರೆಸ್ ಕಣಕ್ಕಿಳಿಸಿದೆ.

■ ಎನ್.ಚಲುವರಾಯಸ್ವಾಮಿ



ಎನ್.ಚಲುವರಾಯಸ್ವಾಮಿ ನಾಗಮಂಗಲ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ. ಇವರಿಗೆ 2ನೇ ಬಾರಿಗೆ ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಟಿಕೆಟ್ ನೀಡಿದೆ. ಮೂಲತಃ ಜನತಾ ಪರಿವಾರದವರಾದ ಚಲುವರಾಯಸ್ವಾಮಿ 3 ಬಾರಿ ಶಾಸಕರಾಗಿ ಹಾಗೂ ಒಮ್ಮೆ ಮಂಡ್ಯ ಸಂಸದರಾಗಿ ಜೆಡಿಎಸ್‌ನಿಂದ ಆಯ್ಕೆಯಾಗಿದ್ದರು. ಹೆಚ್.ಡಿ.ಕುಮಾರಸ್ವಾಮಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಲು ಕಾರಣಕರ್ತರಾಗಿದ್ದವರಲ್ಲಿ ಇವರೂ ಒಬ್ಬರು. ಆನಂತರ ಕುಮಾರಸ್ವಾಮಿ ಅವರೊಂದಿಗಿನ ಮುನಿಸಿನ ಕಾರಣದಿಂದಾಗಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದ ಇವರಿಗೆ ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಮತ್ತೊಮ್ಮೆ ಅವಕಾಶ ಕಲ್ಪಿಸಿದೆ.

■ ರಮೇಶ್ ಬಂಡಿಸಿದ್ದೇಗೌಡ



ರಾಜಕೀಯ ಕುಟುಂಬದವರಾದ ರಮೇಶ್ ಬಂಡಿಸಿದ್ದೇಗೌಡ ಶ್ರೀರಂಗಪಟ್ಟಣದ ಕಾಂಗ್ರೆಸ್ ಅಭ್ಯರ್ಥಿ. ಇವರ ತಂದೆ ಬಂಡಿಸಿದ್ದೇಗೌಡ ಮತ್ತು ತಾಯಿ ವಿಜಯಲಕ್ಷ್ಮೀ ಬಂಡಿಸಿದ್ದೇಗೌಡ ಅವರು ಶ್ರೀರಂಗಪಟ್ಟಣ ಕ್ಷೇತ್ರದ ಜನತಾ ಪರಿವಾರದ ಶಾಸಕರಾಗಿದ್ದವರು. ಅವರದೇ ಹಾದಿಯಲ್ಲಿ ರಾಜಕಾರಣ ಆರಂಭಿಸಿದ ರಮೇಶ್ ಬಂಡಿಸಿದ್ದೇಗೌಡ, 2008 ಮತ್ತು 2013ರ ಚುನಾವಣೆಗಳಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸತತವಾಗಿ ಗೆಲುವು ಸಾಧಿಸಿದ್ದರು. ಎನ್.ಚಲುವರಾಯಸ್ವಾಮಿ ಕಾಂಗ್ರೆಸ್ ಸೇರ್ಪಡೆಗೊಂಡಾಗ ಅವರೊಂದಿಗೆ ಇವರೂ ಕೂಡ ಕಾಂಗ್ರೆಸ್ ಸೇರಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ರವೀಂದ್ರ ಶ್ರೀಕಂಠಯ್ಯ ವಿರುದ್ಧ ಪರಾಭವಗೊಂಡಿದ್ದರು. ಇದೀಗ ಇವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗಿದೆ.

■ ಪಿ.ಎಂ.ನರೇಂದ್ರಸ್ವಾಮಿ



ಮಳವಳ್ಳಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ. ಕಾಂಗ್ರೆಸ್ ಕಾರ್ಯಕರ್ತರಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದ ತಮಗೆ ಟಿಕೆಟ್ ನೀಡದಿದ್ದಾಗ ತಮ್ಮದೇ ಆದ ವರ್ಚಸ್ಸಿನಿಂದ ಪಕ್ಷೇತರರಾಗಿ ಈ ಕ್ಷೇತ್ರದಲ್ಲಿ ಪ್ರಥಮ ಚುನಾವಣೆಯಲ್ಲೇ ಗೆಲುವು ಸಾಧಿಸಿದ್ದರು. ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡಿದ್ದ ಇವರು, ಬಿಎಸ್‌ವೈ ಸಂಪುಟದಲ್ಲಿ ಸಚಿವರೂ ಆಗಿದ್ದರು. 2013ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ನರೇಂದ್ರಸ್ವಾಮಿ, 2018ರಲ್ಲಿ ಪರಾಭವಗೊಂಡಿದ್ದರು. ಇದೀಗ ಕಾಂಗ್ರೆಸ್ ಮಳವಳ್ಳಿ ಕ್ಷೇತ್ರದಲ್ಲಿ ಮತ್ತೆ ಅವರನ್ನು ಕಣಕ್ಕಿಳಿಸಲಿದೆ.

■ ಶ್ರೇಯಸ್ ಎಂ.ಪಟೇಲ್



ಹೊಳೆನರಸೀಪುರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಎಂ.ಪಟೇಲ್. ಇವರು ಮಾಜಿ ಸಚಿವ ದಿವಂಗತ ಜಿ.ಪುಟ್ಟಸ್ವಾಮಿಗೌಡರ ಮೊಮ್ಮಗ. ಪುಟ್ಟಸ್ವಾಮಿಗೌಡರು ಹೊಳೆನರಸೀಪುರ ಕ್ಷೇತ್ರದಲ್ಲಿ ಹೆಚ್.ಡಿ.ದೇವೇಗೌಡರ ವಿರುದ್ಧ ಜಯ ಗಳಿಸಿ ಸಚಿವರಾಗಿದ್ದವರು. ಶ್ರೇಯಸ್ ಎಂ.ಪಟೇಲ್ ತಾಯಿ ಅನುಪಮ ಅವರೂ ಕೂಡ ಹೊಳೆನರಸೀಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಇದೀಗ ರಾಜಕೀಯ ಕುಟುಂಬದವರಾದ ಶ್ರೇಯಸ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಹೊಳೆನರಸೀಪುರ ಕ್ಷೇತ್ರದಲ್ಲಿ ಚೊಚ್ಚಲ ಚುನಾವಣೆ ಎದುರಿಸಲಿದ್ದಾರೆ.

ವಾರಭವಿಷ್ಯ



26.3.2023 ರಿಂದ 1.4.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೀನ, ಚಂದ್ರ-ವೃಷಭ, ಮಿಥುನ, ಕಟಕ, ಕುಜ-ಮಿಥುನ, ಬುಧ-ಮೀನ, ಮೇಷ, ಗುರು-ಮೀನ, ಶುಕ್ರ-ಮೇಷ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಚಂದ್ರ ಗೋಚರ ಶುಭವಿದೆ. ಪ್ರತಿಕೂಲ ಪರಿಸ್ಥಿತಿಗಳನ್ನು ಅನುಕೂಲಕರವನ್ನಾಗಿ ಪರಿವರ್ತಿಸಿಕೊಳ್ಳುವಿರಿ. ಮಹತ್ವದ ಕೆಲಸಗಳಿಗೆ ಮಿತ್ರ ವೃಂದದವರ ಬೆಂಬಲ ದೊರೆಯುವುದು. ವ್ಯಯದಲ್ಲಿ ಗುರು ಇರುವ ಕಾರಣ ಹೊಸ ಹೂಡಿಕೆಗಳನ್ನು ಸದ್ಯಕ್ಕೆ ಮಾಡದಿರುವುದೇ ಲೇಸು. ನೆರೆಹೊರೆಯವರ ಆಕ್ಷೇಪಕ್ಕೆ ಗುರಿಯಾಗುವಿರಿ. ಕೋಪ-ತಾಪಗಳು ಹದ್ದುಬಸ್ತಿನಲ್ಲಿ ಇರಲಿ.
ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-1

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸೋಲು ಗೆಲುವಿನ ಮೊದಲ ಸೋಪಾನವಾಗಿರುತ್ತದೆ. ಸಾಧನಾ ಮಾರ್ಗದಲ್ಲಿ ಅಪಯಶಸ್ಸು ಇದ್ದದ್ದೇ. ಆದರೆ ಮನಸ್ಸು ಕೆಡಿಸಿಕೊಳ್ಳದೆ ಪ್ರಯತ್ನ ವೇಗವನ್ನು ಹೆಚ್ಚಿಸಿರಿ, ಯಶಸ್ಸು ದೊರಕೀತು. ನಿಮ್ಮ ಹಿತ ಚಿಂತಕರಿಂದ ಒಳ್ಳೆಯದನ್ನು ನಿರೀಕ್ಷಿಸಬಹುದು. ಮಹತ್ವದ ನಿರ್ಣಯಗಳನ್ನು ಸ್ವಲ್ಪ ಸಮಯ ಮುಂದೂಡಿ. ಮನೆಯ ಒಳಗೂ-ಹೊರಗೂ ನಿಮ್ಮ ಮಾತಿನಿಂದ ತಪ್ಪು ತಿಳುವಳಿಕೆ ಆಗದಂತೆ ಕಾಳಜಿ ವಹಿಸಿರಿ.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-4

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಿರೋಧಿಗಳನ್ನು ಸೋಲಿಸಲು ಸದ್ಯದ ಗ್ರಹಮಾನ ಅನುಕೂಲಕರವಾಗಿದೆ. ಇದರ ಲಾಭವನ್ನು ಸಂಪೂರ್ಣವಾಗಿ ಪಡೆಯುವಿರಿ. ನೌಕರಿ-ವ್ಯವಸಾಯ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಆಗುವುದು. ಕೃಷಿಕರಿಗೆ ಉತ್ತಮ ಫಸಲು ಹಾಗೂ ಧನಾದಾಯ ಉಂಟಾಗುವುದು. ವಾರದ ಉತ್ತರಾರ್ಧದಲ್ಲಿ ಭಾವನಾತ್ಮಕ ನಿರ್ಣಯಗಳು ನಿಮ್ಮ ಪರವಾಗಿರುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ಮುಟ್ಟಲಿದೆ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-8.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ನಿಮ್ಮ ವೃತ್ತಿ ಜೀವನದಲ್ಲಿ ಕಾಣ ಬರುವ ಅನಿಶ್ಚಿತತೆಗಳು ದೂರವಾಗುವುವು. ಹೊಸ ವ್ಯಾಪಾರ ವ್ಯವಹಾರಗಳನ್ನು ಆರಂಭಿಸಲು ಗ್ರಹಾನುಕೂಲವಿದೆ. ಪ್ರತ್ಯಕ್ಷವನ್ನು ಪ್ರಮಾಣಿಸಿ ನೋಡು ಎಂಬ ನಾಣ್ಣುಡಿಯಂತೆ ಮುಂದಿನ ಹೆಜ್ಜೆಯನ್ನು ಇಡಿ. ಹಿರಿಯ ವ್ಯಕ್ತಿಗಳಿಗೆ ಆರೋಗ್ಯದಲ್ಲಿ ಸುಧಾರಣೆ ಆಗುವುದು. ವಾರಾಂತ್ಯಕ್ಕೆ ಹಿರಿಯರ ಭೇಟಿ ಹಾಗೂ ಮಾರ್ಗದರ್ಶನಗಳು ದೊರಕುವುದು.
ಮನೆದೇವರ ದರ್ಶನ ಮಾಡಿ. ಶುಭ ಸಂಖ್ಯೆ-3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ವಿಹಾರ ಯಾತ್ರೆಗಳು ಸಂಭವಿಸಿ ಖರ್ಚುಗಳು ಎದುರಾಗುವುದು. ಸಜ್ಜನರ ಹಾಗೂ ಸ್ನೇಹಿತರ ಸಹಕಾರಗಳು ಒದಗುತ್ತವೆ. ಶುಭ ಚಂದ್ರನಿಂದ ವಾರ ಮಧ್ಯೆ ಧನಲಾಭ, ನೂತನ ವಾಹನ, ಮಾನ-ಸನ್ಮಾನಗಳು ದೊರೆಯಲಿದೆ. ಸಮಯೋಚಿತ ವಾಗಿ ಮಾತನಾಡದೆ ನಷ್ಟವನ್ನು ಅನುಭವಿಸುವಿರಿ. ಮನೆಯಲ್ಲಿ ಐಕ್ಯಮತ್ಯದ ಕೊರತೆಯಿಂದ ಮಹತ್ತರ ಕೆಲಸಗಳು ಕುಂಟುತ್ತಾ ಸಾಗುತ್ತದೆ. ವಾತ-ಕಫ ಜನಿತ ಕಾಯಿಲೆ ಕಾಡಬಹುದು.
ಶ್ರೀ ಶ್ರೀನಿವಾಸನಿಗೆ ತುಳಸಿ ಅರ್ಪಣೆ. ಶುಭ ಸಂಖ್ಯೆ-6.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ವಾರದಲ್ಲಿ ನಿಮ್ಮ ವಿರೋಧಿಗಳ ಕಾರ್ಯಗಳಲ್ಲಿ ಏರಿಕೆ ಕಂಡರೂ ಅವರಿಗೆ ಯಶಸ್ಸು ದೊರೆಯುವುದಿಲ್ಲ. ನಿಮಗೆ ಎದುರಾಗುವ ಅಡಚಣೆಗಳನ್ನು ನೀವೇ ಪರಿಹರಿಸಬಲ್ಲವರಾಗಿದ್ದೀರಿ. ಆರ್ಥಿಕ ಪರಿಸ್ಥಿತಿಯಲ್ಲಿ ಏರಿಳಿತಗಳು ಇದ್ದೇ ಇರುತ್ತವೆ. ಷೇರು ಬಂಡವಾಳ ಹೂಡಿಕೆಗಳನ್ನು ಎಚ್ಚರಿಕೆಯಿಂದ ಮಾಡಬೇಕು. ಅನ್ಯಥಾ ನಷ್ಟವನ್ನು ಅನುಭವಿಸಬೇಕಾದೀತು. ಸಂಚಾರಿ ನಿಯಮಗಳನ್ನು ಪಾಲಿಸಿ, ದಂಡ ಕಟ್ಟುವುದನ್ನು ತಪ್ಪಿಸಿಕೊಳ್ಳಿ.
ಶ್ರೀ ಶಿರಡಿಬಾಬಾ ದರ್ಶನ. ಶುಭ ಸಂಖ್ಯೆ-8.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಸಪ್ತಾಹದ ಆದಿಗೆ ಸಾರ್ಥಕ ಕಾರ್ಯಗಳಿಂದ ಬದುಕು ನೆಮ್ಮದಿ ಅನಿಸುವುದು. ಮನೆ, ನಿವೇಶನ ಖರೀದಿಗೆ ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಿದರೆ ಸಫಲರಾಗುವಿರಿ. ಉನ್ನತ ವ್ಯಾಸಂಗಕ್ಕೆ ವಿದೇಶ ಪ್ರಯಾಣ ಯೋಗ ಹಲವರಿಗೆ ಉಂಟು. ಶುಭ ಗುರು ಪರಿಣಾಮ ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ಸಾಮಾಜಿಕವಾಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ಎದುರಾಳಿಗಳನ್ನು ಸಮರ್ಥವಾಗಿ ಎದುರಿಸುವಿರಿ.
ಶ್ರೀ ಗುರುಗ್ರಹ ಸ್ತೋತ್ರ ನಿತ್ಯ ಪಠಿಸಿ. ಶುಭ ಸಂಖ್ಯೆ-7.

ಮಕರ (ಬೋ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)
ಗುರು-ಶನಿಗ್ರಹಗಳ ಸಂಚಾರ ಪೂರಕವಾಗಿಲ್ಲ. ದೈವ ಸಹಾಯವಿಲ್ಲದೆ ಜಯ ದೊರಕದು, ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ಸ್ವಲ್ಪ ಅಧಿಕವೆನಿಸುವಷ್ಟು ಆರ್ಥಿಕ ಕಾವನ್ನು ಅನುಭವಿಸಬೇಕಾಗುತ್ತದೆ. ನಿಮ್ಮ ವಿರೋಧಿಗಳಿಗೆ ಮೇಲೇರಲು ಬಿಡಬೇಡಿ. ಮನೆಯಲ್ಲೂ ಆಫೀಸಿನಲ್ಲೂ ನಿಮ್ಮ ಮಾತಿನಿಂದ ತಪ್ಪು ತಿಳುವಳಿಕೆ ಆಗದಂತೆ ಎಚ್ಚರ ವಹಿಸಿ. 'ಮಾತೇ ಮುತ್ತು ಮಾತೇ ಮೃತ್ಯು' ಎಂಬ ಗಾದೆ ಮಾತಿದೆ.
ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಮನುಷ್ಯನ ಆಗು-ಹೋಗುಗಳಿಗೆಲ್ಲ ಗ್ರಹಗತಿಗಳು ಕಾರಣ. ಹಲವು ಮೂಲಗಳಿಂದ ಹಣ ಸಂಗ್ರಹವಾಗುವುದು. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಲಲನಾಮಣಿಯರು ಪ್ರಸಾಧನಗಳಿಗೆ ಹೇರಳ ಹಣ ವ್ಯಯ ಮಾಡುವರು. ಅಷ್ಟಮ ಗುರು ಕಷ್ಟ ಪರಿಸ್ಥಿತಿ ತಂದೊಡ್ಡುವನು. ಸಜ್ಜನರ ತಿರಸ್ಕಾರಕ್ಕೆ ಗುರಿಯಾಗುವಿರಿ. ಗುರುಜನರ ಆಗ್ರಹಕ್ಕೆ ಗುರಿಯಾಗುವಿರಿ. ಸರ್ಕಾರಿ ನೌಕರರು ಕಚೇರಿಯ ಸೌಹಾರ್ದ ವಾತಾವರಣ ಕೆಡದಂತೆ ಎಚ್ಚರ ವಹಿಸಿ.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-2.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಪ್ರಗತಿಪಥದೆಡೆಗೆ ಸಾಗಲು ಗುರುಜನರ ಸಲಹೆ ಸಹಾಯಗಳು ದೊರೆಯಲಿದೆ. ಪ್ರತಿಷ್ಠಿತ ವ್ಯಕ್ತಿಯೊಬ್ಬರ ಮಾರ್ಗದರ್ಶನ ಲಾಭದಾಯಕವಾದೀತು. ವಿವಾಹಾಕಾಂಕ್ಷಿಗಳಿಗೆ ಮನ ಮೆಚ್ಚಿನ ವಧು-ವರ ದೊರೆಯುವುದು. ಕೌಟುಂಬಿಕ ವಾತಾವರಣ ಆನಂದ ದಾಯಕವೂ, ಉತ್ಸಾಹಕರವಾಗಿಯೂ ಇರುತ್ತದೆ. ಗುರುಗ್ರಹ ಶುಭವಿದ್ದು ಆತ್ಮ ವಿಶ್ವಾಸದಿಂದ ಕೆಲಸ ಕಾರ್ಯಗಳನ್ನು ಸಾಧಿಸಬಹುದು.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-5.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಸಮಯ ಚೆನ್ನಾಗಿದೆ, ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ, ಮುಂದಾಗಬೇಕಾಗಿರುವ ಸಾಧನೆಯತ್ತ ನೋಡಿ. ವಾರದಾರಂಭಕ್ಕೆ ಆತ್ಮೀಯ ಮಿತ್ರರ ಸಮಾಗಮವಾಗಲಿದೆ. 'ಪಾರ್ಟಿ'ಗಳು ಲಕ್ಷ್ಮಣರೇಖೆ ದಾಟದಿರಲಿ. ಬರಬೇಕಾದ ಹಣ ಕೈ ಸೇರುವುದು. ನಿಮ್ಮ ನೂತನ ಆವಿಷ್ಕಾರಗಳು ಗೌರವ ತಂದು ಕೊಡುವುದು. ವಿವಾಹಯೋಗ್ಯರು 'ಮಧುಚಂದ್ರ'ಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳಬಹುದು.
ಶ್ರೀರಾಮ ನಾಮ ಜಪ. ಶುಭ ಸಂಖ್ಯೆ-5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಇದು ಮಿಶ್ರ ಫಲದ ವಾರ. ಜೀವನ ಕೆಲವೊಮ್ಮೆ ಕಟುವೂ, ಕೆಲವೊಮ್ಮೆ ಮಧುರವೂ ಅನ್ನಿಸುವುದು. ನಿಮ್ಮ ವೈಯಕ್ತಿಕ ವಿಕಾಸ ಮೇಲೆ ಕೆಲವೊಂದು ಪ್ರತಿಕೂಲ ಪರಿಣಾಮಗಳು ಘಟಿಸಬಹುದು. ದುರ್ಜನರ ಸಹವಾಸದಿಂದ ನಿಮ್ಮ ಮಾನ ಮರ್ಯಾದೆಗಳಿಗೆ ಧಕ್ಕೆಯಾದೀತು. ವ್ಯವಸಾಯ ಕ್ಷೇತ್ರದಲ್ಲಿ ಅಲ್ಪ ಪ್ರಗತಿಯನ್ನು ಕಾಣಬಹುದು. ವಾರಾಂತ್ಯಕ್ಕೆ ಅಸಹಾಯಕರಿಗೆ ಸಹಾಯ ಹಾಗೂ ಪುಣ್ಯ ಕ್ಷೇತ್ರ ಸಂದರ್ಶನ.
ಶ್ರೀ ರಾಘವೇಂದ್ರ ಉಪಾಸನೆ. ಶುಭ ಸಂಖ್ಯೆ-4.

ಹೆಡಿಯಾಲದಲ್ಲಿ ಅಂಬೇಡ್ಕರ್, ವಿಶ್ವಕರ್ಮ ಭವನ ಲೋಕಾರ್ಪಣೆ

ಮಲ್ಕುಂಡಿ, ಮಾ.25– ಶಾಸಕ ಬಿ.ಹರ್ಷವರ್ಧನ್ 750 ಕೋಟಿಗೂ ಹೆಚ್ಚು ಅನುದಾನ ತಂದು ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಿದ್ದಾರೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು.

ಇಲ್ಲಿಗೆ ಸಮೀಪದ ಹೆಡಿಯಾಲದಲ್ಲಿ 62 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಮತ್ತು 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ವಿಶ್ವಕರ್ಮ ಭವನಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಹೋರಾಟದ ಫಲವಾಗಿ ಶೋಷಿತ ಸಮುದಾಯಗಳು ಅಧಿಕಾರ ಅನುಭವಿಸುವಂತಾಗಿದೆ. ಶೋಷಿತ ಸಮುದಾಯಗಳು ಯಾವ ರೀತಿ ಬದುಕಬೇಕೆಂಬುದನ್ನು ಅಂಬೇಡ್ಕರ್ ತೋರಿಸಿಕೊಟ್ಟಿದ್ದಾರೆ. ಅವರ ಹೆಸರಿನಲ್ಲಿ ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಿರುವುದು ನನಗೆ ಹೆಮ್ಮೆ ತಂದಿದೆ. ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡಿ ಅವರ ಕಾಲ ಮೇಲೆ ಅವರೇ ನಿಲ್ಲುತ್ತಾರೆ ಎಂದರು.



ನಾನೇ ಸ್ವತಃ ಆಸಕ್ತಿವಹಿಸಿ ನಂಜನಗೂಡಿನಲ್ಲಿ ಸುಸಜ್ಜಿತ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಿದ್ದೇನೆ. ಅಲ್ಲದೆ ಅಂಬೇಡ್ಕರ್ ಪ್ರತಿಮೆಯನ್ನು ನಿರ್ಮಿಸಿದ್ದೇನೆ. ಈಗ ಹೆಡಿಯಾಲದಲ್ಲಿ ನನ್ನ ಸಂಸದರ ನಿಧಿಯಿಂದ 62 ಲಕ್ಷ ರೂ. ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಲಾಗಿದೆ. ಮುಂದಿನ 1 ತಿಂಗಳ ಅವಧಿಯಲ್ಲಿ ಈ ಭವನಕ್ಕೆ ಅಗತ್ಯವಾಗಿರುವ ಊಟದ ಹಾಲ್, ಅಡುಗೆ ಮನೆ ಮತ್ತು ಕಾಂಪೌಂಡ್ ನಿರ್ಮಿಸಿ ಅಗತ್ಯ ಸಲಕರಣೆ ಒದಗಿಸಲಾಗುವುದು. ಗ್ರಾಮದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಿಸಲಾಗುವುದು ಎಂದ ಅವರು, ಈ ಭಾಗದಲ್ಲಿ ಚಾಲಹಳ್ಳಿ, ಇಂದಿರಾ ನಗರ, ಹಂಚೀಪುರ ಸೇರಿದಂತೆ ಅನೇಕ ಗ್ರಾಮಗಳಿಗೆ ಸಮುದಾಯ ಭವನ ನಿರ್ಮಿಸಲು ಅನುದಾನ ನೀಡಲಾಗಿದೆ ಎಂದರು.

ಈ ವಿಧಾನಸಭಾ ಚುನಾವಣೆ ನನ್ನ ಕೊನೆ ಚುನಾವಣೆಯಾಗಿರುವ ಕಾರಣ ಆರೋಗ್ಯವನ್ನೂ ಲೆಕ್ಕಿಸದೆ ಹೋರಾಟ ನಡೆಸುತ್ತಿದ್ದೇನೆ. ನೀವು ಹರ್ಷವರ್ಧನ್‌ರನ್ನು ಮತ್ತೊಮ್ಮೆ ಆಶೀರ್ವದಿಸಿ ಎಂದರು.

ಈ ವೇಳೆ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಗ್ರಾಪಂ ಅಧ್ಯಕ್ಷೆ ಮಂಜುಳಾ, ಹುರ ಗ್ರಾಪಂ ಅಧ್ಯಕ್ಷ ಚಂದ್ರು, ಉಪಾಧ್ಯಕ್ಷೆ ಅನುಪಮ, ತಾಪಂ ಮಾಜಿ ಸದಸ್ಯ ಬಿ.ಎಂ.ರಾಮು, ಸದಸ್ಯರಾದ ರೆಹಮತ್ ಉಲ್ಲಾ, ಅಸ್ರಫ್ ಅಲಿ, ಮುಖಂಡರಾದ ಮಹದೇವ ಸ್ವಾಮಿ, ಪ್ರಭುಸ್ವಾಮಿ, ನಾಗರಾಜೇಗೌಡ, ಶಿವರುದ್ರ, ಪುಟ್ಟಸ್ವಾಮಿ, ನಿರ್ಮಿತಿ ಕೇಂದ್ರದ ಯೋಜನಾಧಿಕಾರಿ ಸತೀಶ್, ಇಂಜಿನಿಯರ್ ಯಶವಂತ್, ಗುತ್ತಿಗೆದಾರ ನಾಗರಾಜು, ಚೆಲುವರಾಜ್ ಸೇರಿದಂತೆ ಇತರರಿದ್ದರು.

> ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆಯಾಗಿದ್ದು, ನಾನು ಮತ್ತೊಮ್ಮೆ ಬಿಜೆಪಿ ಬಾವುಟ ಹಾರಿಸುವುದು ನಿಶ್ಚಿತ. ಕ್ಷೇತ್ರದಲ್ಲಿ ಅನುಕಂಪ ಕೆಲಸ ಮಾಡುವುದಿಲ್ಲ. ಕಾಂಗ್ರೆಸ್‌ನ 25 ವರ್ಷದ ಅನುಭವ ಮತ್ತು ಕಳೆದ 5 ವರ್ಷದಲ್ಲಿ ನಾನು ಮಾಡಿರುವ ಅಭಿವೃದ್ಧಿಯಷ್ಟೇ ಪೈಪೋಟಿಗೆ ಬರಲಿದೆ. ಹೆಡಿಯಾಲ ಮುಖ್ಯರಸ್ತೆ ಅಭಿವೃದ್ಧಿ, ಬಸವ ಭವನ ನಿರ್ಮಿಸಿದ್ದೇನೆ. ಅಲ್ಲದೇ ಹೆಡಿಯಾಲ ಭಾಗದ ಕೆರೆ ತುಂಬಿಸುವ ಯೋಜನೆಯನ್ನು ಕಾಂಗ್ರೆಸ್ ಸರ್ಕಾರವಿದ್ದರೂ, ಪೂರ್ಣಗೊಳಿಸಲಿಲ್ಲ. ಆದರೆ ನಾನು 30 ಲಕ್ಷ ತಂದು ಪೂರ್ಣಗೊಳಿಸಲು ಮುಂದಾಗಿದ್ದೇನೆ. ಉಪ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ಮಾಡಿರುವ ಗುದ್ದಲಿ ಪೂಜೆ ಪೂಜೆಗಷ್ಟೇ ಸೀಮಿತವಾಯಿತು. ಉಪ ಚುನಾವಣೆ ಗೆದ್ದ ನಂತರವೂ ಒಂದೂವರೆ ವರ್ಷದಲ್ಲಿ ಒಂದು ಇಟ್ಟಿಗೆಯನ್ನು ಜೋಡಿಸಿಲ್ಲ. ಆದರೆ ನಾನು ಮಾಡಿರುವ ಕೆಲಸಗಳು ಕಣ್ಣಿಗೆ ಕಾಣಿಸುತ್ತಿವೆ. ನನ್ನ ಅಭಿವೃದ್ಧಿ ಕೆಲಸಗಳಿಂದ ಮತ್ತೊಮ್ಮೆ ಗೆಲುವು ಸಾಧಿಸಿ ಬಿಜೆಪಿ ಬಾವುಟ ಹಾರಿಸುತ್ತೇನೆ.
> -ಶಾಸಕ ಬಿ.ಹರ್ಷವರ್ಧನ್

ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಗ್ರಾಪಂ ಮಾಜಿ ಅಧ್ಯಕ್ಷೆ

ಸುಧಾಮಣಿ ಮನೆಗೆ ಎಂಎಲ್‌ಸಿ ವಿಶ್ವನಾಥ್ ಭೇಟಿ, ಸಾಂತ್ವನ



ಹುಣಸೂರು, ಮಾ.25– ಕಳೆದ ವಾರ ಆತ್ಮಹತ್ಯೆ ಮಾಡಿಕೊಂಡ ಹಾರಂಗಿ ನೀರಾವರಿ ಸಲಹಾ ಸಮಿತಿ ಹಾಗೂ ಹನಗೋಡು ಗ್ರಾಪಂ ಮಾಜಿ ಅಧ್ಯಕ್ಷೆ ಎ.ಆರ್.ಸುಧಾಮಣಿ ಅವರ ಮನೆಗೆ ಶುಕ್ರವಾರ ಸಂಜೆ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ತಾಲೂಕಿನ ಹನಗೋಡಿನಲ್ಲಿರುವ ಮೃತರ ನಿವಾಸಕ್ಕೆ ತೆರಳಿದ ಅವರು, ಸುಧಾಮಣಿ ಅವರ ಪತಿ ಬಸವರಾಜ್, ಸೊಸೆ ಹಾಗೂ ಮೊಮ್ಮಗನಿಗೆ ಸಾಂತ್ವನ ಹೇಳಿದರು. ಬಳಿಕ ಮಾತನಾಡಿದ ಅವರು, ಕಳೆದ 30 ವರ್ಷಗಳ ಹಿಂದೆ ಸಾಕ್ಷರ ವಾಹಿನಿ ಮೂಲಕ ಸಮಾಜ ಸೇವೆಗೆ ಬಂದು ಹನಗೋಡು ಗ್ರಾಪಂ ಹಾಗೂ ಹಾರಂಗಿ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಬಳಿಕ ಗ್ರಾಪಂ ಪುನರ್ ವಿಂಗಡಣಾ ಸಮಿತಿ ಸದಸ್ಯೆಯಾಗಿ ಹತ್ತು ಹಲವು ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಲ್ಲದೇ ಸ್ಫೂರ್ತಿ ಸಂಸ್ಥೆ ಮೂಲಕ ಮೈಸೂರು ಜಿಲ್ಲಾ ರೈತರಿಗೆ ಅರಣ್ಯ ಇಲಾಖೆ ಸಹಯೋಗದಲ್ಲಿ ಉಚಿತ ಸಸಿಗಳನ್ನು ನೀಡುವ ಮೂಲಕ ಪರಿಸರ ಪ್ರೇಮಿಯಾಗಿ ಹೊರಹೊಮ್ಮಿದ್ದರು ಎಂದು ಸ್ಮರಿಸಿದ ಅವರು, ಸುಧಾಮಣಿ ಅವರ ಆತ್ಮಕ್ಕೆ ಶಾಂತಿ ಕೋರಿದರು.

ಈ ವೇಳೆ ಕುರುಬ ಸಮಾಜದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ಉಪಾಧ್ಯಕ್ಷ ಮಂಡ್ಯ ಮಹೇಶ್, ಕಾಯಕ ಸಮಾಜಗಳ ಅಧ್ಯಕ್ಷ ತೊಂಡಾಳು ಹೊನ್ನಪ್ಪ, ನಾಗರಾಜು, ಹನಗೋಡು ಮಂಡಲ ಪಂಚಾಯಿತಿ ಮಾಜಿ ಪ್ರಧಾನ ಹೆಚ್.ಕೆ.ಪ್ರಾಣೇಶ್ ಶೆಟ್ಟಿ, ಉದ್ಯಮಿ ಕೆ.ಪಿ.ದಿನೇಶ್, ಯುವ ಮುಖಂಡ ನಂದೀಶ್, ಉದ್ದೂರು ಮಹೇಶ್, ಇಮ್ತಿಯಾಜ್ ಪಾಷಾ ಸೇರಿದಂತೆ ಇತರರಿದ್ದರು.

ಮೈಸೂರಿನ ಪೊಲೀಸ್ ಭವನ ಮಾದರಿ ವಿಶ್ವಕರ್ಮ ಭವನ ನಿರ್ಮಾಣ

ಅಭಿನಂದನಾ ಸಮಾರಂಭದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ

ಹೆಚ್.ಡಿ.ಕೋಟೆ, ಮಾ.25– ಮೈಸೂರಿನ ಪೊಲೀಸ್ ಭವನ ಮಾದರಿ ಪಟ್ಟಣದಲ್ಲಿ ವಿಶ್ವಕರ್ಮ ಭವನ ನಿರ್ಮಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕೋಟೆ ಸರಗೂರು ತಾಲೂಕಿನ ವಿಶ್ವಕರ್ಮ ಸಮುದಾಯದಿಂದ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ತಂದೆ ದಿ.ಚಿಕ್ಕಮಾದು ಅವರು ಶಾಸಕರಾಗಿದ್ದ ವೇಳೆ ವಿಶ್ವಕರ್ಮ ಸಮುದಾಯದ ಮನವಿಗೆ ಸ್ಪಂದಿಸಿ ವಿಶ್ವಕರ್ಮ ಭವನ ನಿರ್ಮಾಣಕ್ಕೆ 5 ಗುಂಟೆ ಜಾಗವನ್ನು ಮಂಜೂರು ಮಾಡಿಸಿದ್ದರು. ನಾನು ಶಾಸಕನಾದ ಬಳಿಕ ಹೆಚ್ಚುವರಿಯಾಗಿ 7 ಗುಂಟೆ ಜಾಗ ಮಂಜೂರು ಮಾಡಿಸಿ ಒಟ್ಟು 12 ಗುಂಟೆ ಜಾಗದಲ್ಲಿ ಸುಂದರವಾದ ಬೃಹತ್ ಭವನ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದ್ದೆ. ಅದರಂತೆ ಮೈಸೂರಿನ ಪೊಲೀಸ್ ಭವನ ಮಾದರಿ ವಿಶ್ವಕರ್ಮ ಭವನ ನಿರ್ಮಿಸಿಕೊಡುವ ಸಂಪೂರ್ಣ ಜವಾಬ್ದಾರಿ ನನ್ನದು ಎಂದರು.



ಸಮುದಾಯದ ಪ್ರತಿಯೊಬ್ಬರೂ ಶಿಕ್ಷಣ ಪಡೆಯಲು ಮುಂದಾಗಬೇಕು. ಆ ಮೂಲಕ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡುವಂತೆ ಮನವಿ ಮಾಡಿದರು.

ನನಗೆ ಆಸ್ತಿ, ಹಣ ಮಾಡುವ ಆಸೆ ಇಲ್ಲ. ತಾಲೂಕಿನ ಅಭಿವೃದ್ಧಿಯೇ ನನ್ನ ಗುರಿ ಎಂದ ಅವರು, ನನ್ನ ಮೇಲೆ ವಿಶ್ವಕರ್ಮ ಸಮುದಾಯ ಇಟ್ಟಿರುವ ಪ್ರೀತಿ, ವಿಶ್ವಾಸಕ್ಕೆ ನಾನು ಋಣಿಯಾಗಿರುತ್ತೇನೆ ಎಂದರು.

ತಾಲೂಕು ವಿಶ್ವಕರ್ಮ ಸಮುದಾಯದ ಅಧ್ಯಕ್ಷ ಕುಲುಮೆ ರಾಜು ಮಾತನಾಡಿ, ತಾಲೂಕಿನ ವಿಶ್ವಕರ್ಮ ಸಮಾಜವನ್ನು ಯಾವ ಶಾಸಕರೂ ಗುರ್ತಿಸಿರಲಿಲ್ಲ. ಆದರೆ ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಅವರ ಪುತ್ರ ಶಾಸಕ ಅನಿಲ್ ಚಿಕ್ಕಮಾದು ಅವರು ನಮ್ಮ ಸಮಾಜಕ್ಕೆ 12 ಗುಂಟೆ ಜಾಗ ನೀಡಿ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗಿರುವುದು ಸಂತಸದ ವಿಷಯ ಎಂದರು.

ಇದೇ ವೇಳೆ ವಿಶ್ವಕರ್ಮ ಸಮುದಾಯದ ಮುಖಂಡರು ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮುಖಂಡರಾದ ಹೊಂಡಾ ನಯಾಜ್, ಗಣೇಶ್ ಆಚಾರ್, ಪ್ರದೀಪ್, ಕ್ಯಾತನಹಳ್ಳಿ ನಾಗರಾಜು, ನಾಗೇಶ್, ಸುರೇಶ್, ನಾಗಣ್ಣ, ಮಂಜುನಾಥ್, ಮುದ್ದಾಚಾರ್, ರಾಜಣ್ಣ, ರಾಮಕೃಷ್ಣ, ಮೂರ್ತಿ, ಬಸವರಾಜು, ಪ್ರಮೋದ್, ಸೋಮಣ್ಣ, ಅಶೋಕ್, ಸೌಮ್ಯ, ಪ್ರೇಮ್ ಸಾಗರ್, ರಾಜು, ವಿಶ್ವಕರ್ಮ ಸಮುದಾಯದ ಮುಖಂಡರು ಇದ್ದರು.

ಸದಾಶಿವ ಆಯೋಗದ ವರದಿ ಕೇಂದ್ರಕ್ಕೆ ಶಿಫಾರಸ್ಸು: ಸಂಭ್ರಮಾಚರಣೆ

ತಿ.ನರಸೀಪುರ, ಮಾ.25– ಕಳೆದ 3 ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ರಾಜ್ಯ ಬಿಜೆಪಿ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ಹಿನ್ನೆಲೆಯಲ್ಲಿ ತಾಲೂಕು ಬಾಬು ಜಗಜೀವನ ರಾಂ ಸಂಘಟನೆಗಳ ಒಕ್ಕೂಟದಿಂದ ಸಂಭ್ರಮಾಚರಣೆ ಮಾಡಲಾಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಮುದಾಯದ ಮುಖಂಡರು ಸಂಭ್ರಮಿಸಿದರು.

ಬಾಬು ಜಗಜೀವನ್ ರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹುಣಸೂರು ಪುಟ್ಟಯ್ಯ ಮಾತನಾಡಿ, ಕಳೆದ 30 ವರ್ಷಗಳಿಂದ ಮೀಸಲಾತಿಗಾಗಿ ಹೋರಾಟ ನಡೆದಿತ್ತು. ಆದರೆ ಬಿಜೆಪಿ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಪರಿಷ್ಕರಿಸಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ.



ಮೀಸಲಾತಿ ಪರಿಷ್ಕರಣೆ ಪ್ರಕಾರ ದಲಿತ ಎಡಗೈ ಸಮುದಾಯ ಒಳಗೊಂಡಂತೆ ಜಾತಿಗಳಿಗೆ ಶೇ.6, ಬಲಗೈ ಸಮುದಾಯವನ್ನು ಒಳಗೊಂಡ ಜಾತಿಗಳಿಗೆ ಶೇ.5.5, ಬಂಜಾರ, ಬೋವಿ ಇತರೆ ವರ್ಗಕ್ಕೆ ಶೇ.4.5 ಮತ್ತು ಅಲೆಮಾರಿ ಜನಾಂಗಕ್ಕೆ ಶೇ.1ರಷ್ಟು ಮೀಸಲಾತಿ ವರ್ಗೀಕರಣ ಮಾಡಿ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಎಂದರು.

ಸದಾಶಿವ ಆಯೋಗದ ವರದಿ ಶಿಫಾರಸ್ಸು ಮಾಡಲು ನಿರಂತರ ಹೋರಾಟ ನಡೆಸಿದ ದಲಿತ ಎಡಗೈ ಸಮುದಾಯದ ಬಸವ ಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶಾಸಕರು, ಸಂಸದರು ಮತ್ತು ಬಲಗೈ, ಬೋವಿ, ಲಂಬಾಣಿ ಸಮುದಾಯಗಳ ಶಾಸಕರು, ಸಂಸದರಿಗೆ ಕೃತಜ್ಞತೆ ಸಲ್ಲಿಸಿದರು.

ಮಾಜಿ ಅಧ್ಯಕ್ಷ ಮೂಗೂರು ಸಿದ್ದರಾಜು ಮಾತನಾಡಿದರು. ಈ ವೇಳೆ ಬಾಬು ಜಗಜೀವನ ರಾಂ ಸಂಘದ ಉಪಾಧ್ಯಕ್ಷ ಶಿವಣ್ಣ, ಕೆ.ಶಿವಶಂಕರ್, ಪ್ರಧಾನ ಕಾರ್ಯದರ್ಶಿ ವಾಟಾಳು ಪುಟ್ಟಸ್ವಾಮಿ, ಕಾರ್ಯದರ್ಶಿ ವಿ.ಎಸ್.ಶಿವಕುಮಾರ್, ಲಿಂಗರಾಜು, ಜಯಪ್ಪ ಖಜಾಂಚಿ ಬಿ.ಎಲ್. ಮಹದೇವ, ನಾಗರಾಜು, ಸಹ ಕಾರ್ಯದರ್ಶಿ ಸುನೀಲ್, ಹೆಚ್.ನಾಗರಾಜು, ಪುರಸಭೆ ಸದಸ್ಯ ಎಲ್.ಮಂಜುನಾಥ್, ರಂಗಸ್ವಾಮಿ, ಆರ್.ನಾಗಣ್ಣ, ಲಿಂಗರಾಜು, ಸಿದ್ದರಾಜು, ಚಿನ್ನಸ್ವಾಮಿ, ರಾಚಪ್ಪ ಬಾಲು, ಬಾಲರಾಜು, ದಿಲೀಪ್, ಶಿವಣ್ಣ, ಕಿರಣ್, ಮಹದೇವ, ರಾಜೇಶ್, ರಜನಿರಾಜ್, ನಿಂಗಪ್ಪ ದೇವಣ್ಣ, ಸಿದ್ದರಾಜು, ಸೋಮಣ್ಣ, ಲಿಂಗರಾಜು ಮತ್ತು ವಿವಿಧ ಗ್ರಾಮದ ಮುಖಂಡರು ಹಾಜರಿದ್ದರು.

ಹುಣಸೂರು ಪೌರಾಯುಕ್ತರಾಗಿ ಎಸ್.ಎಂ.ಸುಜಯ್ ಕುಮಾರ್ ನೇಮಕ



ಹುಣಸೂರು, ಮಾ.25– ಇಲ್ಲಿನ ನಗರಸಭೆ ಪೌರಾಯುಕ್ತರಾಗಿ ಎಸ್.ಎಂ.ಸುಜಯ್ ಕುಮಾರ್ ಅವರನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ್ ಆದೇಶ ಹೊರಡಿಸಿದ್ದಾರೆ.

ಕಳೆದ 18 ದಿನಗಳ ಹಿಂದಷ್ಟೇ ಹುಣಸೂರು ನಗರಸಭೆ ಪೌರಾಯುಕ್ತರಾಗಿ ನೇಮಕಗೊಂಡಿದ್ದ ಮಂಜುನಾಥ್ ಅವರನ್ನು ಬೇಲೂರು ಪುರಸಭೆ ಮುಖ್ಯಾಧಿಕಾರಿಯಾಗಿ ವರ್ಗಾವಣೆ ಮಾಡಿ, ಅವರಿಂದ ತೆರವಾದ ಸ್ಥಾನಕ್ಕೆ ಬೇಲೂರು ಪುರಸಭೆ ಮುಖ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸುಜಯ್ ಕುಮಾರ್ ಅವರನ್ನು ನಿಯೋಜಿಸಲಾಗಿದ್ದು, ಮಾ.27ರಂದು ಸೋಮವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಜೆಡಿಎಸ್ ವಕ್ತಾರರಾಗಿ ನೇಮಕ



ಹುಣಸೂರು, ಮಾ.25– ಜೆಡಿಎಸ್ ಪಕ್ಷದ ರಾಜ್ಯ ವಕ್ತಾರರನ್ನಾಗಿ ತಾಲೂಕಿನ ಕೆಂಚನಕೆರೆ ಹೊಸಕೋಟೆಯ ಪ್ರೊ.ಹರ್ಷವರ್ಧನ್ ರಮೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಿರಿಯಾಪಟ್ಟಣದಲ್ಲಿ ನಡೆದ ವೀರಶೈವ ಲಿಂಗಾಯತ ಸಮಾಜದ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಗೆ ಆಗಮಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಅವರನ್ನು ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ ಅಭಿನಂದಿಸಿದರು. ಈ ವೇಳೆ ಮೈಸೂರು ಜಿಲ್ಲಾ ವಿದ್ಯಾರ್ಥಿ ಘಟಕದ ಮಾಜಿ ಅಧ್ಯಕ್ಷ ಧರ್ಮ, ಮಂಜುನಾಥ್, ಗುಲ್ಬರ್ಗ ನಗರಪಾಲಿಕೆ ಮಾಜಿ ಮಹಾಪೌರ ಶಿವಶರಣ ಮೋದಿ ಸೇರಿದಂತೆ ಇನ್ನಿತರರಿದ್ದರು.


ನೇಮಕ



ಹುಣಸೂರು, ಮಾ.25– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವ ಕುಮಾರ್ ಆದೇಶದ ಮೇರೆಗೆ ಹುಣಸೂರಿನ ಹೆಚ್.ಎಸ್.ಸ್ವರೂಪ್ ಶಿವಯ್ಯ ಅವರನ್ನು ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ತಿಳಿಸಿದ್ದಾರೆ.

ದೇವೇಗೌಡರಿಂದ ಸಾಲಿಗ್ರಾಮ ವ್ಯಾಪ್ತಿಗೆ ನೀರಾವರಿ ಸೌಲಭ್ಯ

ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಶಾಸಕ ಸಾ.ರಾ.ಮಹೇಶ್



> ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾವು ಸಮಾಜವಾದಿಗಳೆಂದು ಹೇಳಿಕೊಳ್ಳುತ್ತಾರೆ. ಜನರು ಇದನ್ನು ನಂಬಬಾರದು. ನಿಜವಾದ ಸಮಾಜವಾದಿಗಳೆಂದರೆ ಸಿದ್ದೇಶ್ವರ ಸ್ವಾಮಿಗಳು. ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ರಾಜ್ಯದ ಜನರ ಮೇಲೆ ತಲಾ ಒಂದು ಲಕ್ಷ ಸಾಲ ಹೊರಿಸಿದ್ದಾರೆ. ರಾಜ್ಯದಲ್ಲಿ ಜೆಡಿಎಸ್ ಪರ ಅಲೆ ಎದ್ದಿದ್ದು, ಪ್ರಾದೇಶಿಕ ಪಕ್ಷ ಜೆಡಿಎಸ್ ಅಧಿಕಾರಕ್ಕೆ ಬಂದು ಕುಮಾರಣ್ಣ ಮುಖ್ಯಮಂತ್ರಿಯಾಗುತ್ತಾರೆ
> - ಸಾ.ರಾ.ಮಹೇಶ್, ಶಾಸಕ

ಭೇರ್ಯ, ಮಾ.25– ಸಾಲಿಗ್ರಾಮ, ಮೇಲೂರು, ಹರದನಹಳ್ಳಿ, ತಂದ್ರೆ ಸೇರಿದಂತೆ ಈ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಭೇರ್ಯ ಗ್ರಾಮದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೋಸ್ಕರ ಏನಾದರೂ ಯೋಜನೆ ರೂಪಿಸಿದ್ದರೇ ಅದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಎಂದ ಅವರು, ಅವಳಿ ತಾಲೂಕಿನ ಅಭಿವೃದ್ಧಿಗಾಗಿ ನಿತ್ಯ ಟಿಫನ್ ಬಾಕ್ಸ್‌ನಲ್ಲಿ ಊಟ ತಂದು ಜನರ ಸೇವೆ ಮಾಡುತ್ತಿದ್ದೇನೆ. ನೀವೇನೂ ಮಾಡಿದ್ದೀರಿ ಎಂದು ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರನ್ನು ಟೀಕಿಸಿದರು.

5 ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರಲ್ಲ ಆ ವೇಳೆ ಭೇರ್ಯ, ಸಾಲಿಗ್ರಾಮ ಮುಂತಾದ ಗ್ರಾಮಗಳಿಗೆ ಏಕೆ ಅನುದಾನ ತಂದು ಅಭಿವೃದ್ಧಿ ಮಾಡಲಿಲ್ಲ. 2 ಬಾರಿ ಸೋತಿದ್ದೇವೆ ಎಂದು ಜನರ ಕಾಲಿಗೆ ಬೀಳುತ್ತಿದ್ದೀರಲ್ಲ ಅದಲ್ಲ ಅನುಕಂಪ. ನಿಜವಾದ ಅನುಕಂಪ ಇರುವುದು ಮೊನ್ನೆ ನಿಧನರಾದ ಆರ್.ಧ್ರುವನಾರಾಯಣ್ ಅವರ ಕುಟುಂಬಕ್ಕೆ ಎಂದ ಶಾಸಕ ಸಾ.ರಾ.ಮಹೇಶ್, ಭೇರ್ಯ ಗ್ರಾಪಂ ಅಧ್ಯಕ್ಷೆಯಾಗಬೇಕಿದ್ದ ಮಡಿವಾಳ ಸಮಾಜದ ಮಹಿಳೆಗೆ ಅಧ್ಯಕ್ಷ ಸ್ಥಾನ ತಪ್ಪಿಸಿ, ನಿಮ್ಮ ನೆಂಟರಿಗೆ ಅಧ್ಯಕ್ಷ ಸ್ಥಾನ ಕೊಡಿಸುವ ಮೂಲಕ ಸೂಕ್ಷ್ಮಾತಿಸೂಕ್ಷ್ಮ ಸಮಾಜಕ್ಕೆ ಅನ್ಯಾಯ ಮಾಡಿದ್ದೀರಾ ಎಂದು ಡಿ.ರವಿಶಂಕರ್ ವಿರುದ್ಧ ಗುಡುಗಿದರು.

ಸಿದ್ದರಾಮಯ್ಯ ತಮ್ಮ ಅಧಿಕಾರವಧಿಯಲ್ಲಿ ಗೃಹಿಣಿಯರಿಗೆ 2 ಸಾವಿರ, ಮನೆಗಳಿಗೆ ಉಚಿತ ವಿದ್ಯುತ್ ಕೊಡಲಿಲ್ಲ. ಇವರು ಹೇಳುವುದೆಲ್ಲ ಸುಳ್ಳು, ಜನರು ನಂಬಬೇಡಿ. ನನಗೂ ಸಿದ್ದರಾಮಯ್ಯನವರ ಬಗ್ಗೆ ಗೌರವ ಇದೆ. ಆದರೆ ರಾಜ್ಯದಲ್ಲಿ ಮುಖ್ಯಮಂತ್ರಿಯನ್ನು 36 ಸಾವಿರ ಅಂತರದ ಮತಗಳಿಂದ ಸೋಲಿಸಿದ್ದಾರೆ ಎಂದರೆ ಅದು ಸಿದ್ದರಾಮಯ್ಯ ಎಂದರು.

ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಜಿಪಂ ಮಾಜಿ ಉಪಾಧ್ಯಕ್ಷ ಚೆನ್ನಬಸಪ್ಪ ತಾ.ಜೆಡಿಎಸ್ ಅಲ್ಪಸಂಖ್ಯಾತ ಅಧ್ಯಕ್ಷ ಮುಶೀರ್ ಅಹಮದ್ ಮಾತನಾಡಿದರು. ಇದಕ್ಕೂ ಮುನ್ನಾ ಅರ್ಜುನ ಹಳ್ಳಿಯ ಹಾಸನ–ಮೈಸೂರು ಹೆದ್ದಾರಿಯಲ್ಲಿ ಸಾವಿರಾರು ಬೈಕ್ ರ‍್ಯಾಲಿಗೆ ಶಾಸಕ ಸಾ.ರಾ. ಮಹೇಶ್ ಚಾಲನೆ ನೀಡಿದರು. ನಂತರ ಭೇರ್ಯಕ್ಕೆ ಆಗಮಿಸಿದಾಗ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಅಭೂತಪೂರ್ವ ಸ್ವಾಗತ ಕೋರಿ, ತೆರದ ವಾಹನದಲ್ಲಿ ಮೆರವಣಿಗೆ ಮೂಲಕ ಗ್ರಾಮದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ದೇವಸ್ಥಾನದಲ್ಲಿ 4ನೇ ಬಾರಿಗೆ ಗೆಲುವಿಗೆ ವಿಶೇಷ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡರು.

ಈ ವೇಳೆ ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಎಸ್.ಪಿ.ರಾಜಣ್ಣ, ಉಪಾಧ್ಯಕ್ಷ ತುಕಾರಂ, ದಲಿತ ಮುಖಂಡ ನಾಗರಾಜ್, ಪುರಸಭೆ ಸದಸ್ಯರಾದ ಸಂತೋಷ್‌ಗೌಡ, ಉಮೇಶ್, ತಾ.ಯುವ ಜೆಡಿಎಸ್ ಅಧ್ಯಕ್ಷ ಡಿ.ಎಸ್.ಯೋಗೇಶ್, ಗ್ರಾಪಂ ಮಾಜಿ ಅಧ್ಯಕ್ಷ ಅನೀಗೌಡ, ಗ್ರಾಪಂ ಅಧ್ಯಕ್ಷೆ ಉಮಾ, ಉಪಾಧ್ಯಕ್ಷೆ ಶೋಭಾ, ಸದಸ್ಯರಾದ ಬಿ.ಕೆ.ಕುಮಾರ್, ಶಿವಕುಮಾರ್, ಮಂಚೇಗೌಡ, ಬೇಬಿ, ಸಾರಾ ಯುವಸೇನೆ ತಾ.ಅಧ್ಯಕ್ಷ ಬಂಡೆಕುಮಾರ್, ಜೆಡಿಎಸ್ ಮುಖಂಡರಾದ ಪರ್ವೀಜ್, ತನು, ಸೋಮು, ಮಹೇಶ ನಾಯಕ, ಆಟೋ ಯೋಗಾ, ಕರಿಮಹೇಶ್, ಡ್ರೈವಿ ಲೋಕೇಶ್, ಜುನೇದ್, ಚಿದಂಬರನಾಯಕ, ಡಿವಿ ಗುಡಿ ಕಾಶಿ, ರಾಜಯ್ಯ, ಸಂತೋಷ್, ಪ್ರಸನ್ನ, ತುಳಿಸಿ, ಹರೀಶ್ ಇತರರಿದ್ದರು.

ಸ್ವಾವಲಂಬಿ ಬದುಕಿಗೆ ಗುಡಿ ಕೈಗಾರಿಕೆಗಳ ಅಭಿವೃದ್ಧಿ ಅವಶ್ಯಕ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯ



> ವೃತ್ತಿ ಕೌಶಲ್ಯವಿದ್ದರೂ ಪ್ರಸ್ತುತ ಕುಂಬಾರಿಕೆ ಕ್ಷೀಣಿಸುತ್ತಿದ್ದು, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿಯೂ ಹಿನ್ನಡೆಯಾಗುತ್ತಿದೆ. ಹಾಗಾಗಿ ಹಿಂದುಳಿದ ಕುಂಬಾರ ಸಮುದಾಯ ಸಂಘಟಿತರಾಗಿ ಎಲ್ಲಾ ಕ್ಷೇತ್ರಗಳಲ್ಲೂ ಪ್ರಾಮುಖ್ಯತೆ ಪಡೆಯಬೇಕು.
> - ಎಂ.ಅಶ್ವಿನ್ ಕುಮಾರ್, ಶಾಸಕ.

ತಿ.ನರಸೀಪುರ, ಮಾ.25– ಸ್ವಾವಲಂಬಿ ಬದುಕಿಗೆ ಕುಂಬಾರಿಕೆಯಂತಹ ಗುಡಿ ಕೈಗಾರಿಕೆಗಳ ಅಭಿವೃದ್ಧಿ ಅವಶ್ಯಕವಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಗುಡಿ ಕೈಗಾರಿಕೆಗಳು ಪೈಪೋಟಿ ನಡೆಸಲು ಕೌಶಲ್ಯ ಹಾಗೂ ನೈಪುಣ್ಯತೆ ತರಬೇತಿ ಅಗತ್ಯವಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ತಾಲೂಕಿನ ಕೇತಹಳ್ಳಿಯಲ್ಲಿ ಶ್ರೀಬಸವೇಶ್ವರ ಕುಂಬಾರರ ಯುವಕರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಬಸವೇಶ್ವರರ ಹೆಸರಲ್ಲಿ ಸಂಘ ಉದ್ಘಾಟನೆಗೊಳ್ಳುತ್ತಿರುವುದು 12ನೇ ಶತಮಾನ ನೆನಪಿಸುತ್ತಿದೆ. ನಾಡಿನಲ್ಲಿ ಸರ್ವಜ್ಞರಿಗಿಂತ ಮೇಧಾವಿ, ಜ್ಞಾನಿ ಮತ್ತೊಬ್ಬರಿಲ್ಲ. ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಯುಪಿಎ ಕೇಂದ್ರ ಸರ್ಕಾರ ಕೌಶಲ್ಯ ತರಬೇತಿಗೆ ವಿಶೇಷ ಯೋಜನೆ ರೂಪಿಸಿದರೆ, ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರವಿದ್ದಾಗ ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಡಲಾಗಿತ್ತು ಎಂದರು.

ಸಂವಿಧಾನ ದೇಶದ 141 ಕೋಟಿ ಜನರ ಹಕ್ಕನ್ನು ರಕ್ಷಿಸುತ್ತಿದ್ದರೂ, ಪ್ರಸ್ತುತ ರಾಜಕೀಯ ಅಧಿಕಾರ ದುಡ್ಡಿರುವವರ ಹಿಡಿತದಲ್ಲಿದೆ. ಹಣದ ಶಕ್ತಿಯಿಂದ ರಾಜಕೀಯ ನಿಯಂತ್ರಣ ಮಾಡಿದರೆ ಸಾಮಾನ್ಯ ಜನರ ಬದುಕಿಗೆ ತೀವ್ರ ನಷ್ಟವಾಗಲಿದೆ. ವಾಕ್ ಸ್ವಾತಂತ್ರ್ಯ ಹತ್ತಿಕ್ಕಿದರೆ ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಗಂಡಾಂತರ ಎದುರಾಗಲಿದೆ. ಜನಪರ ಮತ್ತು ಅಭಿವೃದ್ಧಿ ಕೆಲಸ ಮಾಡದವರಿಗೆ ಅಧಿಕಾರ ಕೊಟ್ಟರೆ ನಾವು ಇದ್ದು ಇಲ್ಲದಂತಾಗಿ ಬಿಡುತ್ತೇವೆ. ಜನರು ಜಾಗೃತರಾಗಿ ಯೋಗ್ಯತೆ, ವಿವೇಚನೆಯುಳ್ಳವರ ಕೈಗೆ ಅಧಿಕಾರ ಕೊಡಬೇಕು. ಹಕ್ಕುಗಳಿಗಾಗಿ ಶೋಷಿತ ಮತ್ತು ಹಿಂದುಳಿದ ಜನ ಸಮುದಾಯ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ಕ್ರೆಡಿಟ್ ಐ ಸಂಸ್ಥೆ ಕಾರ್ಯ ನಿರ್ವಾಹಕ ಎಂ.ಪಿ.ವರ್ಷ ಮಾತನಾಡಿದರು. ಇದಕ್ಕೂ ಮುನ್ನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಧರೆಗೆ ದೊಡ್ಡವರ ಮಠದ ರಾಜ ಪ್ರಭುಸ್ವಾಮಿ ಶ್ರೀಗಳನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಶ್ರೀಕುಲಾಲಗುಂಡ ಬ್ರಹ್ಮಾರ್ಯ ಕುಂಬಾರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಎಸ್.ಪ್ರಕಾಶ್, ಶಾಲಿವಾಹನ ಸಹಕಾರ ಸಂಘದ ಅಧ್ಯಕ್ಷ ಕೆ.ಸಿ.ವೆಂಕಟೇಶ್, ಹಿರಿಯ ಸಾಹಿತಿ ಕೆ.ಆರ್.ಷಣ್ಮುಖಸ್ವಾಮಿ ಹಾಗೂ ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ ಮಾತನಾಡಿದರು.

ನಿವೃತ್ತ ವೈದ್ಯಾಧಿಕಾರಿ ಡಾ.ಗೋವಿಂದಶೆಟ್ಟಿ, ನಿವೃತ್ತ ಎಎಸ್‌ಐ ಬಸವಯ್ಯ, ಜಿಲ್ಲಾ ನಿರ್ದೇಶಕ ತಲಕಾಡು ಚಂದ್ರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಜಿಪಂ ಮಾಜಿ ಸದಸ್ಯ ಜಯಪಾಲ ಭರಣಿ, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಉಮೇಶ್, ಬಿಜೆಪಿ ಮುಖಂಡ ಬಾಲಕೃಷ್ಣ, ಗ್ರಾಪಂ ಅಧ್ಯಕ್ಷೆ ಮಮತ, ಉಪಾಧ್ಯಕ್ಷ ಕೆ.ಬಿ.ಜಗದೀಶ್, ಸದಸ್ಯರಾದ ಮಂಜುಳಾ, ರೇವಣ್ಣ, ನಂದಿನಿ, ಡೇರಿ ಅಧ್ಯಕ್ಷ ಸೋಮಣ್ಣ, ಕಾಂಗ್ರೆಸ್ ಮುಖಂಡ ಸಿದ್ದಶೆಟ್ಟಿ, ತಾಲೂಕು ಅಧ್ಯಕ್ಷ ರಮೇಶ್, ಗೌರವಾಧ್ಯಕ್ಷ ಎಂ.ರಾಜಣ್ಣ, ಅಧ್ಯಕ್ಷ ಬಿ.ನಾಗರಾಜು, ನಾಡಗೌಡ ಕೆ.ಬಿ. ಶಾಂತಮೂರ್ತಿ, ಉಪಾಧ್ಯಕ್ಷ ಮಲ್ಲೇಶ್, ಕಾರ್ಯದರ್ಶಿ ನಂಜುಂಡಸ್ವಾಮಿ, ಸಂಘಟನಾ ಕಾರ್ಯದರ್ಶಿ ಉಮೇಶ್, ಸಹ ಕಾರ್ಯದರ್ಶಿ ರಾಜಶೆಟ್ಟಿ, ಖಜಾಂಚಿ ಶಿವಮಲ್ಲು, ನಿರ್ದೇಶಕರಾದ ನಾಗರಾಜು, ಮಾಯಪ್ಪ, ರಾಮು, ಮಲ್ಲೇಶ್, ಮಂಜು, ಕುಮಾರ, ರೇವಣ್ಣ, ಶ್ರೀನಿವಾಸ, ಸುರೇಶ, ಮುಖಂಡರಾದ ನಂಜೇಗೌಡ, ಶಿವಬಸಪ್ಪ, ಲಿಂಗಪ್ಪ, ಸಿದ್ದನಾಯಕ, ಮಹದೇವನಾಯಕ, ಸುಂದರನಾಯಕ, ಕಿಕ್ಕೇರಿ ಶೆಟ್ಟಿ, ರೇವಣ್ಣ, ಸಿದ್ದಯ್ಯ, ಮಹದೇವಶೆಟ್ಟಿ ಗುರುಲಿಂಗಶೆಟ್ಟಿ, ಪುಟ್ಟಸಿದ್ದಶೆಟ್ಟಿ, ನಾಗರಾಜು, ಗೌರಯ್ಯ ಇನ್ನಿತರರಿದ್ದರು.

ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ (ನೋಂ)

ಸನ್ಮಾರ್ಗ, 2ನೇ ಹಂತ, ಸಿದ್ಧಾರ್ಥನಗರ, ಮೈಸೂರು – 570 011

2023ನೇ ಸಾಲಿನ ಆಡಳಿತ ಮಂಡಳಿಯ ಚುನಾವಣೆ

ಮಾನ್ಯ ಕ್ಲಬ್ಬಿನ ಸದಸ್ಯರೇ,

ದಿನಾಂಕ 26–03–2023ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಈ ಕೆಳಕಂಡ ನಾವುಗಳು ಸ್ಪರ್ಧಿಸಿರುತ್ತೇವೆ. ಈ ತಂಡಕ್ಕೆ ತಮ್ಮ ಅತ್ಯಮೂಲ್ಯವಾದ ಮತ ಚಲಾಯಿಸುವುದರ ಮೂಲಕ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಆಡಳಿತ ಮಂಡಳಿ ಪದಾಧಿಕಾರಿಗಳ ಉಮೇದುವಾರರು

ಕ್ರ.ಸಂ.	ಅಭ್ಯರ್ಥಿಯ ಹೆಸರು	ಚಿಹ್ನೆ
	ಸಿ.ವೆಂಕಟಪ್ಪ (ಅಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ)	
2	ಹೆಚ್.ಎಸ್. ಮುಟ್ಟಸ್ವಾಮಿ (ಉಪಾಧ್ಯಕ್ಷರ ಸ್ಥಾನಕ್ಕೆ)	
5	ಎಂ. ಸುರೇಶ್‌ಗೌಡ (ಗೌರವ ಕಾರ್ಯದರ್ಶಿ)	
7	ಡಾ। ಎ.ಎಸ್. ರಾಜೇಗೌಡ (ಜಂಟಿ ಕಾರ್ಯದರ್ಶಿ)	
8	ಎಸ್. ನಾಗರಾಜು (ಬುಲೆಟ್) (ಖಜಾಂಚಿ)	

ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಉಮೇದುವಾರರು

ಕ್ರ.ಸಂ.	ಅಭ್ಯರ್ಥಿಯ ಹೆಸರು	ಚಿಹ್ನೆ
1	ಈರಣ್ಣ ಆರ್	
3	ಕೆಂಪೇಗೌಡ	
5	ಬಿ.ಎಲ್. ಗುರುಲಿಂಗೇಗೌಡ	
6	ಎಂ.ಆರ್. ನಾಗರಾಜು	
7	ಎಸ್. ನಾಗರಾಜು (ಸಪ್ಲರ್)	
8	ಎಸ್.ಜೆ. ನಾಗರಾಜು (ರಾಮ್ಮ)	
9	ಟಿ.ಸಿ.ನಾಗರಾಜು	
10	ಡಾ||. ಪ್ರಕಾಶ್	

ಸಮಯ : ಬೆಳಗ್ಗೆ 8–00 ರಿಂದ ಮಧ್ಯಾಹ್ನ 12–00 ಗಂಟೆಯವರೆಗೆ

ಸ್ಥಳ : ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಆವರಣ ಮೈಸೂರು

ವಿಶೇಷ ಸೂಚನೆ : ಸದಸ್ಯರು ಮತದಾನಕ್ಕೆ ತಮ್ಮ ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ವಿನಂತಿ

